ಕರ್ನಾಟಕ ವಿಧಾನ ಸಭೆ

ಬುಧವಾರ 18ನೇ ಮಾರ್ಚಿ 1998ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-34 ಗಂಟೆಗೆ

ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ರಮೇಶ್ ಕುಮಾರ್) ಅವರು,

ಪೀಠವನ್ನು ಅಲಂಕರಿಸಿದ್ದರು.

ಆಯವ್ಯಯ ಮಂಡನೆ

1998-99ನೇ ಸಾಲಿನ ಆಯವ್ಯಯದ ಮಂಡನೆ

ಅಧ್ಯಕ್ಷರು:- ಮಾನ್ಯ ಹಣಕಾಸಿನ ಸಚಿವರಾದ ಶ್ರೀ ಸಿದ್ದರಾಮಯ್ಯನವರು 1998-99ನೇ ಸಾಲಿನ ಆಯವ್ಯಯವನ್ನು ಮಂಡಿಸುವುದು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ):- ಅಧ್ಯಕ್ಷರೆ, ಈ ಆಯವ್ಯಯ ಒಂದು ರೀತಿ ಕೃತಕವಾಗಿರುತ್ತದೆ. ಇದರ ಬಗ್ಗೆ ನನ್ನದು ಏನೂ ತಕಾರಾರು ಇಲ್ಲ .... ವೈಯಕ್ತಿಕವಾಗಿ ಅವರ ಬಗ್ಗೆ ಗೌರವ ಇದೆ ... 300 ಕೋಟಿ ರೂಪಾಯಿ ಅಬಕಾರಿ ಇಲಾಖೆಯಿಂದ ಸಾಲ ಬರಬೇಕಾಗಿದೆ. ಅದನ್ನು ವಸೂಲಿ ಮಾಡುವುದಕ್ಕೆ ಆಗಿಲ್ಲ ... ಗ್ರಾನೈಟ್ ಲೂಟಿ ನಡೆಯುತ್ತಿದೆ ... ಸಾವಿರಾರು ಕೋಟಿ ರೂಪಾಯಿ ಹೊರಗಡೆ ಇರುವಾಗ ಈ ಆಯವ್ಯಯ ಮಾಡತಕ್ಕದ್ದು .....

(ಗೊಂದಲ)

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ತಮ್ಮದೇ ಆದ ಭಾಷಣವನ್ನು ಓದುತ್ತಿದ್ದರು)

ಶ್ರೀ ಸಿದ್ದರಾಮಯ್ಯ (ಹಣಕಾಸಿನ ಸಚಿವರು):- ಸನ್ಮಾನ್ಯ ಸಭಾಧ್ಯಕ್ಷರೆ,

1. ನಾನು 1998-99ನೇ ಸಾಲಿನ ಆಯವ್ಯಯದ ಅಂದಾಜುಗಳನ್ನು ಮಂಡಿಸುತ್ತಿದ್ದೇನೆ.

2. 1997-98 ಅನೇಕ ಘಟನಾವಳಿಗಳ ವರ್ಷ. ಈ ವರ್ಷ ಭಾರತವು ತನ್ನ ಸ್ವಾತಂತ್ರ್ಯದ ಚಿನ್ನದ ಹಬ್ಬವನ್ನು ಆಚರಿಸಿತು. ಇದರ ಅಂಗವಾಗಿ ಕರ್ನಾಟಕವು ಬಡಜನತೆಯ ಕಲ್ಯಾಣಕ್ಕೆ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿತು ...

ಅಧ್ಯಕ್ಷರು:- ಮಾನ್ಯ ಹಣಕಾಸಿನ ಸಚಿವರೇ ಒಂದು ನಿಮಿಷ ... ಮಾನ್ಯ ವಾಟಾಳ್ ನಾಗರಾಜ್‌ರವರೇ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಹಣಕಾಸಿನ ಸಚಿವರು ಆಯವ್ಯಯ ಭಾಷಣವನ್ನು ಓದುವ ವೇಳೆಯಲ್ಲಿ ತಾವು ಇನ್ನೊಂದು ಭಾಷಣವನ್ನು ಓದಿದರೆ ಇತರೇ ಸದಸ್ಯರಿಗೆ ಹಣಕಾಸಿನ ಸಚಿವರು ಏನು ಹೇಳುತ್ತಿದ್ದಾರೆಂಬುದು ಸರಿಯಾಗಿ ಕೇಳುವುದಕ್ಕೆ ಆಗುವುದಿಲ್ಲ. ಮೊನ್ನೆ ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ಕೂಡ ಕೆಲವು ಸದಸ್ಯರು ನನಗೆ ಬಂದು ಹೇಳಿದ್ದಾರೆ. ಆಕ್ಷೇಪಣೆ ಎತ್ತಿದ್ದಾರೆ. ಅವರ ಹಕ್ಕಿನ ಉಲ್ಲಂಘನೆಯಾಗುತ್ತದೆ. ದಯಮಾಡಿ

ತಾವು ಸಹಕರಿಸಬೇಕು ದಯಮಾಡಿ ತಾವು ಕುಳಿತುಕೊಳ್ಳಿ. ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ, ದಯಮಾಡಿ ಸಹಕರಿಸಿ. ಭಾಷಣದ ನಂತರ ತಾವು ಹೇಳಬೇಕಾಗಿರುವುದನ್ನು ಹೇಳಬಹುದು. ಹೊಸ ಪದ್ಧತಿಗೆ ಅವಕಾಶ ಕೊಡುವುದು ನನಗೆ ಇಷ್ಟವಿಲ್ಲ. ಮಾನ್ಯ ಸಚಿವರೆ, ತಾವು ಭಾಷಣ ಮುಂದುವರೆಸಿ ...

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಆಯವ್ಯಯ ಭಾಷಣವನ್ನು ವಿರೋಧಿಸಿ ಸದನದ ಬಾವಿಗೆ ಬಂದು ಕುಳಿತರು)

ಶ್ರೀ ಸಿದ್ದರಾಮಯ್ಯ:- "ರಾಜ್ಯದ ಆಡಳಿತಯಂತ್ರ ಲೋಕಸಭಾ ಚುನಾವಣಾ ಸಿದ್ಧತೆ ಕಾರ್ಯದಲ್ಲಿ ತೊಡಗಿದ್ದಾಗಲೂ ಸಹ, ಸರ್ಕಾರದ ಕಾರ್ಯಕ್ರಮಗಳ ಅನುಷ್ಠಾನ ತೃಪ್ತಿಕರವಾಗಿತ್ತು. ಕರ್ನಾಟಕದಲ್ಲಿ ಲೋಕಸಭಾ ಚುನಾವಣೆಗಳು ಶಾಂತಿಯುತವಾಗಿ ನಡೆದಿವೆಂದು ಹೇಳಲು ನನಗೆ ಹೆಮ್ಮೆಯೆನಿಸುತ್ತದೆ. ಈ ಚುನಾವಣೆಯನ್ನು ಶಾಂತಿಯುತವಾಗಿ ಹಾಗೂ ಯಶಸ್ವಿಯಾಗಿ ನಡೆಸಲು ಕಾರಣರಾದ ರಾಜ್ಯದ ಜನತೆಯನ್ನು ನಾನು ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನರು ತಮ್ಮ ಹೆಚ್ಚುತ್ತಿರುವ ಆಸೆ, ಆಕಾಂಕ್ಷೆಗಳನ್ನು ಚುನಾವಣೆಗಳಲ್ಲಿ ವ್ಯಕ್ತಿಪಡಿಸಿರುತ್ತಾರೆ. ಜನರ ಈ ಭಾವನೆಗಳನ್ನು ನಾವು ಗೌರವಿಸುತ್ತೇವೆ. ಹಾಗೂ ಅವರ ನಿರೀಕ್ಷೆಯ ಮಟ್ಟಕ್ಕೆ ಏರಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇವೆ."

3. ರಾಷ್ಟ್ರದಲ್ಲಿನ ರಾಜಕೀಯ ಮತ್ತು ಆರ್ಥಿಕ ಕಾರಣಗಳಿಂದಾಗಿ ಕೈಗಾರಿಕಾ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆ ಸಮಾಧಾನವಾಗಿಲ್ಲ. ಆದಾಯ ಉತ್ಪತ್ತಿ ಹಾಗೂ ಬಂಡವಾಳ ಹೂಡಿಕೆ ಸಮಾಧಾನವಾಗಿಲ್ಲ. ಆದಾಯ ಉತ್ಪತ್ತಿ ಹಾಗೂ ಬಂಡವಾಳ ಹೂಡಿಕೆ ಪ್ರಮುಖವಾಗಿ ಕೈಗಾರಿಕಾ ಚಟುವಟಿಕೆಯನ್ನು ಅವಲಂಬಿಸಿದೆ. ಕೈಗಾರಿಕಾ ಉತ್ಪಾದನೆಯಲ್ಲಿ ಇಳಿಮುಖವಾದ ಕಾರಣ ಬಂಡವಾಳ ಹೂಡಿಕೆ ಮತ್ತು ತೆರಿಗೆ ಆದಾಯಕ್ಕೆ ಧಕ್ಕೆಯಾಗಿದೆ.

4. ಆರ್ಥಿಕ ವಲಯದ ಒಟ್ಟಾರೆ ಕಾರ್ಯ ನಿರ್ವಹಣೆ ಗಂಭೀರ ವಿಷಯ. ಸಂಪನ್ಮೂಲ ಸಂಗ್ರಹಣೆಯಲ್ಲಿ ಪ್ರಾಥಮಿಕ ಮಾರುಕಟ್ಟೆಯ ಪ್ರತಿಕ್ರಿಯೆ ತೃಪ್ತಿಕರವಾಗಿಲ್ಲ. ಇಡೀ ವರ್ಷ ಷೇರು ಮಾರುಕಟ್ಟೆಯಲ್ಲಿ ಗಮನಾರ್ಹ ಸುಧಾರಣೆ ಕಂಡುಬರಲಿಲ್ಲ.

5. ವಾಣಿಜ್ಯ ಬ್ಯಾಂಕುಗಳ ನಗದು ಸ್ಥಿತಿ (ಲಿಕ್ವಿಡಿಟಿ) ಹಾಗೂ ಸಾಲ ನೀಡಿಕೆ ಸಾಮರ್ಥ್ಯ ವರ್ಷಾರಂಭದಿಂದ ಸುಸ್ಥಿತಿಯಲ್ಲಿದ್ದರೂ ವಾಣಿಜ್ಯ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಸಾಲ ನೀಡಿಕೆ ಹೆಚ್ಚಾಗಲಿಲ್ಲ. ರಾಜ್ಯ ಸರ್ಕಾರದ ಸಾರ್ವಜನಿಕ ಉದ್ದಿಮೆಗಳು, ಬ್ಯಾಂಕಿಂಗ್ ವಲಯದಿಂದ ದುಡಿಮೆ ಬಂಡವಾಳ ಪಡೆಯುವಲ್ಲಿ ಸಮಸ್ಯೆಗಳನ್ನು ಎದುರಿಸದವು. ಅದ್ದದೆ ಸ್ಥಳೀಯ ಆರ್ಥಿಕ ಪರಿಸ್ಥಿತಿ, ಆಗ್ನೇಯ ಏಷ್ಯಾ ಬಿಕ್ಕಟ್ಟು ಮತ್ತು ರೂಪಾಯಿ ಬೆಲೆ ಕುಸಿತಕ್ಕೆ (ಡಿಪ್ರಿಷಿಯೇಷನ್) ಪ್ರತಿಕ್ರಿಯಿಸಿದ ರಿಜರ್ವ್ ಬ್ಯಾಂಕ್‌ನ ಹಣಕಾಸು ನೀತಿಯಾಗಿ ಕೈಗಾರಿಕಾ ಕ್ಷೇತ್ರಕ್ಕೆ ಸಾಲದ ಲಭ್ಯತೆ ಇನ್ನಷ್ಟು ಕಡಿಮೆಯಾಯಿತು.

6. ಇಷ್ಟೆಲ್ಲಾ ಪ್ರತಿಕೂಲ ಸನ್ನಿವೇಶಗಳ ನಡುವೆಯೂ ನಮ್ಮ ಸರ್ಕಾರವು ಅನೇಕ ಕ್ಷೇತ್ರಗಳಲ್ಲಿ ಕ್ರಿಯಾಶೀಲ ನಾಯಕತ್ವ ನೀಡಿದೆಯೆಂದು ಹೇಳಲು ಸಂತೋಷವಾಗುತ್ತಿದೆ. ರಾಜ್ಯ ಸರ್ಕಾರದ ಸ್ನೇಹ ಪೂರ್ಣ ಬಂಡವಾಳ ಹೂಡಿಕೆ ವಾತಾವರಣವು ವಿಶ್ವದರ್ಜೆಯ ಟೊಯೋಟಾ ಮತ್ತು ವೋಲ್ವೊನಂಥ ಸಂಸ್ಥೆಗಳನ್ನು ಆಕರ್ಷಿಸಿದೆ. ಕೇಂದ್ರ ವಿದ್ಯುತ್ ಜಾಲದಲ್ಲಿನ ರಾಜ್ಯದ ಪಾಲು ಕಡಿಮೆಯಾಗಿದ್ದರೂ ಹಾಗೂ ನೆರೆಯ ರಾಜ್ಯಗಳಿಂದ ನಾವು ವಿದ್ಯುತ್ ಪಡೆಯದಿದ್ದರೂ ಈ ವರ್ಷದ ರಾಜ್ಯದ ವಿದ್ಯುತ್ ಪರಿಸ್ಥಿತಿಯಲ್ಲಿ ಗಮನಾರ್ಹ ಸುಧಾರಣೆಯಾಗಿದೆ. 1997-98ರಲ್ಲಿ ರಾಜ್ಯದ ಸ್ವಂತ ವಿದ್ಯುತ್ ಉತ್ಪಾದನೆ 15,529 ಮಿಲಿಯನ್ ಯುನಿಟ್‌ಗಳಾಗಿತ್ತು. 1996-97ನೇ

ಸಾಲಿನ 12,260 ಮಿಲಿಯನ್ ಯುನಿಟ್ ಉತ್ಪಾದನೆಗೆ ಹೋಲಿಸಿದರೆ ಇದು ಉತ್ತಮ ಸಾಧನೆಯಾಗಿದೆ. ಈ ಏರಿಕೆಯ ಪರಿಣಾಮವಾಗಿ ನಾವು ವಿದ್ಯುತ್ ಕಡಿತವನ್ನು ತೆಗೆದು ಹಾಕಿದೆವು. ಕೃಷ್ಣ ಭಾಗ್ಯ ಜಲ ನಿಗಮವು 800 ಕೋಟಿ ರೂ.ಗಳ ನಿಗದಿತ ಗುರಿಗೆ ಎದುರಾಗಿ 404 ಕೋಟಿ ರೂ.ಗಳನ್ನು ಸಂಗ್ರಹಿಸಿದೆ. ಬಾಕಿ ಹಣವನ್ನು 1998 ಮಾರ್ಚ್ ಅಂತ್ಯದೊಳಗೆ ಸಂಗ್ರಹಿಸಲಾಗುವುದು. ಜನ ಸಾಮಾನ್ಯರ ಬಳಿಗೆ ಆಡಳಿತವನ್ನು ಕೊಂಡೊಯ್ಯಬೇಕೆಂಬ ಕಾಳಜಿಯಿಂದ ನೂತನವಾಗಿ ಕೊಪ್ಪಳ, ಚಾಮರಾಜನಗರ, ಗದಗ, ಹಾವೇರಿ, ಬಾಗಲಕೋಟೆ, ಉಡುಪಿ ಮತ್ತು ದಾವಣಗೆರೆ ಜಿಲ್ಲೆಗಳನ್ನು ರಚಿಸಲಾಗಿದೆ.

7. ಕಳೆದು ಮೂರು ವರ್ಷಗಳಲ್ಲಿ ನಮ್ಮ ಸರ್ಕಾರವು ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ನೀರಾವರಿ ಮತ್ತು ವಸತಿಯಂತಹ ಆದ್ಯತಾ ವಲಯಗಳಿಗೆ ಹೆಚ್ಚು ಒತ್ತು ನೀಡಿದೆ. ಈ ಮೂರು ವರ್ಷಗಳಲ್ಲಿ ನಾವು 61,510 ಶಾಲಾ ಶಿಕ್ಷಕರನ್ನು ನೇಮಿಸಿಕೊಂಡಿದ್ದೇವೆ. 19,415 ಶಾಲಾ ಕೊಠಡಿಗಳು ನಿರ್ಮಾಣದ ವಿವಿಧ ಹಂತಗಳಲ್ಲಿವೆ. ನಾವು 2079 ವೈದ್ಯರುಗಳನ್ನು ನೇಮಕ ಮಾಡಿಕೊಂಡಿದ್ದು 192 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲು ಕ್ರಮ ಕೈಗೊಂಡಿದ್ದೇವೆ. ವಿವಿಧ ವಸತಿ ಯೋಜನೆಗಳಡಿ 2.7 ಲಕ್ಷ ಮನೆಗಳನ್ನು ನಿರ್ಮಾಣ ಮಾಡಿದ್ದೇವೆ. ಅಲ್ಲದೆ 1.8 ಲಕ್ಷ ನಿವೇಶನರಹಿತರಿಗೆ ನಿವೇನ ಹಂಚಿಕೆ ಮಾಡಿದ್ದೇವೆ. ನೀರಾವರಿಗೆ ನಮ್ಮ ಆದ್ಯತೆ ಎಂದಿನಂತೆಯೇ ಮುಂದುವರಿಯುತ್ತಿದ್ದು ಈ ವಲಯದಲ್ಲಿ 4079 ಕೋಟಿ ರೂ.ಗಳನ್ನು ವೆಚ್ಚ ಮಾಡಿದ್ದೇವೆ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕಾಗಿ 504 ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆ.

ಸ್ವಾತಂತ್ರ್ಯದ 50ನೇ ವರ್ಷದ ಆಚರಣೆ

8. ರಾಷ್ಟ್ರದ ಸ್ವಾತಂತ್ರ್ಯದ ಚಿನ್ನದ ಹಬ್ಬವನ್ನು ನಾವು ನಿಜ್ರಂಭಣೆಯಿಂದ ಆಚರಿಸಿದ್ದೇವೆ. ಈ ಸಂಬಂಧ ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಮಟ್ಟಗಳಲ್ಲಿ ಹಲವಾರು ಸಮಾರಂಭಗಳನ್ನು ಏರ್ಪಡಿಸಲಾಗಿತ್ತು. ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಅಂಗವಾಗಿ ಕಳೆದ ಸಾಲಿನ ಮುಂಗಡ ಪತ್ರದಲ್ಲಿ ನಾನು ಹಲವಾರು ನೂತನ ಕಾರ್ಯಕ್ರಮಗಳನ್ನು ಪ್ರಕಟಿಸಿದ್ದೆ. ಅವುಗಳನ್ನು ಅನುಷ್ಠಾನಗೊಳಿಸಿದ್ದೇವೆ ಎಂದು ಹೇಳಲು ನನಗೆ ಸಂತಸವಾಗುತ್ತಿದೆ.

- ಸ್ವಾತಂತ್ರ್ಯ ಹೋರಾಟಗಾರರ ಭತ್ಯೆಯನ್ನು ಮಾಸಿಕ 500 ರೂ.ಗಳಿಂದ 750 ರೂ.ಗಳಿಗೆ ಹೆಚ್ಚಿಸಿದ್ದೇವೆ.
- ವೃದ್ಧಾಪ್ಯವೇತನ, ಅಂಗವಿಕಲರ ವೇತನ ಮತ್ತು ವಿಧವಾ ವೇತವನ್ನು ಮಾಸಿಕ 75 ರೂ.ಗಳಿಂದ 100 ರೂ.ಗಳಿಗೆ ಹೆಚ್ಚಿಸಿದ್ದೇವೆ.
- ಹೊಸದಾಗಿ 4000 ಪ್ರಾಥಮಿಕ ಶಾಲೆಗಳನ್ನು ತೆರೆಯುವುದಾಗಿ ಘೋಷಿಸಿದ್ದೆ. ಈಗ ಈ ಗುರಿ ಮೀರಿ 4493 ಶಾಲೆಗಳನ್ನು ಆರಂಭಿಸಲಾಗಿದೆಯೆಂದು ತಿಳಿಯಲು ಹರ್ಷಿಸುತ್ತೇನೆ. ಇದರಿಂದ ಗ್ರಾಮೀಣ ಮಕ್ಕಳಿಗೆ ಸಮೀಪದಲ್ಲೇ ಶಾಲೆ ದೊರೆತಂತಾಗಿದೆ.

ಇದುವರೆಗೂ ರಸ್ತೆ ಸಂಪರ್ಕವೇ ಇಲ್ಲದಿದ್ದ ಹಳ್ಳಿಗಳಿಗೆ ನಾವು ರಸ್ತೆ ಸಂಪರ್ಕ ಕಲ್ಪಿಸುತ್ತಿದ್ದು ಈ ಕಾರ್ಯ 1998ರ ಆಗಸ್ಟ್ ವೇಳೆಗೆ ಪೂರ್ಣಗೊಳ್ಳಲಿದೆ.

ಕೇಂದ್ರದ ಐದನೇ ವೇತನ ಆಯೋಗದ ಪರಿಣಾಮ

9. ಇಷ್ಟೆಲ್ಲ ಸಾಧನೆಗಳ ನಡುವೆಯೂ ನಮಗೆ ಅನೇಕ ಸವಾಲುಗಳು ಎದುರಾದವು. ಕೇಂದ್ರ ಸರ್ಕಾರವು ಇತ್ತೀಚೆಗೆ ಐದನೇ ವೇತನ ಆಯೋಗದ ಶಿಫಾರಸ್ಸುಗಳ ಮೇಲೆ ತೆಗೆದುಕೊಂಡ ನಿರ್ಣಯ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿಯ ಮೇಲೆ ಗಂಭೀರ ಪರಿಣಾಮ ಉಂಟುಮಾಡಲಿದೆ. ಇಂತಹ ನಿರ್ಣಯಗಳನ್ನು ತೆಗೆದುಕೊಳ್ಳುವ ಮುನ್ನ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳೊಡನೆ ಸಮಾಲೋಚಿಸಿದ್ದರೆ ಚೆನ್ನಾಗಿರುತ್ತಿತ್ತು. ಕೇಂದ್ರ ಸರ್ಕಾರದ ನಿರ್ಣಯದಂತೆ ವೇತನವನ್ನು ಜಾರಿಗೊಳಿಸಿದರೆ ರಾಜ್ಯ ಸರ್ಕಾರಕ್ಕೆ ವಾರ್ಷಿಕ 1400 ಕೋಟಿ ರೂ.ಗಳ ಅಧಿಕ ಹೊರೆ ಬೀಳುತ್ತದೆ. ಇದು ರಾಜ್ಯದ ಆದ್ಯತಾ ಕ್ಷೇತ್ರಗಳಿಗೆ ಸಂಪನ್ಮೂಲ ಲಭ್ಯತೆಯ ಪ್ರಮಾಣವನ್ನು ತೀವ್ರವಾಗಿ ಕಡಿಮೆ ಮಾಡುತ್ತದೆ. ಈ ವಿಷಯದ ಬಗ್ಗೆ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ಚರ್ಚೆ ನಡೆಸಬೇಕೆಂದು ನಾವು ಈಗಾಗಲೇ ಪ್ರಧಾನ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡಿದ್ದೇವೆ. ವೇತನ ಆಯೋಗದ ಶಿಫಾರಸ್ಸುಗಳ ಜಾರಿಯಿಂದ ರಾಜ್ಯದ ಮೇಲೆ ಬೀಳುವ ಭಾರದಲ್ಲಿ ಕನಿಷ್ಠ ಅರ್ಧ ಭಾಗವನ್ನು ಕೇಂದ್ರ ಸರ್ಕಾರವು ಹಂಚಿಕೊಳ್ಳಬೇಕು ಎಂದು ನಾನು ಪುನರುಚ್ಚರಿಸುತ್ತೇನೆ. ನಮ್ಮ ನೌಕರರ ಸಮಸ್ಯೆ ನಿವಾರಿಸುವ ಸಲುವಾಗಿ ನಾವು ಈಗಾಗಲೇ ಮೂಲ ವೇತನದ ಶೇ. 20 ರಷ್ಟು ತಾತ್ಕಾಲಿಕ ಪರಿಹಾರವನ್ನು ನೀಡುತ್ತಿದ್ದೇವೆ. ವೇತನ ಪರಿಷ್ಕರಣೆಯ ಬಗ್ಗೆ ಪರಿಶೀಲಿಸಿ ವರದಿ ನೀಡಲು ಅಧಿಕೃತ ವೇತನ ಸಮಿತಿಯನ್ನು ಸಹ ರಚಿಸಿದ್ದೇವೆ.

ಕೇಂದ್ರ - ರಾಜ್ಯ ಹಣಕಾಸು ಸಂಬಂಧ

10. ಕೇಂದ್ರದಿಂದ ರಾಜ್ಯಗಳಿಗೆ ಸಂಪನ್ಮೂಲ ವರ್ಗಾವಣೆಯಾಗುತ್ತಿರುವ ಸದ್ಯದ ನೀತಿ ಒಕ್ಕೂಟ ರಚನೆಯ (ಫೇಡರಲ್) ನಿಜವಾದ ಉದ್ದೇಶವನ್ನು ಬಿಂಬಿಸುತ್ತಿಲ್ಲ. ಈವರೆಗೆ ಹತ್ತು ಹಣಕಾಸು ಆಯೋಗಗಳ ರಚನೆಯಾಗಿದ್ದರೂ ಕೇಂದ್ರದಿಂದ ರಾಜ್ಯಗಳಿಗೆ ಹಣಕಾಸು ವರ್ಗಾವಣೆಯಾಗುವ ವಿಧಾನ ಕರ್ನಾಟಕವನ್ನೊಳಗೊಂಡಂತೆ ಅನೇಕ ರಾಜ್ಯಗಳಿಗೆ ತೃಪ್ತಿಕರವಾಗಿಲ್ಲ. ಹಾಲಿ ಜಾರಿಯಲ್ಲಿರುವ ಹಣಕಾಸು ಆಯೋಗದ ವಿಧಾನದಿಂದ ಅನುಕೂಲ ಪಡೆಯುವ ಸಲುವಾಗಿ ಹಲವಾರು ರಾಜ್ಯಗಳು ರಾಜಸ್ವ ಕೊರತೆಯಲ್ಲೇ ಉಳಿಯುತ್ತಿವೆ. ಆದರೆ ತಮ್ಮ ಸಂಪನ್ಮೂಲಗಳನ್ನು ರೂಢಿಸಿಕೊಂಡು, ಹಣಕಾಸು ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವ ರಾಜ್ಯಗಳು ಸಾಕಷ್ಟು ಸಂಪನ್ಮೂಲ ವರ್ಗಾವಣೆಯನ್ನು ಪಡೆಯುತ್ತಿಲ್ಲ. ಈಗಾಲಾದರೂ ಇಂಥ ನೀತಿಯ ಬದಲಾವಣೆ ಆಗಬೇಕಾಗಿದೆ. ಹನ್ನೊಂದನೆಯ ಹಣಕಾಸು ಆಯೋಗದ ನಿಬಂಧಗಳನ್ನು ಅಂತಿಮಗೊಳಿಸುವ ಮುನ್ನ, ಹಣಕಾಸು ಆಯೋಗದ ಹೊಸ ನೀತಿಯನ್ನು ರೂಪಿಸುವ ಸಲುವಾಗಿ ರಾಜ್ಯದ ಮುಖ್ಯಮಂತ್ರಿಗಳ ಸಭೆಯನ್ನು ಕರೆಯಬೇಕೆಂದು ನಾನು ಒತ್ತಾಯಿಸುತ್ತೇನೆ.

11. ರಾಜ್ಯಗಳು ಮಾರುಕಟ್ಟೆಯಲ್ಲಿ ಸಾಲ ಎತ್ತುವ ಪ್ರಮಾಣವನ್ನು ಯೋಜನಾ ಆಯೋಗವು ಮಾಮೂಲಿ ವಿಧಾನದಲ್ಲಿ ನಿಗದಿಪಡಿಸುತ್ತಿದೆ. ರಾಜ್ಯಗಳು ಎತ್ತುವ ಸಾಲದ ಪ್ರಮಾಣದಲ್ಲಿ ಸಾಮಾನ್ಯ ಏರಿಕೆಯಾಗುತ್ತಿದ್ದರೆ, ಕೇಂದ್ರ ಸರ್ಕಾರ ಎತ್ತುವ ಸಾಲದಲ್ಲಿನ ಏರಿಕೆ ಪ್ರಮಾಣ ಇದ್ದಕ್ಕಿಂತಲೂ ಹೆಚ್ಚಾಗಿದೆ. ರಾಜ್ಯಗಳ ಹಣಕಾಸಿನ ಅಗತ್ಯ ಮತ್ತು ಆರ್ಥಿಕ ನಿರ್ವಹಣೆಯನ್ನು ಪರಿಶೀಲಿಸಿದ ನಂತರ ಮಾರುಕಟ್ಟೆಯಲ್ಲಿ ಸಾಲ ಎತ್ತುವ ಪ್ರಮಾಣವನ್ನು ನಿಗದಿಪಡಿಸುವುದು ಸೂಕ್ತ. ಇದರಿಂದ ರಾಜ್ಯ ಸರ್ಕಾರಗಳಿಗೆ ಸಾರ್ವಜನಿಕ ಹಣಕಾಸಿನ ಅತ್ಯುತ್ತಮ ನಿರ್ವಹಣೆಯನ್ನು ಮಾಡಲು ಉತ್ತೇಜಿಸಿದಂತಾಗುತ್ತದೆ ಎಂದು ನಾನು 1997-98ರ ಆಯವ್ಯಯದಲ್ಲಿಯೇ ಪ್ರಸ್ತಾಪಿಸಿದ್ದೇನೆ.

12. ಯೋಜನಾ ಆಯೋಗದ ನಿಬಂಧನೆಯಂತೆ ನಿಧಿ ಸಂಗ್ರಹಿಸುವ ಜೊತೆಗೆ ರಾಜ್ಯಗಳು ಮುಕ್ತ ಮಾರುಕಟ್ಟೆಯಲ್ಲೂ ಸಹ ನಿಧಿ ಸಂಗ್ರಹಿಸುವುದಕ್ಕೆ ಅನುಮತಿ ನೀಡಬೇಕು. ಪ್ರಸಕ್ತ ಆರ್ಥಿಕ ಉದಾರೀಕರಣ ಸನ್ನಿವೇಶದಲ್ಲಿ ಇದು ತುಂಬಾ ಅವಶ್ಯಕ.

ವೆಚ್ಚದ ನಿಯಂತ್ರಣ

13. ರಾಜಯ್ದ ಯೋಜನೆಗಳಿಗೆ ಹೆಚ್ಚು ಸಂಪನ್ಮೂಲವನ್ನು ರೂಢಿಸಲು ಅನಾವಶ್ಯಕ ಖರ್ಚು, ವೆಚ್ಚಗಳಿಗೆ ತಡೆಯೊಡ್ಡಬೇಕಾಗಿದೆ. ಇದಕ್ಕಾಗಿ ಕೆಲವು ಕ್ರಮಗಳನ್ನು ಜಾರಿಗೊಳಿಸಲು ಉದ್ದೇಶಿಸಿದ್ದೇನೆ.

- ಕಳೆದ ವರ್ಷ ನಾನು ಸರ್ಕಾರಿ ಹುದ್ದೆಗಳ ಸಂಖ್ಯೆಯಲ್ಲಿ ಶೇಕಡ ಐದರಷ್ಟನ್ನು ಕಡಿಮೆ ಮಾಡಲಾಗುವುದೆಂದು ಪ್ರಕಟಿಸಿದ್ದೆ. ಈ ಸಂಬಂಧ ಸಚಿವ ಸಂಪುಟ ಉಪ ಸಮಿತಿಯು ಸುದೀರ್ಘ ಚರ್ಚೆ ನಡೆಸುತ್ತಿದ್ದು ಶೀಘ್ರದಲ್ಲೇ ವರದಿಯನ್ನು ಸಲ್ಲಿಸಲಿದೆ. ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಇಲಾಖೆಗಳಲ್ಲಿ ದಿನಾಂಕ 1.4.1998 ರಂದು ಇದ್ದ ಎಲ್ಲ ಖಾಲಿ ಹುದ್ದೆಗಳನ್ನು ಭರ್ತಿಮಾಡದೆ ಸ್ಥಗಿತಗೊಳಿಸಲು ಉದ್ದೇಶಿಸಿದ್ದೇವೆ.
- ಟೆಲಿಫೋನ್, ಪೆಟ್ರೋಲ್ ಮತ್ತು ಡೀಸಲ್, ಪ್ರವಾಸಭತ್ಯೆ ಮುಂತಾದವುಗಳ ಮೇಲಿನ ವೆಚ್ಚವನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಪ್ರತಿಯೊಂದು ವಲಯದಲ್ಲೂ ಪುನರಾವರ್ತನೆಗೊಳ್ಳುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಪರಿಶೀಲಿಸಿ ಸದ್ಯದ ಪರಿಸ್ಥಿತಿಗೆ ಪ್ರಸ್ತುತವಲ್ಲದ ಯೋಜನೆಗಳನ್ನು ಕೈಬಿಡಲು ಉದ್ದೇಶಿಸಿದ್ದೇವೆ.
- ಕಾಮಗಾರಿಗಳ ದರಪಟ್ಟಿಯಲ್ಲಿ ಮಿತವ್ಯಯ ಮತ್ತು ಏಕರೂಪತೆಯನ್ನು ತರಲು ದರ ಪಟ್ಟಿಗಳನ್ನು ಮರುಪರಿಶೀಲಿಸುತ್ತೇವೆ.
- ಕಟ್ಟಡ ವಿನ್ಯಾಸ ಮತ್ತು ಘಟಕ ವೆಚ್ಚ ಹಾಗೂ ಮತ್ತಿತರ ನಿರ್ಮಾಣ ಚಟುವಟಿಕೆಗಳನ್ನು ಮರುಪರಿಶೀಲಿಸಿ ಕಟ್ಟಡಗಳು ಹೆಚ್ಚು ಕಾರ್ಯಸಹಾಯಕವಾಗುವಂತೆ ಹಾಗೂ ಘಟಕ ವೆಚ್ಚದಲ್ಲಿ ಮಿತವ್ಯವಾಗುವಂತೆ ಕ್ರಮಕೈಗೊಳ್ಳಲಾಗುವುದು.

- ಕಳೆದ ಆಯವ್ಯಯದಲ್ಲಿ ನಾನು ಬಳಕೆದಾರ ವಸ್ತುಗಳನ್ನು ಉತ್ಪಾದಿಸುವ ಸಾರ್ವಜನಿಕ ಉದ್ಯಮಗಳಲ್ಲಿನ ಸರ್ಕಾರಿ ಬಂಡವಾಳವನ್ನು ಹಿಂತೆಗೆದುಕೊಳ್ಳುವ ಬಗ್ಗೆ ಪ್ರಸ್ತಾಪಿಸಿದ್ದೆ. ಈ ನಿಟ್ಟಿನಲ್ಲಿ ನಾವು ಈಗಾಗಲೇ ಕಾರ್ಯಪ್ರವೃತ್ತರಾಗಿದ್ದು 1998-99ನೇ ಸಾಲಿನಲ್ಲಿ ಕೆಲವು ಉದ್ಯಮಗಳಲ್ಲಿನ ಬಂಡವಾಳವನ್ನು ಹಿಂದೆಗೆದುಕೊಳ್ಳುವ ಕಾರ್ಯ ಸಂಪೂರ್ಣ ಇಲ್ಲವೆ ಭಾಗಶಃ ಈಡೇರಬಹುದೆಂದು ಭಾವಿಸಿದ್ದೇವೆ.

ಸಂಪನ್ಮೂಲ ನಿರ್ವಹಣೆ

14. ಕಳೆದು ಐದು ದಶಕಗಳಿಂದಲೂ ರಾಜ್ಯಪಟ್ಟಿಯಲ್ಲಿನ ತೆರಿಗೆಗಳು ಹೆಚ್ಚು ಕಡಿಮೆ ಬದಲಾಗದೇ ಹಾಗೆಯೇ ಉಳಿದು ಬಂದಿವೆ. ಹೆಚ್ಚು ತೆರಿಗೆ ಸಂಗ್ರಹಣೆಗೆ ಅವಕಾಶವಿರುವ ಕ್ಷೇತ್ರಗಳು ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿವೆ. ಸರಕು ರವಾನೆಯ ಮೇಲೆ ತೆರಿಗೆ ವಿಧಿಸುವ ಬಗ್ಗೆ ಒಮ್ಮತ ಮೂಡಿದ್ದರೂ ಅದಿನ್ನೂ ಜಾರಿಯಾಗಿರುವುದಿಲ್ಲ. ಕಳೆದ ಕೆಲವಾರು ವರ್ಷಗಳಿಂದ ಸೇವಾ ವಲಯದಲ್ಲಿ ಗಮನಾರ್ಹ ಬೆಳವಣಿಗೆಯಾಗಿದೆ. ಈ ಹಿನ್ನೆಲೆಯಲ್ಲಿ ಸೇವೆಯ ಮೇಲೆ ತೆರಿಗೆ ವಿಧಿಸಲು ನಾವು ಕೇಂದ್ರ ಸರ್ಕಾರವನ್ನು ವಿನಂತಿಸುತ್ತಲೇ ಇದ್ದೇವೆ. ಹತ್ತನೇ ಹಣಕಾಸು ಆಯೋಗ ಶಿಫಾರಸ್ಸು ಮಾಡಿರುವ ಕೇಂದ್ರದ ಒಟ್ಟು ತೆರಿಗೆಗಳಲ್ಲಿನ ಶೇಕಡಾ 29ರಷ್ಟು ಪಾಲು, ಸಂವಿಧಾನಕ್ಕೆ ಇನ್ನೂ ತಿದ್ದುಪಡಿಯಾಗದಿರುವ ಕಾರಣದಿಂದ ಜಾರಿಗೊಂಡಿರುವುದಿಲ್ಲ. ತೆರಿಗೆ ವಿಧಿಸುವುದರ ಮೇಲೆ ರಾಜ್ಯ ಸರ್ಕಾರಗಳಿಗಿಂತ ಅಧಿಕಾರವನ್ನು ಹೆಚ್ಚಿಸದ ಹೊರತು ಸಂಪನ್ಮೂಲ ಸಂಗ್ರಹಣೆ ಕಷ್ಟವಾಗುತ್ತದೆ.

15. ಬಂಡವಾಳ ಮಾರುಕಟ್ಟೆಯಿಂದ ಹಣಕಾಸು ಸಂಗ್ರಹಿಸುವ ಸಾಧ್ಯತೆಯನ್ನು ನಾವು ಹುಡುಕುತ್ತಿದ್ದೇವೆ. ಈ ನಿಟ್ಟಿನಲ್ಲಿ ಇದುವರೆಗೂ ಕೃಷ್ಣ ಭಾಗ್ಯ ಜಲ ನಿಗಮವು 1093 ಕೋಟಿ ರೂ.ಗಳನ್ನು ಸಂಗ್ರಹಿಸಿ ಉತ್ತಮ ಆರಂಭ ಒದಗಿಸಿದೆ. ಬಾಂಡ್‌ಗಳನ್ನು ಬಿಡುಗಡೆ ಮಾಡುವ ಮೂಲಕ ಹಣಕಾಸು ಸಂಗ್ರಹಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ, ಮತ್ತು ಬೆಂಗಳೂರು ಮಹಾನಗರ ಪಾಲಿಕೆಗಳಿಗೆ ಅನುಮತಿ ನೀಡಿದ್ದೇವೆ. ಪ್ರತಿಫಲ ನಿರೀಕ್ಷಿಸಬಹುದಾದ ಕಡೆ ಮಾತ್ರ ಸಂಪನ್ಮೂಲ ಸಂಗ್ರಹಿಸುವುದು ನಮ್ಮ ಉದ್ದೇಶವಾಗಿದೆ. ವಿದ್ಯುತ್, ನೀರಾವರಿ ಮತ್ತು ಮೂಲ ಸೌಲಭ್ಯಗಳಿಗೆ ಮಾತ್ರ ಬಂಡವಾಳ ಮಾರುಕಟ್ಟೆಯಲ್ಲಿ ಸಂಪನ್ಮೂಲ ಸಂಗ್ರಹಿಸುವುದು ಸದ್ಯದ ನಮ್ಮ ನಿಲುವಾಗಿದೆ.

16. 1997-98ರ ಆಯವ್ಯಯದಲ್ಲಿ ನಾನು ಸರ್ಕಾರಿ ಖಾತರಿ (ಗ್ಯಾರಂಟಿ) ಗಳನ್ನು ನೀಡುವ ಬಗ್ಗೆ ಶಾಸನ ತರಲು ಸಲಹೆ ಮಾಡಿದ್ದೆ. ಆದರೆ ಎರಡು ರಾಜ್ಯಗಳನ್ನು ಹೊರತುಪಡಿಸಿ ಇನ್ನಾವ ರಾಜ್ಯಗಳೂ ಇಂತಹ ಶಾಸನವನ್ನು ಜಾರಿಗೊಳಿಸಿರುವುದಿಲ್ಲ. ರಾಜ್ಯಗಳ ಆರ್ಥಿಕ ಕಾರ್ಯದರ್ಶಿಗಳ ಜೊತೆ ಈ ಬಗ್ಗೆ ಭಾರತೀಯ ರಿಜರ್ವ್ ಬ್ಯಾಂಕ್ ಚರ್ಚೆ ನಡೆಸಿದೆ. ಸರ್ಕಾರದ ಖಾತರಿಗಳನ್ನು ನೀಡುವ ಬಗ್ಗೆ ಮಾರ್ಗ ಸೂಚಿಗಳನ್ನು ರೂಪಿಸಲು ಸಮಿತಿಯೊಂದನ್ನು ರಚಿಸಿದೆ. ಈ ಸಮಿತಿಯ ವರದಿ ಬಂದ ನಂತರ, ಸರ್ಕಾರಿ ಖಾತರಿಗಳನ್ನು ನೀಡುವ ಬಗ್ಗೆ ವಿಧೇಯಕವನ್ನು ಮಂಡಿಸಲು ನಾನು ಉದ್ದೇಶಿಸಿದ್ದೇನೆ.

17. ವಿದೇಶಿ ನೆರವಿನ ಯೋಜನೆಗಳು ನಮ್ಮ ಆದ್ಯತಾವಲಯದ ಕಾರ್ಯಕ್ರಮಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಒದಗಿಸುತ್ತದೆ. ಇಂತಹ ಕಾರ್ಯಕ್ರಮಗಳಿಗೆ ಆಂತರಿಕ ಸಾಲ ಮಾರುಕಟ್ಟೆಯಿಂದ ಹಣ ತರುವುದು ತುಂಬಾ ದುಬಾರಿ. ಆದ್ದರಿಂದ ಬಡ್ಡಿಯ ಹೊರೆಯನ್ನು ಕಡಿಮೆ ಮಾಡಿಕೊಳ್ಳಲು ಆದ್ಯತಾವಲಯಗಳಲ್ಲಿನ ಕಾರ್ಯಕ್ರಮಗಳನ್ನು ವಿದೇಶಿ ನೆರವಿನೊಡನೆ ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದೇನೆ ಹಾಗೂ ಈ ನಿಟ್ಟಿನಲ್ಲಿ ವಿಶ್ವಬ್ಯಾಂಕ್, ಏಷ್ಯಾ ಅಭಿವೃದ್ಧಿ ಸಂಸ್ಥೆ (ಎಡಿಬಿ), ಸಾಗರೋತ್ತರ ಆರ್ಥಿಕ ಸಹಕಾರ ನಿಧಿ (ಒಇಸಿಎಫ್) ಮೊದಲಾದ ದ್ವಿಪಕ್ಷೀಯ ಸಂಸ್ಥೆಗಳ ಜೊತೆ ಮಾತುಕತೆ ನಡೆಸಲು ನಿರ್ಧರಿಸಿದ್ದೇವೆ. ಈ ಗುರಿಸಾಧನೆಗೆ ಈಗಾಗಲೇ ಹಣಕಾಸು ಇಲಾಖೆಯಲ್ಲಿ ಯೋಜನಾ ಮೇಲ್ವಿಚಾರಣೆ ಘಟಕವನ್ನು (ಪಿಎಮ್‌ಯು) ರಚಿಸಲಾಗಿದೆ. ಈ ಘಟಕವು, ವಿದೇಶಿ ನೆರವಿನ ಎಲ್ಲಾ ಯೋಜನೆಗಳನ್ನು ನೋಡಿಕೊಳ್ಳುತ್ತದೆ.

18. ವಸತಿ, ಸಹಕಾರ ಮತ್ತು ಕೃಷಿಸಾಲ ಕ್ಷೇತ್ರಗಳಲ್ಲಿನ ಯೋಜನಾ ಚಟುವಟಿಕೆಗಳಿಗೆ ನಾವು ರಾಷ್ಟ್ರೀಯ ಮಟ್ಟದ ಸಂಸ್ಥೆಗಳಿಂದ ಹೆಚ್ಚಿನ ಬಡ್ಡಿ ದರದಲ್ಲಿ ಸಾಲ ಪಡೆಯುತ್ತಿದ್ದೇವೆ. ಆದುದರಿಂದ ಕೆಲವು ಆದ್ಯತಾ ವಲಯಗಳಿಗೆ ಹೆಚ್ಚುವರಿ ಸಾಲವನ್ನು ನೀಡುವ ಸಲುವಾಗಿ ಮಾರುಕಟ್ಟೆಯಲ್ಲಿ ಕಡಿಮೆ ಬಡ್ಡಿದರದಲ್ಲಿ ಹಣ ಸಂಗ್ರಹಿಸುವ ಮಧ್ಯವರ್ತಿ ಹಣಕಾಸು ಸಂಸ್ಥೆಗಳಂತೆ ಕರ್ನಾಟಕ ನಗರ ಮೂಲ ಸೌಲಭ್ಯ ಅಭಿವೃದ್ಧಿ ಹಣಕಾಸು ಸಂಸ್ಥೆ (ಕೆ.ಯು.ಐ.ಡಿ.ಎಫ್.ಸಿ); ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕೆಎಸ್‌ಎಫ್‌ಸಿ) ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ (ಕೆಎಸ್‌ಐಐಡಿಸಿ) ಸಂಸ್ಥೆಗಳು ಕಾರ್ಯನಿರ್ವಹಿಸಬೇಕೆಂಬ ಪ್ರಸ್ತಾವನೆಯನ್ನು ನಾನು ಮಂಡಿಸುತ್ತಿದ್ದೇನೆ.

ಮೂಲ ಸೌಲಭ್ಯ ಅಭಿವೃದ್ಧಿ

19. ಸರ್ಕಾರವು, ಮೂಲ ಸೌಲಭ್ಯ ಯೋಜನೆಗಳಲ್ಲಿ ಖಾಸಗಿ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸುವ 'ಮೂಲ ಸೌಲಭ್ಯ ನೀತಿ'ಯನ್ನು ಪ್ರಕಟಿಸಿದೆ. ಈ ನೀತಿಯಲ್ಲಿ ಅಡಗಿರುವ ಕೆಲವು ಉತ್ತೇಜನಕಾರಿ ಅಂಶಗಳು ಇಂತಿವೆ.

- ಯಂತ್ರಗಳು, ಉಪಕರಣಗಳು ಮತ್ತು ಬಂಡವಾಳ ಸರಕುಗಳು ಮತ್ತು ಮೂಲಸೌಲಭ್ಯ ಯೋಜನೆಗಳಲ್ಲಿನ ಬಳಸುವ ನಿರ್ಮಾಣ ವಸ್ತುಗಳ ಮೇಲಿನ ಪ್ರವೇಶ ತೆರಿಗೆಯಲ್ಲಿ ವಿನಾಯಿತಿ.
- ಜಮೀನಿನ ಮೊದಲ ಮಾರಾಟದ ಮೇಲೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ವೆಚ್ಚಗಳಿಗೆ ವಿನಾಯಿತಿ.
- ಮೂಲ ಸೌಲಭ್ಯ ನಿರ್ಮಾಣದ ಮೇಲೆ ಮಾರಾಟ ತೆರಿಗೆಯು ಒಪ್ಪಂದಕಾಮಗಾರಿ ತೆರಿಗೆಯಲ್ಲಿ ವಿನಾಯಿತಿ.

20. ಈ ಯೋಜನೆಗಳಿಗೆ ತ್ವರಿತ ಅನುಮತಿ ನೀಡಲು ಹಾಗೂ ಜಾರಿಗೊಳಿಸಲು ಅನುಕೂಲವಾಗುವಂತೆ ಆಡಳಿತ ವಿಧಾನವನ್ನು ಸುಧಾರಿಸಲಾಗಿದೆ.

21. ಬಂಡವಾಳ ಹೂಡಿಕೆದಾರರ ವಿಶ್ವ ಸಮ್ಮೇಳನವೊಂದನ್ನು 1998ರ ಮೇ ತಿಂಗಳಲ್ಲಿ ಬೆಂಗಳೂರು ನಗರದಲ್ಲಿ ನಡೆಸಲು ನಿರ್ಧರಿಸಲಾಗಿದೆ. ವಿದ್ಯುತ್, ನೀರು ಸರಬರಾಜು, ರಸ್ತೆ, ಪ್ರವಾಸೋದ್ಯಮ ಮುಂತಾದ ಹಲವಾರು ಯೋಜನೆಗಳಲ್ಲಿ ಭಾಗವಹಿಸಲು ಖಾಸಗಿಯವರಿಗೆ ಮುಕ್ತ ಅವಕಾಶ ಕಲ್ಪಿಸಲಾಗುವುದು.

22. ಕರ್ನಾಟಕ ಮೂಲ ಸೌಲಭ್ಯಗಳ ಅಭಿವೃದ್ಧಿ ಹಾಗೂ ಹಣಕಾಸು ನಿಗಮವನ್ನು ರಚಿಸಲು ನಾವು ಉದ್ದೇಶಿಸಿದಿದ್ದೇವೆ. ಸರ್ಕಾರವು ಈ ನಿಗಮಕ್ಕೆ 200 ಕೋಟಿ ರೂ.ಗಳ ಬಂಡವಾಳವನ್ನು ಮುಂದಿನ ಎರಡು ವರ್ಷಗಳಲ್ಲಿ ನೀಡುತ್ತದೆ. ನಿಗಮವು ಬಹುಪಕ್ಷೀಯ ಹಾಗೂ ದ್ವಿಪಕ್ಷೀಯ ವಿದೇಶಿ ನೆರವಿನ ಸಂಸ್ಥೆಗಳಿಂದ ಹಾಗೂ ಭಾರತೀಯ ಹಣಕಾಸು ಸಂಸ್ಥೆಗಳಿಂದ ನಿಧಿಯನ್ನು, ಆಹ್ವಾನಿಸುತ್ತದೆ. ಈ ಕ್ರಮಗಳಿಂದ 800 ಕೋಟಿ ರೂ.ಗಳನ್ನು ಮುಂಬರುವ ಮೂರು ವರ್ಷಗಳಲ್ಲಿ ಮೂಲ ಸೌಲಭ್ಯ ಯೋಜನೆಗಳಲ್ಲಿ ತೊಡಗಿಸಲು ನಿರೀಕ್ಷೆ ಇದೆ. ಈ ಬಂಡವಾಳವನ್ನು ಪ್ರಮುಖವಾಗಿ ರಸ್ತೆ ಮತ್ತು ಸೇತುವೆ ಕಾಮಗಾರಿಗಳಲ್ಲಿ ತೊಡಗಿಸಲಾಗುವುದು. ಸರ್ಕಾರವು ಹಲವಾರು ತೆರಿಗೆಗಳ ಮೇಲೆ ಕರ ವಿಧಿಸುವ ಮೂಲಕ ಈ ನಿಗಮಕ್ಕೆ ಬಂಡವಾಳವನ್ನು ಒದಗಿಸುತ್ತದೆ. ಈ ಬಗ್ಗೆ ನನ್ನ ಭಾಷಣದಲ್ಲಿ ಮುಂದೆ ಪ್ರಸ್ತಾಪಿಸುತ್ತೇನೆ.

ರಾಜ್ಯ ಸರ್ಕಾರದ ಹಣಕಾಸು ಸ್ಥಿತಿ

23. ನಮ್ಮ ಸರ್ಕಾರವು ಆರ್ಥಿಕ ಸ್ಥಿರತೆಯನ್ನು ಉಳಿಸಿಕೊಂಡು ಬಂದಿದೆ. ಕಳೆದು ಮೂರು ವರ್ಷಗಳಲ್ಲಿನ ರಾಜ್ಯದ ತೆರಿಗೆ ಆದಾಯ ಸರಾಸರಿ ಶೇಕಡಾ 16ರ ಪ್ರಮಾಣದಲ್ಲಿ ಬೆಳೆದಿದೆ. ಕೈಗಾರಿಕಾ ಚಟುವಟಿಕೆಯಲ್ಲಿನ ಮಂದಗತಿಯ ಕಾರಣ ಈ ವರ್ಷ ತೆರಿಗೆ ಆದಾಯದ ಸಂಗ್ರಹಣೆಯಲ್ಲಿ ಕೊಂಚ ಇಳಿಮುಖವಾಗಿದ್ದರೂ ಕೈಗಾರಿಕಾ ವಲಯದ ಪುನಶ್ಚೇತನದ ನಂತರ ಮುಂಬರುವ ವರ್ಷಗಳಲ್ಲಿ ತೆರಿಗೆ ಸಂಗ್ರಹ ಸುಧಾರಿಸಬಹುದು ಎಂದು ನಾನು ಭಾವಿಸುತ್ತೇನೆ. ನಮ್ಮ ಸಾಲ ಮರು ಪಾವತಿಯ ಪ್ರಮಾಣದಲ್ಲಿ ಏರಿಕೆಯಾಗುತ್ತಿದ್ದರೂ ಅದು ಇನ್ನೂ ನಮ್ಮ ಹಿಡಿತದಲ್ಲಿದೆ. ನಮ್ಮ ಸಾಲ ಮರು ಪಾವತಿ, ರಾಜಸ್ವ ಆದಾಯದ ಶೇಕಡಾ 16ರಷ್ಟಿದ್ದು ಇದು ರಾಷ್ಟ್ರೀಯ ಸರಾಸರಿಗಿಂತ ಕಡಿಮೆಯಾಗಿದೆ. ನಮ್ಮ ಅಭಿವೃದ್ಧಿ ಅಗತ್ಯಗಳಿಗೆ ಬೇಕಾದ ಹಣವನ್ನು ಪಡೆಯುವ ಶಕ್ತಿ ನಮ್ಮಲ್ಲಿನ್ನೂ ಸಾಕಷ್ಟಿದೆ. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ನಮ್ಮ ರಾಜ್ಯದ ಹಣಕಾಸು ಪರಿಸ್ಥಿತಿ ಸದೃಢವಾಗಿದೆ ಎಂದು ಪರಿಗಣಿಸಿವೆ. ಇದನ್ನು ನಾವು ಇನ್ನಷ್ಟು ಸದೃಢಗೊಳಿಸಲು ಪ್ರಯತ್ನಿಸುತ್ತೇವೆ.

ರಾಜ್ಯದ ಆರ್ಥಿಕ ಸ್ಥಿತಿ

24. ರಾಷ್ಟ್ರದಲ್ಲಿನ ಕೈಗಾರಿಕಾ ಚಟುವಟಿಕೆಗಳಲ್ಲಿ ಉಂಟಾದ ಸಾಮಾನ್ಯ ಕುಸಿತದ ಪರಿಣಾಮಗಳು ಕರ್ನಾಟಕದಲ್ಲೂ ಸಹ ಕಂಡು ಬಂದವು. ಉತ್ಪಾದನಾ ವಲಯದಲ್ಲಿನ ಬೆಳವಣಿಗೆ ಕಳೆದ ವರ್ಷಕ್ಕೆ ಹೋಲಿಸಿದರೆ 1997-98ರಲ್ಲಿ ಶೇಕಡಾ 7.9 ರಿಂದ 7.4ಕ್ಕೆ ಇಳಿಯಿತು. ಆದರೂ ಮಾಹಿತಿ ತಂತ್ರಜ್ಞಾನ (ಇನ್‌ಫಾರ್ಮೇಷನ್ ಟೆಕ್ನಾಲಜಿ) ಕ್ಷೇತ್ರದಲ್ಲಿ ಹೆಚ್ಚಾದ ಆಂತರಿಕ ಮತ್ತು ವಿದೇಶಿ ಬೇಡಿಕೆಗೆ ಉತ್ತಮವಾಗಿ ಪ್ರತಿಕ್ರಿಯಿಸಿದ ಕರ್ನಾಟಕ ಇದರ ಫಲ ಪಡೆಯಿತು. ಹೀಗಾಗಿ

ಮಂದಗತಿಯಲ್ಲಿದ್ದ ಕೈಗಾರಿಕಾ ಚಟುವಟಿಕೆಗಳು ಕೊಂಚ ಚೇತರಿಸಿಕೊಂಡವು. ಕೃಷಿ ಕ್ಷೇತ್ರ ಕೂಡ ನಿರೀಕ್ಷಿತ ಮಟ್ಟದಲ್ಲಿ ಬೆಳವಣಿಗೆಯನ್ನು ತೋರಿಸಲಿಲ್ಲ. ಆದರೆ ತೃತೀಯ (ಸೇವಾವಲಯ) ವಲಯದಲ್ಲಿ ಮಾತ್ರ ಗಮನಾರ್ಹವಾಗಿ ಬೆಳವಣಿಗೆಯಾಯಿತು. ಕಳೆದ ವರ್ಷದ ಶೇಕಡ 7.4ರಲ್ಲಿದ್ದ ಬೆಳವಣಿಗೆ 1997-98ರಲ್ಲಿ ಶೇಕಡ 8.6ರಷ್ಟು ಬೆಳವಣಿಗೆಯನ್ನು ಕಂಡಿತು. ಇರೆಲ್ಲದರಿಂದಾಗಿ ರಾಜ್ಯದ ಬೆಳವಣಿಗೆ ಕಳೆದ ವರ್ಷಕ್ಕೆ ಹೋಲಿಸಿದರೆ ಶೇಕಡಾ5.8ರಿಂದ ಈ ವರ್ಷ ಶೇಕಡಾ 6.7ರ ಬೆಳವಣಿಗೆಯನ್ನು ದಾಖಲಿಸಿದೆ.

1997–98ರ ವಾರ್ಷಿಕ ಯೋಜನೆ

25. ಯೋಜನಾ ಆಯೋಗದ ಜೊತೆ ಚರ್ಚಿಸಿ ರಾಜ್ಯದ 1997-98ನೇ ಸಾಲಿನ ವಾರ್ಷಿಕ ಯೋಜನಾ ಗಾತ್ರವನ್ನು 4130 ಕೋಟಿ ರೂಪಾಯಿಗಳಿಗೆ ನಿಗದಿಗೊಳಿಸಲಾಗಿತ್ತು. ಆದರೆ ನಂತರ ವಿವಿಧ ಇಲಾಖೆಗಳ ಬೇಡಿಕೆ ಮತ್ತು ಅಗತ್ಯಗಳನ್ನು ಗಮನದಲ್ಲಿರಿಸಿಕೊಂಡು ರಾಜ್ಯದ ಯೋಜನಾ ಗಾತ್ರವನ್ನು 4545 ಕೋಟಿ ರೂ.ಗಳಿಗೆ ಹೆಚ್ಚಿಸಲಾಯಿತು. ಕಳೆದ ವರ್ಷ ಯೋಜನೇತರ ಬಾಬಿನಲ್ಲಿ ಕೆಲವು ವಲಯಗಳಿಗೆ ಹೆಚ್ಚಿನ ಆರ್ಥಿಕ ನೆರವು ನೀಡಬೇಕಾದ ಅನಿವಾರ್ಯತೆ ಒದಗಿಬಂದಾಗ್ಯೂ ನಾವು 4326 ಕೋಟಿ ರೂ.ಗಳ ಯೋಜನಾ ವೆಚ್ಚವನ್ನು ಸಾಧಿಸಿದ್ದೇವೆ.

1998–99ರ ವಾರ್ಷಿಕ ಯೋಜನೆ

26. 1998-99ರ ವಾರ್ಷಿಕ ಯೋಜನೆಗೆ ಲಭ್ಯವಾಗುವ ಸಂಪನ್ಮೂಲ ಪ್ರಮಾಣವನ್ನು ಯೋಜನಾ ಆಯೋಗದೊಡನೆ ಸಮಾಲೋಚಿಸಿ ಗುರುತಿಸಲಾಗಿದೆ. ಲೋಕಸಭೆಯ ವಿಸರ್ಜನೆ, ಹಾಗೂ ನಂತರ ನಡೆದ ಲೋಕಸಭಾ ಚುನಾವಣೆಯ ಕಾರಣದಿಂದಾಗಿ ವಾರ್ಷಿಕ ಯೋಜನೆಯ ಗಾತ್ರವನ್ನು ನಿರ್ಧರಿಸುವ ಬಗ್ಗೆ ಮುಖ್ಯಮಂತ್ರಿಗಳು ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರ ಜೊತೆ ಚರ್ಚೆ ಸಾಧ್ಯವಾಗಲಿಲ್ಲ. ಕೇಂದ್ರ ಸರ್ಕಾರದ ಮುಂಗಡಪತ್ರಮಂಡನೆಯ ನಂತರ ಸಂಪನ್ಮೂಲ ಸಂಗ್ರಹಣೆಯ ಸ್ಪಷ್ಟ ಚಿತ್ರಣ ದೊರೆಯಲಿದೆ. ನಾವು ವಾರ್ಷಿಕ ಯೋಜನೆಯ ಗಾತ್ರವನ್ನು 5353 ಕೋಟಿ ರೂಪಾಯಿಗಳಿಗೆ ನಿಗದಿಗೊಳಿಸಿದ್ದೇವೆ. ಜಿಲ್ಲಾ ಯೋಜನಾ ಗಾತ್ರ 732 ಕೋಟಿ ರೂಪಾಯಿಗಳಾಗಿದೆ. ಯೋಜನಾ ಆಯೋಗದ ಜೊತೆಗಿನ ಚರ್ಚೆಯ ನಂತರ ರಾಜ್ಯದ ಯೋಜನಾ ಗಾತ್ರ ಅಂತಿಮಗೊಳ್ಳಲಿದೆ.

27. ನಾವು ಎಂಟನೆ ಯೋಜನೆಯಲ್ಲಿ ಈಗಾಗಲೇ ಆರಂಭಿಸಿರುವ ಅವಶ್ಯಕ ಕಾರ್ಯಕ್ರಮಗಳನ್ನು ಬಲಪಡಿಸಿ ಮುಂದುವರಿಸಲು ಒಂಭತ್ತನೆ ಯೋಜನೆಯಲ್ಲಿ ಒತ್ತು ನೀಡಲಾಗಿದೆ. ಈ ನಿಟ್ಟಿನಲ್ಲಿ ನಾನು ನೀರಾವರಿ ವಲಯಕ್ಕೆ 386 ಕೋಟಿ ರೂ.ಗಳನ್ನು ವಿದ್ಯುತ್ ವಲಯಕ್ಕೆ 198 ಕೋಟಿ ರೂ.ಗಳನ್ನು ಹೆಚ್ಚಾಗಿ ನಿಗದಿಗೊಳಿಸಿದ್ದೇನೆ. ಸಾಮಾಜಿಕ ವಲಯದ ಹಂಚಿಕೆಯಲ್ಲಿ 91 ಕೋಟಿ ರೂ.ಗಳಷ್ಟು ಏರಿಕೆಯಾಗಿದೆ. ಯೋಜನೇತರ ಬಾಬಿನಡಿಯಲ್ಲಿ ಕೂಡ ಈಗಾಗಲೇ ಜಾರಿಗೊಳಿಸಿರುವ ಕಾರ್ಯಕ್ರಮಗಳನ್ನು ಸಾಧಿಸುವುದು ಬಲಪಡಿಸುವ ಮೂಲಕ ಪ್ರಮುಖ ವಲಯಗಳಲ್ಲಿ ಬೆಳವಣಿಗೆಯನ್ನು ಸಾಧಿಸುವುದು ಮತ್ತು ಆ ಮೂಲಕ ರಾಜ್ಯದ ಒಟ್ಟಾರೆ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು ನಮ್ಮ ಉದ್ದೇಶವಾಗಿದೆ.

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್

ಅ. ಪಂಚಾಯತ್ ರಾಜ್

28. ಜನತಾಂತ್ರಿಕ ಅಧಿಕಾರ ವಿಕೇಂದ್ರೀಕರಣದಲ್ಲಿ ನಮಗೆ ಅಚಲ ವಿಶ್ವಾಸವಿದೆ. ಇದಕ್ಕಾಗಿ ನಾವು ಪಂಚಾಯತ್ ರಾಜ್ ಸಂಸ್ಥೆಗಳನ್ನು ಸದೃಢಗೊಳಿಸಲು ಕರ್ನಾಟಕ ರಾಜ್ಯ ಪಂಚಾಯತ್ ಕಾಯಿದೆ 1993ಕ್ಕೆ ತಿದ್ದುಪಡಿಗಳನ್ನು ತಂದಿದ್ದೇವೆ. ಇದರನ್ವಯ ಪಂಚಾಯತ್ ರಾಜ್ ಸಂಸ್ಥೆಗಳ ಕೆಲವು ಕಾರ್ಯಗಳು ಕಡ್ಡಾಯವಾಗಿವೆ ಹಾಗೂ ನಿರ್ಬಂಧಕವಾಗಿದೆ. ಈ ಮುಂಚೆ ವಿಭಾಗ ಹಾಗೂ ಜಿಲ್ಲಾ ಮಟ್ಟಗಳಲ್ಲಿ ಇದ್ದ ಅಧಿಕಾರವನ್ನು ಈಗ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವಹಿಸಲಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಪಂಚಾಯತ್ ಪರಿಷತ್ತನ್ನು ರಚಿಸಲಾಗಿದೆ. ಕೆಲವು ನಿರ್ದಿಷ್ಟ ಯೋಜನಾ ಕಾರ್ಯಕ್ರಮಗಳ ಜಾರಿಗಾಗಿ ತಾಲ್ಲೂಕು ಪಂಚಾಯತ್ ನಿಧಿಯನ್ನು ಬಳಸಲು ಸಧ್ಯದಲ್ಲೇ ಆರಂಭಿಸಲಾಗುವುದು. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸದಸ್ಯರುಗಳು ಸಕ್ರಿಯವಾಗಿ ಪಾಲ್ಗೊಳ್ಳಲು ಅನುವಾಗುವಂತೆ ಮುಂದಿನ ಆರ್ಥಿಕ ವರ್ಷದಿಂದ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಸದಸ್ಯರುಗಳಿಗೆ ಗೌರವ ಧನವನ್ನು ನೀಡಲಾಗುವುದು.

ಆ. ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ

29. ಎಲ್ಲ ಹಳ್ಳಿಗಳಿಗೆ ಶುದ್ಧವಾದ ಕುಡಿಯುವ ನೀರನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುವುದು ನಮ್ಮ ಪ್ರಥಮ ಆದ್ಯತೆಯಾಗಿದೆ. ರಾಜ್ಯದ 37,507 ಹಳ್ಳಿಗಳಲ್ಲಿ ವಾಸಿಸುತ್ತಿರುವ ಶೇಕಡಾ 69ಕ್ಕೂ ಹೆಚ್ಚು ಜನಸಮುದಾಯಕ್ಕೆ ರಾಷ್ಟ್ರೀಯ ನಿಗದಿತ ಮಾನದಂಡಕ್ಕೆ ಅನುಗುಣವಾಗಿ ಪ್ರತಿವ್ಯಕ್ತಿಗೆ ಪ್ರತಿನಿತ್ಯ (ಎಲ್‌ಪಿಸಿಡಿ) 40 ಲೀಟರ್ ನೀರನ್ನ ಒದಗಿಸಲಾಗಿದೆ. ಈವರೆಗೆ ಸಾರ್ವಜನಿಕ ಜಲಮೂಲದಿಂದ ಕುಡಿಯುವ ನೀರನ್ನು ಪೂರೈಸಲಾಗದಿರುವ 2,000 ಜನವಸತಿಗಳಿಗೆ 1998-99ನೇ ಸಾಲಿನೊಳಗೆ ಶುದ್ಧ ನೀರನ್ನು ಒದಗಿಸಲಾಗುವುದು. ಅಧಿಕ ಫ್ಲೋರಿನ್ ಮತ್ತು ಲವಣಾಂಶ ಹಾಗೂ ಮತ್ತಿತರೆ ರಾಸಾಯನಿಕ ಪದಾರ್ಥಗಳ ಬೆರಕೆಯಿಂದಾಗಿ ಕುಡಿಯುವ ನೀರಿನ ಕೊರತೆಯನ್ನು ಎದುರಿಸುತ್ತಿರುವ ಗ್ರಾಮಗಳಿಗೆ ರಾಜೀವ್ ಗಾಂಧಿ ರಾಷ್ಟ್ರೀಯ ಕುಡಿಯುವ ನೀರಿನ ಯೋಜನೆಯಡಿ ಶುದ್ಧವಾದ ಕುಡಿಯುವ ನೀರಿನ ಪೂರೈಕೆ ಮಾಡಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿನ ಪೂರೈಕೆ ಹಾಗೂ ಒಳಚರಂಡಿ ಸೌಲಭ್ಯಗಳನ್ನು ಒದಗಿಸಲು 141 ಕೋಟಿ ರೂ.ಗಳ ಅಂದಾಜು ವೆಚ್ಚದ ವಿದೇಶಿ ನೆರವಿನ ಮೂರು ಯೋಜನೆಗಳನ್ನು ರಾಜ್ಯ ಸರ್ಕಾರ ಜಾರಿಗೊಳಿಸುತ್ತಿದೆ. ಕ್ರಿ.ಶ. 2000ನೇ ಇಸವಿಯೊಳಗೆ ಇವುಗಳನ್ನು ಪೂರ್ಣಗೊಳಿಸುವ ಗುರಿ ಇಟ್ಟುಕೊಳ್ಳಲಾಗಿದೆ.

30. ಗ್ರಾಮೀಣ ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ನಿರ್ಮಲ ಗ್ರಾಮ ಯೋಜನೆಯಡಿ 3.60 ಲಕ್ಷ ಶೌಚಾಲಯಗಳನ್ನು ನಿರ್ಮಿಸಲಾಗಿದೆ. 1998-99ನೇ ಸಾಲಿನಲ್ಲಿ 2.78 ಲಕ್ಷ ಶೌಚಾಲಯಗಳನ್ನು ನಿರ್ಮಿಸುವ ಗುರಿ ಹಮ್ಮಿಕೊಳ್ಳಲಾಗಿದೆ.

ಇ. ಗ್ರಾಮೀಣ ಉದ್ಯೋಗ ಮತ್ತು ಬಡತನ ನಿರ್ಮೂಲನ

31. 1997-98ನೇ ಸಾಲಿನಲ್ಲಿ ಉದ್ಯೋಗ ಭರವಸೆ ಯೋಜನೆಯನ್ನು ರಾಜ್ಯದ ಇನ್ನೂ 13 ತಾಲ್ಲೂಕುಗಳಿಗೆ ವಿಸ್ತರಿಸಲಾಗಿದೆ ಎಂದು ಈ ಸದನಕ್ಕೆ ತಿಳಿಸಲು ನನಗೆ ಸಂತೋಷವಾಗುತ್ತದೆ. ಇದರಿಂದಾಗಿ ರಾಜ್ಯದ ಎಲ್ಲಾ 175 ತಾಲ್ಲೂಕುಗಳು ಈ ಯೋಜನೆಯ ವ್ಯಾಪ್ತಿಗೆ ಒಳಪಟ್ಟುಂತಾಗುತ್ತದೆ. ಜಲಾನಯನ ಅಭಿವೃದ್ಧಿ ಯೋಜನೆಯಡಿ ರಾಜ್ಯದ 14 ಜಿಲ್ಲೆಗಳಲ್ಲಿನ 102 ತಾಲ್ಲೂಕುಗಳಲ್ಲಿನ ಬರಪೀಡಿತ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮ (ಡಿಪಿಎಪಿ) ಮತ್ತು ಮರುಭೂಮಿ ಅಭಿವೃದ್ಧಿ ಕಾರ್ಯಕ್ರಮಗಳನ್ನು (ಡಿಡಿಪಿ) ಜಾರಿಗೊಳಲಾಗುತ್ತಿದೆ. 1997-98ನೇ ಸಾಲಿನಲ್ಲಿ ವಿವಿಧ ಉದ್ಯೋಗ ನೀಡಿಕೆ ಕಾರ್ಯಕ್ರಮಗಳಡಿಯಲ್ಲಿ 1997ರ ಡಿಸೆಂಬರ್ ಅಂತ್ಯದವರೆಗೆ 388 ಲಕ್ಷ ಮಾನವ ದಿನಗಳ ಉದ್ಯೋಗವನ್ನು ಒದಗಿಸಲಾಗಿತ್ತು. ಅಲ್ಲದೆ 155.34 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮೂಲಭೂತ ಸೌಕರ್ಯಗಳನ್ನು ಸೃಜಿಸಲಾಗಿದೆ.

ಈ. ಸ್ವಸ್ತಿ ಗ್ರಾಮ ಯೋಜನೆ

32. ನಮ್ಮ ಹಳ್ಳಿಗಳನ್ನು ಪುನರ್ ನಿರ್ಮಿಸುವ ಆಶಯದ 'ಸ್ವಸ್ತಿ ಗ್ರಾಮ ಯೋಜನೆ' ಎನ್ನುವ ನೂತನ ಗ್ರಾಮೀಣಾಭಿವೃದ್ಧಿ ಆಂದೋಲನವನ್ನು 1997 ಅಕ್ಟೋಬರ್ 2ರಿಂದ ಆರಂಭಿಸಲಾಗಿದೆ. ಹಲವಾರು ನಿಗಮ, ಸಂಸ್ಥೆಗಳು 20 ಹಳ್ಳಿಗಳನ್ನು ಅಭಿವೃದ್ಧಿಗೊಳಿಸಲು ಮುಂದೆ ಬಂದಿದೆ. 1998-99ನೇ ಸಾಲಿನಲ್ಲಿನ ಇನ್ನೂ 100 ಹಳ್ಳಿಗಳನ್ನು ಈ ಯೋಜನೆಯಲ್ಲಿ ಅಭಿವೃದ್ಧಿಗೊಳಿಸಲಾಗುವುದು ಎಂದು ತಿಳಿಸಲು ನನಗೆ ತುಂಬಾ ಸಂತೋಷವಾಗುತ್ತಿದೆ.

ಕೃಷಿ

33. ಆಹಾರ ಧಾನ್ಯ ಉತ್ಪಾದನೆಯ ಗುರಿಯನ್ನು 1997-98ನೇ ಸಾಲಿನಲ್ಲಿ 93.64 ಲಕ್ಷ ಟನ್‌ಗೆ ನಿಗದಿಪಡಿಸಲಾಗಿದೆ. ಮೇ ತಿಂಗಳಲ್ಲಿ ಬೀಳಬೇಕಿದ್ದ ಮುಂಗಾರು ಪೂರ್ವ ಮಳೆಯ ವೈಫಲ್ಯ; ಹಾಗೂ ತಡವಾಗಿ ಆರಂಭವಾದ ಮುಂಗಾರು ಮಳೆ; ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಅನಾವೃಷ್ಟಿ ಹಾಗೂ ನವೆಂಬರ್ ತಿಂಗಳಲ್ಲಿ ಬಿದ್ದ ಅಕಾಲಿಕ ಮಳೆಯ ಕಾರಣಗಳಿಂದಾಗಿ ಆಹಾರ ಧಾನ್ಯ ಉತ್ಪಾದನೆ ನಿರೀಕ್ಷಿತ ಗುರಿಗಿಂತ ತುಸು ಕಡಿಮೆಯಾಗಬಹುದು. ಉತ್ತಮ ಮಳೆಗಾಲದ ವರ್ಷವನ್ನು ನಿರೀಕ್ಷಿಸಿ, 1998-99ನೇ ಸಾಲಿಗೆ ಆಹಾರ ಉತ್ಪಾದನೆಯ ಗುರಿಯನ್ನು 97.80 ಲಕ್ಷ ಟನ್‌ಗೆ ನಿಗದಿಪಡಿಸಲಾಗಿದೆ.

34. ಬ್ರಿಟನ್‌ಗೆ ಸಾಗರೋತ್ತರ ಅಭಿವೃದ್ಧಿ ಸಂಸ್ಥೆಯ ನೆರವಿನೊಡನೆ ಬಿಜಾಪುರ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ತಲಾ ಒಂದು ಬೃಹತ್ ಜಲಾನಯನ ಯೋಜನೆಯನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಲು ಮಂಜೂರಾತಿ ದೊರಕಿದೆಯೆಂದು ಸದನಕ್ಕೆ ತಿಳಿಸಲು ಸಂತೋಷಿಸುತ್ತೇನೆ. ಈ ಯೋಜನೆಗಳಿಗೆ ಒಟ್ಟು 83.4 ಕೋಟಿ ರೂ.ಗಳು ವೆಚ್ಚವಾಗುತ್ತದೆ.

35. ಆಲೂಗಡ್ಡೆಯ ಮಾರಾಟದಲ್ಲಿ ಉಂಟಾದ ಅನಿರೀಕ್ಷಿತ ಬೆಲೆ ಕುಸಿತದಿಂದ ಕಂಗಾಲಾಗಿದ್ದ ಹಾಸನ, ಚಿಕ್ಕಮಗಳೂರು ಮತ್ತು ಧಾರವಾಡ ಜಿಲ್ಲೆಗಳ ರೈತರಿಗೆ ಸರ್ಕಾರ ನೆರವು ನೀಡಿತು.

ಕರ್ನಾಟಕ ತೋಟಗಾರಿಕೆ ಉತ್ಪಾದಕರ ಮಾರುಕಟ್ಟೆ ಸಹಕಾರ ಸಂಘ (ಹಾಪ್‌ಕಾಮ್ಸ್) ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮತ್ತು ರಾಜ್ಯ ಸಹಕಾರಿ ಮಾರುಕಟ್ಟೆ ಒಕ್ಕೂಟದ ಮೂಲಕ ಒಟ್ಟು 9,500 ಟನ್ ಆಲೂಗಡ್ಡೆಯನ್ನು ಖರೀದಿಸಲಾಯಿತು.

36. ಕೇಂದ್ರ ಪ್ರಾಯೋಜಿತ "ಪ್ರಾಯೋಗಿಕ ಬೆಳೆ ವಿಮೆ ಯೋಜನೆ" ಯನ್ನು 1997-98ನೇ ಬೆಳೆ ವರ್ಷದಲ್ಲಿ ಒಂದು ವರ್ಷಕ್ಕೆ ಮಾತ್ರ ಬಿಜಾಪುರದಲ್ಲಿ ಜಾರಿಗೊಳಿಸಲಾಯಿತು. ಈ ಯೋಜನೆಯಲ್ಲಿ ಬೆಳೆಸಾಲ ಪಡೆದಿರಲಿ ಅಥವಾ ಪಡೆಯದಿರಲಿ, ಬಿಜಾಪುರದ ಎಲ್ಲಾ ಸಣ್ಣ ಮತ್ತು ಅತಿ ಸಣ್ಣ ರೈತರು ಕೆಲವು ನಿರ್ದಿಷ್ಟ ಬೆಳೆಗಳಿಗೆ ವಿಮಾ ಸೌಲಭ್ಯ ವ್ಯಾಪ್ತಿಗೆ ಒಳಪಡುತ್ತಾರೆ.

37. ವಿಶ್ವ ಬ್ಯಾಂಕಿನ ನೆರವನ್ನು ಕೋರಲು, ಜಲಾನಯನ ಅಭಿವೃದ್ಧಿ ಹಾಗೂ ಸಣ್ಣ ನೀರಾವರಿ ಕೆರೆಗಳ ದುರಸ್ತೀಕರಣ, ನವೀಕರಣ ಯೋಜನೆಗಳನ್ನು ಅಡಕಗೊಳಿಸಿ ಸಮಗ್ರ ಕೃಷಿ ಅಭಿವೃದ್ಧಿ ಯೋಜನೆಯನ್ನು ಪುನರ್ ರೂಪಿಸಲು ಸರ್ಕಾರ ಉದ್ದೇಶಿಸಿದೆ.

ತೋಟಗಾರಿಕೆ

38. ಸರ್ಕಾರದ ನೂತನ ಕೃಷಿ ನೀತಿಯನ್ವಯ ತೋಟಗಾರಿಕೆ ಕ್ಷೇತ್ರವು ಅಭಿವೃದ್ಧಿಯಲ್ಲಿ ಆದ್ಯತಾ ವಲಯವಾಗಿದೆ. ತೋಟಗಾರಿಕೆ ಬೆಳೆಗಳ ಕ್ಷೇತ್ರ ವಿಸ್ತರಣೆ; ತೋಟಗಾರಿಕೆ ಉತ್ಪನ್ನಗಳ ಹೆಚ್ಚಳ ಮತ್ತು ಉತ್ತಮ ತಳಿ ಸಸಿಗಳ ಉತ್ಪಾದನೆ ಮತ್ತು ವಿತರಣೆಗಾಗಿ ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿದೆ.

39. ಸಣ್ಣ ಮತ್ತು ಅತಿಸಣ್ಣ ತೋಟಗಾರಿಕೆ ಬೆಳೆಗಾರರನ್ನು ಪ್ರೋತ್ಸಾಹಿಸಲು ಆರಂಭವಾಗಿರುವ 'ನಮ್ಮ ಮನೆ ನಮ್ಮ ತೋಟ' ಯೋಜನೆಗೆ 1998-99ನೇ ಸಾಲಿನಲ್ಲಿ 40 ಲಕ್ಷ ರೂ.ಗಳನ್ನು ಒದಗಿಸಲಾಗಿದೆ. ಸುಮಾರು 13 ಕೋಟಿ ರೂ.ಗಳ ವೆಚ್ಚದ ಸಮಗ್ರ ಸಹಕಾರಿ ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಹಾಗೂ ರಫ್ತು ಯೋಜನೆಯೊಂದನ್ನು ಕರ್ನಾಟಕವು ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ಮಂಡಳಿಯ ಮಂಜೂರಾತಿಗಾಗಿ ಸಲ್ಲಿಸಿದೆ.

40. ಸರ್ಕಾರವು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನೋಂದಾಯಿತ 'ತೋಟಗಾರಿಕಾ ಸೇವಾ ಕೇಂದ್ರ'ಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ಈ ಕೇಂದ್ರಗಳು ಯೋಜನಾ ವರದಿಯ ತಯಾರಿ ಮತ್ತು ಅನುಷ್ಠಾನದಲ್ಲಿ ಬೆಳೆಗಾರರಿಗೆ ನೆರವು ನೀಡಲಿವೆ.

ಸಹಕಾರ

41. ಆರ್ಥಿಕ ಉದಾರೀಕರಣದ ಹಿನ್ನೆಲೆಯಲ್ಲಿ ಸಹಕಾರ ಸಂಸ್ಥೆಗಳ ಅಭಿವೃದ್ಧಿಗಾಗಿ ಕನಿಷ್ಠ ನಿಯಂತ್ರಣ ಇರುವಂತೆ ಸಹಕಾರ ನೀತಿಯೊಂದನ್ನು ರೂಪಿಸಲಾಗುವುದು. ಸರ್ಕಾರದಿಂದ ಯಾವುದೇ ಆರ್ಥಿಕ ನೆರವು ಪಡೆಯದ ಸಹಕಾರಿ ಸಂಸ್ಥೆಗಳಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡಲು ಈಗಿರುವ ಕಾಯಿದೆಗೆ ತಿದ್ದುಪಡಿ ತರಲಾಗುವುದು. "ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ" ಎಂಬ ಹೊಸ ಕಾಯಿದೆಯನ್ನು ತರಲು ಉದ್ದೇಶಿಸಲಾಗಿದೆ.

42. ನಿಯಂತ್ರಣ ಕಾರ್ಯದ ಜೊತೆಗೆ ಅಭಿವೃದ್ಧಿ ಚಟುವಟಿಕೆಗಳಿಗೂ ಹೆಚ್ಚಿನ ಆದ್ಯತೆ ನೀಡುವ ಸಲುವಾಗಿ ಕೃಷಿ ಮಾರುಕಟ್ಟೆ ಕಾಯಿದೆಗೆ ಸಮಗ್ರ ತಿದ್ದುಪಡಿ ತರಲು ಉದ್ದೇಶಿಸಲಾಗಿದೆ. ಬೆಲೆ ಸ್ಥಿರತೆ ಆವರ್ತನಾ ನಿಧಿಯೊಂದನ್ನು ಸ್ಥಾಪಿಸುವ ಮೂಲಕ ರೈತರು 'ಅಸಹಾಯಕ ಮಾರಾಟ' ಮಾಡುವುದನ್ನು ತಡೆಯಲು ಯೋಜನೆಯನ್ನು ರೂಪಿಸಲಾಗುವುದು. ಈ ಆವರ್ತನಾ ನಿಧಿಗೆ ಆರಂಭಿಕವಾಗಿ ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು (ಎಪಿಎಂಸಿ) ದೇಣಿಗೆ ನೀಡಲಿವೆ. ಇದಕ್ಕಾಗಿ ಹತ್ತು ಕೋಟಿ ರೂ. ಒದಗಿಸಲು ಉದ್ದೇಶಿಸಲಾಗಿದೆ.

43. ಸಹಕಾರಿ ವಲಯದಲ್ಲಿ ಹೊಸದಾಗಿ 11 ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ನಮಗೆ ಉದ್ದೇಶ ಕೋರಿಕೆ ಪತ್ರಗಳು (ಲೆಟರ್ ಆಫ್ ಇಂಟೆಂಟ್) ಬಂದಿವೆ. ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ಮಂಡಳಿ; ನಬಾರ್ಡ್; ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ಸಹಯೋಗದೊಡನೆ ಈ ಸಕ್ಕರೆ ಕಾರ್ಖಾನೆಗಳು ಆರಂಭವಾಗಲಿವೆ. ಸಕ್ಕರೆ ಉತ್ಪಾದನೆಯ ಜೊತೆಗೆ ಕಬ್ಬಿನ ಸಿಪ್ಪೆಯನ್ನು ಉಪಯೋಗಿಸಿ ವಿದ್ಯುತ್ ಉತ್ಪಾದಿಸುವುದನ್ನೂ ಸಂಯೋಜಿಸುವ ಮೂಲಕ ಈ ಕಾರ್ಖಾನೆಗಳು ಆರ್ಥಿಕವಾಗಿ ಲಾಭದಾಯಕವಾಗುವಂತೆ ನೋಡಿಕೊಳ್ಳಲಾಗುವುದು.

ಪಶುಸಂಗೋಪನೆ, ಹೈನು ಅಭಿವೃದ್ಧಿ ಹಾಗೂ ಮೀನುಗಾರಿಕೆ

44. ಪಶುಸಂಗೋಪನಾ ಸಂಸ್ಥೆಗಳಿಗೆ ಹೆಚ್ಚಿನ ತಾಂತ್ರಿಕ ಸೌಲಭ್ಯ ಒದಗಿಸುವ ದೃಷ್ಟಿಯಿಂ 100 ಪ್ರಾಥಮಿಕ ಪಶು ಆರೋಗ್ಯ ಕೇಂದ್ರಗಳನ್ನು, ಪಶು ಔಷಧಾಲಯಗಳಾಗಿ ಮೇಲ್ದರ್ಜೆಗೇರಿಸಲು ಹಾಗೂ 50 ಪಶು ಔಷಧಾಲಯಗಳನ್ನು ಪಶು ವೈದ್ಯಕೀಯ ಆಸ್ಪತ್ರೆಗಳಾಗಿ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ. 1998-99ನೇ ಸಾಲಿನಲ್ಲಿ ಹೊಸದಾಗಿ 100 ಪ್ರಾಥಮಿಕ ಪಶು ಆರೋಗ್ಯ ಕೇಂದ್ರಗಳನ್ನು ಆರಂಭಿಸಲಾಗುವುದು.

45. 1997-98ನೇ ಸಾಲಿನಲ್ಲಿ 23.24 ಕೋಟಿ ರೂಪಾಯಿ ವೆಚ್ಚದ ಸಮಗ್ರ ಸಾಗರ ಮೀನುಗಾರಿಕೆ ಅಭಿವೃದ್ಧಿ ಯೋಜನೆಯನ್ನು ಆರಂಭಿಸಲಾಗಿದೆ. ಇದೇ ರೀತಿ ಎನ್‌ಸಿಡಿಸಿ ನೆರವಿನಿಂದ 15.6 ಕೋಟಿ ರೂ. ವೆಚ್ಚದಲ್ಲಿ ಸಮಗ್ರ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

ನೀರಾವರಿ

46. ಕಳೆದ ಮೂರು ವರ್ಷಗಳಲ್ಲಿ ರಾಜ್ಯವು 4079 ಕೋಟಿ ರೂ.ಗಳನ್ನು ನೀರಾವರಿ ವಲಯದಲ್ಲಿ ತೊಡಗಿಸಿದೆ. ಅದರ ಹಿಂದಿನ ಮೂರು ವರ್ಷಗಳ ಅವಧಿಯಲ್ಲಿ 2091 ಕೋಟಿ ರೂ.ಗಳನ್ನು ತೊಡಗಿಸಿದ್ದನ್ನು ಇಲ್ಲಿ ಹೋಲಿಸಬಹುದಾಗಿದೆ. ಇದರಿಂದ ನೀರಾವರಿ ಸಾಮರ್ಥ್ಯದಲ್ಲಿ 1.30 ಲಕ್ಷ ಹೆಕ್ಟೇರ್ ಹೆಚ್ಚಳವಾಗಿದೆ. ನೀರಾವರಿ ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯ ಕನಿಷ್ಠ ವೆಚ್ಚವನ್ನಾದರೂ ಬಳಕೆದಾರರ ಮೇಲೆ ವಾಸ್ತವಿಕ ಬಳಕೆ ದರವನ್ನು ವಿಧಿಸುವ ಮೂಲಕ ವಸೂಲಿ ಮಾಡಬೇಕಾಗಿದೆ. ನೀರಿನ ತೆರಿಗೆಯನ್ನು ಪರಿಷ್ಕರಿಸುವ ಸಂಬಂಧ ಸರ್ಕಾರವು ಸಂಪುಟ ಉಪ-ಸಮಿತಿಯನ್ನು ಪುನರ್ರಚಿಸಿದೆ.

47. 1998-99ನೇ ಸಾಲಿನಲ್ಲಿ ಬೃಹತ್ ಮತ್ತು ಮಧ್ಯಮ ನೀರಾವರಿಗೆ 1481 ಕೋಟಿ ರೂ.ಗಳನ್ನು ಒದಗಿಸುವ ಮೂಲಕ ರಾಜ್ಯರು ನೀರಾವರಿ ವಿಷಯದಲ್ಲಿ ತನಗಿರುವ ಕಾಳಜಿಯನ್ನು ಮುಂದುವರಿಸಿದೆ. ಭಾರತ ಸರ್ಕಾರದಿಂದ ತ್ವರಿತ ನೀರಾವರಿ ಸಹಾಯಕ ಯೋಜನೆ (ಎ.ಐ.ಬಿ.ಪಿ) ಅನ್ವಯ ಹೆಚ್ಚಿನ ಸಾಲದ ನೆರವು ಪಡೆಯಲು ಪ್ರಯತ್ನಿಸಲಾಗುವುದು.

48. ಕೃಷ್ಣ ಭಾಗ್ಯಜಲ ನಿಗಮವು ಕಳೆದ ಮೂರು ವರ್ಷಗಳಲ್ಲಿ ಬಂಡವಾಳ ಮಾರುಕಟ್ಟೆಯಿಂದ 1093 ಕೋಟಿ ರೂ.ಗಳನ್ನು ಸಂಗ್ರಹಿಸಿದೆ. 1998-99ನೇ ಸಾಲಿನಲ್ಲಿ 800 ಕೋಟಿ ರೂ.ಗಳನ್ನು ಸಂಗ್ರಹಿಸಲು ಉದ್ದೇಶಿಲಾಗಿದೆ. ನಿಗಮದಲ್ಲಿ ಹಾಲಿ ಇರುವ ನಿಧಿಯ ಜೊತೆ ಈ ಹಣವನ್ನು ಸೇರಿಸಿ 1998-99ರಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ನಿಗಮವು 1550 ಕೋಟಿ ರೂ.ಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಅತ್ಯವಶ್ಯವಾದ ಕಾಮಗಾರಿಗಳನ್ನು ಗುರುತಿಸಿದ್ದು ಇವುಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿ ಕೃಷ್ಣಾ ನೀರಿನ ನಮ್ಮ ಪಾಲನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಪ್ರಯತ್ನಿಸಲಾಗುವುದು.

49. ಕಾವೇರಿ ಕಣಿವೆಯ ಹಾರಂಗಿ, ಹೇಮಾವತಿ, ಕಬಿನಿ, ಅರ್ಕಾವತಿ, ಕೃಷ್ಣರಾಜಸಾಗರ ಆಧುನೀಕರಣ, ಡಿ. ದೇವರಾಜ ಅರಸು ಕಾಲುವೆ ಹಾಗೂ ಇತರೆ ಮಧ್ಯಮ ನೀರಾವರಿ ಯೋಜನೆಗಳಿಗೆ ಸಾಕಷ್ಟು ಹಣ ಒದಗಿಸುವ ಮೂಲಕ ಇನ್ನೆರಡು ವರ್ಷಗಳಲ್ಲಿ ಇವುಗಳನ್ನು ಪೂರ್ಣಗೊಳಿಸಲಾಗುವುದು.

50. ಮಂಚನಬೆಲೆ, ವಾಟೆಹೊಳೆ, ಅಮರ್ಜಾ, ಲೋಯರ್ ಮುಲ್ಲಾಮರಿ, ಮಸ್ಕಿನಾಲಾ ಹಾಗೂ ಚುಲ್ಕಿ ನಾಲಾ, ಈ ಆರು ಮಧ್ಯಮ ನೀರಾವರಿ ಯೋಜನೆಗಳಿಗೆ 106.98 ಕೋಟಿ ರೂ.ಗಳ ನಬಾರ್ಡ್ ಸಾಲದ ನೆರವನ್ನು 1995-96 ರಿಂದ ತ್ವರಿತ ನೀರಾವರಿ ಯೋಜನೆಯಡಿ (ಆರ್‌ಐಡಿಎಫ್) ಪಡೆಯಲಾಗಿದ್ದು, ಇವು ಸದ್ಯವೇ ಪೂರ್ಣಗೊಳ್ಳಲಿವೆ. ಆರ್‌ಐಡಿಎಫ್ 2ನೇ ಯೋಜನೆಯಡಿ, ಗುಲ್ಬರ್ಗಾ ಜಿಲ್ಲೆಯ ಬೆಣ್ಣೆತೊರೆ ಯೋಜನೆ ಪೂರ್ಣಗೊಳಿಸಲು 50 ಕೋಟಿ ರೂ.ಗಳನ್ನು ನಬಾರ್ಡ್ ಮಂಜೂರು ಮಾಡಿದ್ದು ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದೆ.

51. ಈ ವರ್ಷ ಸಣ್ಣ ನೀರಾವರಿಗಾಗಿ 125 ಕೋಟಿ ರೂ.ಗಳನ್ನು ನಿಗದಿಗೊಳಿಸಿದೆ. 1997-98ರಲ್ಲಿ ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. 143.90 ಕೋಟಿ ರೂ.ಗಳ ನಬಾರ್ಡ್ ನೆರವಿನ ಆರ್‌ಐಡಿಎಫ್-1 ಯೋಜನೆಯಡಿ ಕೈಗೆತ್ತಿಕೊಂಡಿದ್ದ 84 ಸಣ್ಣ ನೀರಾವರಿ ಯೋಜನೆಗಳ ಪೈಕಿ 42 ಯೋಜನೆಗಳು ಈಗಾಗಲೇ ಪೂರ್ಣಗೊಂಡಿವೆ. ಉಳಿದವು ನಿರ್ಮಾಣದ ವಿವಿಧ ಹಂತಗಳಲ್ಲಿದ್ದು 1998ರ ಮಾರ್ಚ್‌ನೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಆರ್‌ಐಡಿಎಫ್- II ಯೋಜನಯಡಿ ಮೂರು ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು ಎರಡು ಯೋಜನೆಯಡಿ ಮೂರು ಯೋಜನೆಗಳನ್ನು ಕೈಗೆತ್ತಿಕೊಂಡಿದ್ದು ಎರಡು ಯೋಜನೆಗಳು ಪೂರ್ಣಗೊಳ್ಳಲಿದೆ. ಉಳಿದ ಒಂದು ಯೋಜನೆ 1998ರ ಮಾರ್ಚ್‌ನಲ್ಲಿ ಪೂರ್ಣಗೊಳ್ಳಲಿದೆ. ಮಹಾರಾಷ್ಟ್ರ ಸರ್ಕಾರದ ಜೊತೆ ಜಂಟಿ ಸಹಯೋಗದಲ್ಲಿ ಆರಂಭಿಸಿರುವ ನಾಲ್ಕು ಅಂತರಾಜ್ಯ ಬ್ಯಾರೇಜುಗಳ ಕಾಮಗಾರಿ ಪ್ರಗತಿಯಲ್ಲಿದೆ.

52. ಭಾರೀ ಮತ್ತು ಮಧ್ಯಮ ಹಾಗೂ ಸಣ್ಣ ನೀರಾವರಿ ಯೋಜನೆಗಳಿಗೆ ಒಟ್ಟು 1607 ಕೋಟಿ ರೂ.ಗಳನ್ನು ನಿಗದಿಗೊಳಿಸಲಾಗಿದೆ. ಇದು ರಾಜ್ಯ ಯೋಜನಾ ವೆಚ್ಚದ ಶೇಕಡಾ 30ರಷ್ಟಾಗಿದೆ. ಇದಲ್ಲದೆ ಕಾವೇರಿ ಕಣಿವೆ ಯೋಜನೆಗಳಿಗಾಗಿ 330 ಕೋಟಿ ರೂ.ಗಳನ್ನು ನಿಗದಿಗೊಳಿಸಲಾಗಿದೆ.

ಇಂಧನ

53. ನಾನು ಈಗಾಗಲೇ ಪ್ರಸ್ತಾಪಿಸಿದಂತೆ ಕರ್ನಾಟಕ ರಾಜ್ಯದ ವಿದ್ಯುತ್ ಪೂರೈಕೆ 1997-98ನೇ ಸಾಲಿನಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ ಗಮನಾರ್ಹವಾಗಿ ಸುಧಾರಿಸಿದೆ. 1996-97ರಲ್ಲಿ ರಾಜ್ಯದ ಸ್ವಂತ ವಿದ್ಯುತ್ ಉತ್ಪಾದನೆ 12,260 ಮಿಲಿಯನ್ ಯೂನಿಟ್ ಆಗಿತ್ತು. ಇದಕ್ಕೆ ಪ್ರತಿಯಾಗಿ 1997-98ರಲ್ಲಿ 15,529 ಮಿಲಿಯನ್ ಯೂನಿಟ್ ಉತ್ಪಾದನೆಯಾಗಿದೆ. ಪ್ರಸಕ್ತ ವರ್ಷ 97 ಮೆಗಾವಾಟ್ ಸಾಮರ್ಥ್ಯವನ್ನು ಸೇರಿಸಲಾಗಿದೆ. 1998-99ರಲ್ಲಿ ನಾವು ಮತ್ತೆ 450 ಮೆಗಾವಾಟ್ ಸಾಮರ್ಥ್ಯವನ್ನು ಸೇರಿಸುವ ನಿರೀಕ್ಷೆಯಲ್ಲಿದ್ದೇವೆ.

54. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಮತ್ತು ಕರ್ನಾಟಕ ವಿದ್ಯುತ್ ನಿಗಮಗಳು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಅನುವಾಗುವಂತೆ ಬಾಂಡ್ ಮತ್ತು ಠೇವಣಿ ಮೂಲಕ ಹಣ ಸಂಗ್ರಹಿಸಲು ಅನುಮತಿ ನೀಡಲಾಯಿತು. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ 100 ಕೋಟಿ ರೂ.ಗಳನ್ನು ಸಂಗ್ರಹಿಸಿದ್ದು ಇನ್ನೂ 300 ಕೋಟಿ ರೂ.ಗಳನ್ನು ಸಂಗ್ರಹಿಸಲಿದೆ. ಕೆಪಿಸಿಯು ಹೊಸ ಠೇವಣಿಯಲ್ಲಿ 249 ಕೋಟಿ ರೂ.ಗಳನ್ನು ಸಂಗ್ರಹಿಸಿದ್ದು ಬಾಂಡ್‌ಗಳ ರೂಪದಲ್ಲಿ 200 ಕೋಟಿ ರೂ.ಗಳನ್ನು ಸಂಗ್ರಹಿಸಲಿದೆ. 1998-99ನೇ ಸಾಲಿಗೆ ಕೆ.ಇ.ಬಿ. ಮತ್ತು ಕೆಪಿಸಿಯ ಬಂಡವಾಳ ವೆಚ್ಚವನ್ನು ಕ್ರಮವಾಗಿ 620 ಕೋಟಿ ರೂ.ಗಳು ಮತ್ತು 675 ಕೋಟಿ ರೂ.ಗಳೆಂದು ನಿಗದಿಗೊಳಿಸಲಾಗಿದೆ.

55. ಕಾಳಿ ನದಿ ಎರಡನೇ ಹಂತದ ಜಲವಿದ್ಯುತ್ ಯೋಜನೆ ವ್ಯಾಪ್ತಿಯಲ್ಲಿನ ಕದ್ರಾ ಮೊದಲ ಹಂತವು ಈ ವರ್ಷ ಕಾರ್ಯರಂಭ ಮಾಡಿದೆ. ಇದರ ಒಟ್ಟು ನಿರ್ಮಾಣ ವೆಚ್ಚ 37.97 ಕೋಟಿ ರೂ.ಗಳು. ಕೊಡಸಳ್ಳಿ ಪ್ರಥಮ ಘಟಕವನ್ನು 1998ರ ಮಾರ್ಚ್‌ನಲ್ಲಿ ಚಾಲನೆಗೊಳಿಸಲು ನಿಗದಿಗೊಳಿಸಲಾಗಿದೆ. ಕರ್ನಾಟಕ ವಿದ್ಯುತ್ ನಿಗಮದ ಪ್ರತಿಷ್ಠಿತ ಘಟಕವಾದ ರಾಯಚೂರು ಶಾಖೋತ್ಪನ್ನ ಕೇಂದ್ರವು ತನ್ನ ಉತ್ಪಾದನಾ ಸಾಮರ್ಥ್ಯವನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳುತ್ತಿದೆ. ಈ ಕೇಂದ್ರದ ಐದು ಮತ್ತು ಆರನೇ ಘಟಕಗಳ ನಿರ್ಮಾಣ ಕಾರ್ಯ ಕಳೆದ ವರ್ಷ ಆರಂಭವಾಗಿದೆ.

56. ಮಂಗಳೂರು ಪವರ್ ಕಾರ್ಪೊರೇಷನ್‌ನವರು ಮಂಗಳೂರಿನಲ್ಲಿ ಉತ್ಪಾದಿಸುವ ವಿದ್ಯುತ್‌ನ್ನು ವಿತರಿಸಲು ವಿದ್ಯುತ್ ರವಾನೆ ವಲಯದಲ್ಲಿ ವಿಶ್ವಖ್ಯಾತಿ ಹೊಂದಿರುವ ಇಂಗ್ಲೆಂಡಿನ ನ್ಯಾಷನಲ್ ಗ್ರಿಡ್ ಕಾರ್ಪೊರೇಷನ್ ಪಿಎಲ್ಸಿ ಸಂಸ್ಥೆ ಜೊತೆ ಜಂಟಿ ಸಹಯೋಗದಲ್ಲಿ ಒಪ್ಪಂದ ಮಾಡಿಕೊಳ್ಳಲು ಕೆ.ಇ.ಬಿ.ಗೆ ಸರ್ಕಾರ ಅನುಮತಿ ನೀಡಿದೆ. ಈ ಒಪ್ಪಂದದನ್ವಯ ಮಂಗಳೂರಿನಿಂದ ಬೆಂಗಳೂರಿಗೆ ವಿದ್ಯುತ್ ರವಾನೆ ಮಾರ್ಗವನ್ನು ನಿರ್ಮಿಸಲಾಗುವುದು. ಈ ರೀತಿ ಜಂಟಿ ಸಹಯೋಗದಲ್ಲಿ ವಿದ್ಯುತ್ ರವಾನೆಯ ಒಪ್ಪಂಧ ಮಾಡಿಕೊಂಡ ರಾಷ್ಟ್ರದಲ್ಲಿನ ಮೊದಲನೆ ರಾಜ್ಯ ನಮ್ಮದಾಗಿದೆ. ಸಣ್ಣ ಪ್ರಮಾಣದ ವಿದ್ಯುತ್ ಸಾಮರ್ಥ್ಯದ ಬಹು ಇಂಧನ ಘಟಕಗಳನ್ನು

ಸ್ಥಾಪಿಸಲು ಕೆ.ಇ.ಬಿ.ಯು ವಿದ್ಯುತ್ ಖರೀದಿ ಒಪ್ಪಂದಗಳನ್ನು ಮಾಡಿಕೊಂಡಿದೆ. ಈ ಯೋಜನೆಗಳನ್ನು ಆದಷ್ಟು ಶೀಘ್ರವಾಗಿ ಜಾರಿಗೊಳಿಸಲು ನಾವು ಎಲ್ಲಾ ಪ್ರಯತ್ನ ಮಾಡಲಿದ್ದೇವೆ.

57. ಪ್ರಸಕ್ತ ವರ್ಷ 10 ಮೇ.ವ್ಯಾ. ಗಾಳಿಯಿಂದ ವಿದ್ಯುತ್ ಮತ್ತು 36.5 ಮೆ.ವ್ಯಾ. ಸಾಮರ್ಥ್ಯದ ಕಿರು ಜಲವಿದ್ಯುತ್ ಘಟಕಗಳು ಕಾರ್ಯಾರಂಭ ಮಾಡಿವೆ.

58. ವಿದ್ಯುತ್ ವಲಯದಲ್ಲಿ ಉದಾರೀಕರಣ ನೀತಿಯನ್ನು ಅಳವಡಿಸುತ್ತಿರುವ ನಮ್ಮ ಪ್ರಯತ್ನಗಳ ಬಗ್ಗೆ ವಿಶ್ವಬ್ಯಾಂಕ್ ಆಸಕ್ತಿ ತೋರಿಸಿದೆ. ಅಲ್ಲದೆ ವಿದ್ಯುತ್ ಉತ್ಪಾದನೆ, ರವಾನೆ ಮತ್ತು ವಿತರಣಾ ವ್ಯವಸ್ಥೆಯ ಸುಧಾರಣೆಗಾಗಿ ಮೂಲ ಸವಲತ್ತುಗಳನ್ನು ನಿರ್ಮಿಸಲು ಅವಶ್ಯವಾದ ಆರ್ಥಿಕ ನೆರವನ್ನು ನೀಡಲೂ ಸಹ ವಿಶ್ವಬ್ಯಾಂಕ್ ಮುಂದೆ ಬಂದಿದೆ. ಈ ಸಂಬಂಧ ನಮ್ಮ ಅಗತ್ಯಗಳನ್ನು ಬಿಂಬಿಸುವ ವಿವರವಾದ ಯೋಜನಾ ವರದಿಯನ್ನು ತಯಾರಿಸುತ್ತಿದ್ದೇವೆ.

ಶಿಕ್ಷಣ

59. ಒಂಭತ್ತನೇ ಯೋಜನೆಯ ಅಂತ್ಯದ ವೇಳೆಗೆ ಸರ್ವರಿಗೂ ಪ್ರಾಥಮಿಕ ಶಿಕ್ಷಣ ನೀಡುವ ಗುರಿಯನ್ನು ಸಾಧಿಸುವುದಕ್ಕೆ ನಾವು ಬದ್ಧರಾಗಿದ್ದೇವೆ. 14 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸುವ ಕೇಂದ್ರ ಸರ್ಕಾರದ ನೀತಿಗೆ ನಮ್ಮ ಸಹಮತವಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ 1998-99ರಲ್ಲಿ 2206 ಕೋಟಿ ರೂ.ಗಳನ್ನು ಒದಗಿಸಲಾಗಿದೆ. 1996-97ರಲ್ಲಿ ಇದೇ ಕ್ಷೇತ್ರಕ್ಕೆ 1843 ಕೋಟಿ ರೂ.ಗಳನ್ನು ನೀಡಲಾಗಿತ್ತು.

1997-98ನೇ ಸಾಲಿನಲ್ಲಿ ನಮ್ಮ ಸಾಧನೆ ಇಂತಿವೆ.

- 8000 ಪ್ರಾಥಮಿಕ ಶಾಲಾ ಶಿಕ್ಷಕರ ಹೆಚ್ಚುವರಿ ಹುದ್ದೆಗಳನ್ನು ಸೃಜಿಸಲಾಗಿದೆ.
- 29,500 ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಿದ್ದು ಇವರು 1998ರ ಜೂನ್ ವೇಳೆಗೆ ಶಾಲೆಗಳಲ್ಲಿ ನಿಯುಕ್ತಿಗೊಳ್ಳಲಿದ್ದಾರೆ.
- ಕಡಿಮೆ ಜನವಸತಿ ಪ್ರದೇಶಗಳಲ್ಲಿ ನೂತನವಾಗಿ 4493 ಪ್ರಾಥಮಿಕ ಶಾಲೆಗಳನ್ನು ಆರಂಭಿಸಲಾಗಿದೆ. ಇದರಿಂದ ಮಕ್ಕಳಿಗೆ ಸಮೀಪದಲ್ಲೇ ಪ್ರಾಥಮಿಕ ಶಾಲೆ ಒದಗಿಸುವ ಗುರಿಯನ್ನು ನಾವು ಸಾಧಿಸಿದ್ದೇವೆ.
- 5115 ಶಾಲಾ ಕೊಠಡಿಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. 11,016 ಶಾಲಾ ಕೊಠಡಿಗಳ ನಿರ್ಮಾಣ ಕಾರ್ಯ ವಿವಿಧ ಹಂತದಲ್ಲಿದೆ.
- 936 ಪ್ರೌಢಶಾಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ.
- ವಿಶ್ವಬ್ಯಾಂಕ್ ನೆರವಿನ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಇನ್ನೂ ಏಳು ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ. ಅವುಗಳೆಂದರೆ ಬೆಂಗಳೂರು ಗ್ರಾಮಾಂತರ, ಮೈಸೂರು, ಧಾರವಾಡ, ಬಳ್ಳಾರಿ, ಗುಲ್ಬರ್ಗಾ, ಬೀದರ್ ಮತ್ತು ಬಿಜಾಪುರ.

- ಪದವಿಪೂರ್ವ ಶಿಕ್ಷಣದ ಪರೀಕ್ಷಾ ಪದ್ಧತಿಯಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸವನ್ನು ತುಂಬುವ ಸಲುವಾಗಿ ವಿನೂತನ ಪರೀಕ್ಷಾ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಇದರಂತೆ ಮೌಲ್ಯಮಾಪನ ಮಾಡಿದ ಉತ್ತರ ಪತ್ರಿಕೆಗಳ ಜೆರಾಕ್ಸ್ ಪ್ರತಿಯನ್ನು ಆಸಕ್ತ ವಿದ್ಯಾರ್ಥಿಗಳಿಗೆ ಕೋರಿಕೆಯ ಮೇರೆಗೆ ನೀಡಲಾಗುವುದು.

- 17 ನೂತನ ಎಂಜನಿಯರಿಂಗ್ ಕಾಲೇಜು ಮತ್ತು ನಾಲ್ಕು ಪಾಲಿಟೆಕ್ನಿಕ್ ಕಾಲೇಜುಗಳನ್ನು ಖಾಸಗಿ ವಲಯದಲ್ಲಿ ಆರಂಭಿಸಲು ಮಂಜೂರಾತಿ ನೀಡಲಾಗಿದೆ.

60. ರಾಜ್ಯದಲ್ಲಿ ಸಂಪೂರ್ಣ ಸಾಕ್ಷರತೆ ಸಾಧಿಸುವ ಗುರಿಗೆ ಸರ್ಕಾರ ಬದ್ಧವಾಗಿದೆ. 25 ಲಕ್ಷಕ್ಕೂ ಅಧಿಕ ವಯಸ್ಕ ಅನಕ್ಷರಸ್ಥರಿಗೆ ಸಾಕ್ಷರತೆ ಮೂಡಿಸಲು "ಕನ್ನಡ ನಾಡು - ಸಾಕ್ಷರ ನಾಡು" ಎಂಬ ಅಪೂರ್ವ ಯೋಜನೆಯನ್ನು ಸರ್ಕಾರವು ಆರಂಭಿಸಿದೆ. ಈ ಯೋಜನೆಯನ್ನು ರಾಜ್ಯೋತ್ಸವದ ದಿನದಂದು ಆರಂಭಿಸಿದ್ದು, ವಿಶೇಷವಾಗಿ ರೂಪಿಸಿದ ಪಠ್ಯಪುಸಕ್ತ ಅಕ್ಷರ ಕಲಿಕೆಗಾಗಿ ಉಪಯೋಗಿಸಲಾಗುತ್ತಿದೆ.

61. 1998-99ನೇ ಸಾಲಿನಲ್ಲಿ100 ನೂತನ ಸರ್ಕಾರಿ ಪ್ರೌಢಶಾಲೆಗಳನ್ನು ಆರಂಭಿಸಲು ಉದ್ದೇಶಿಸಿದ್ದೇವೆ. 12,500 ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು 3,500 ಪ್ರೌಢಶಾಲಾ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುವುದು. ಈಗ ಅಸ್ತಿತ್ವದಲ್ಲರುವ ಶಾಲೆಗಳನ್ನು ಬಲಪಡಿಸಲು 1998-99ನೇ ಸಾಲಿನಲ್ಲಿ ಸರ್ಕಾರವು ಆದ್ಯತೆ ನೀಡಲಿದೆ. ಕೆಲವು ಸರ್ಕಾರಿ ಶಾಲೆ ಹಾಗೂ ಕಾಲೇಜುಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯಿದೆ. ಅಸ್ತಿತ್ವದಲ್ಲಿರುವ ಶಾಲೆಗಳಿಗೆ ಕಟ್ಟಡ, ಪೀಠೋಪಕರಣ, ಪ್ರಯೋಗಾಲಯ ಉಪಕರಣ ಮುಂತಾದ ಸೌಲಭ್ಯಗಳನ್ನು ನೀಡುವ ಬಗ್ಗೆ ಹೆಚ್ಚು ಒಟ್ಟು ನೀಡಲಾಗುವುದು. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸಲು ಆಯ್ದ ಗ್ರಾಮೀಣ ಪ್ರೌಢಶಾಲೆಗಳಲ್ಲಿ 224 ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ 2.24 ಕೋಟಿ ರೂ. ಮೀಸಲಿಡಲಾಗಿದೆ.

62. ಪ್ರಾಥಮಿಕ ಹಾಗೂ ಪ್ರೌಢಶಾಲೆಯ 50,000 ಶಿಕ್ಷಕರಿಗೆ ತರಬೇತಿ ನೀಡಲಾಗುವುದು. ಕಪ್ಪುಹಲಗೆ ಯೋಜನೆಯಡಿ, 8205 ಪ್ರಾಥಮಿಕ ಶಿಕ್ಷಕರನ್ನು ನೇಮಿಸಲಾಗುವುದು. ಈ ಶಿಕ್ಷಕರಿಗೆ 32.82 ಕೋಟಿ ರೂ.ವೆಚ್ಚದಲ್ಲಿ ಬೋಧನೆ, ಕಲಿಕೆ ಸಾಮಗ್ರಿಗಳನ್ನು ನೀಡಲು ಉದ್ದೇಶಿಸಲಾಗಿದೆ.

63. ಮೈಸೂರು ವಿಶ್ವವಿದ್ಯಾಲಯದಲ್ಲಿ ಟಿಪ್ಪುಸುಲ್ತಾನ್ ಪೀಠವನ್ನು ಸ್ಥಾಪಿಸಲು ಉದ್ದೇಶಿಸಿದ್ದೇವೆ. ಇದಕ್ಕಾಗಿ 10 ಲಕ್ಷ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

ಆರೋಗ್ಯ

64. ಪೋಲಿಯೋ ನಿರ್ಮೂಲನೆಗಾಗಿ ನಡೆಸಿದ ವಿಶೇಷ ಪ್ರಯತ್ನ ಅತ್ಯಂತ ಯಶಸ್ವಿಯಾಗಿರುವುದು ಸಂತೋಷದ ಸಂಗತಿಯಾಗಿದೆ ಡಿಸೆಂಬರ್ 1997 ಹಾಗೂ ಜನವರಿ

1998 ರಲ್ಲಿ ಎರಡು ಹಂತಗಳಲ್ಲಿ ನಡೆಸಿದ ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಐದು ವರ್ಷದ ಒಳಗಿನ 65 ಲಕ್ಷ ಮಕ್ಕಳಿಗೆ ಪೋಲಿಯೋ ಹನಿ ಹಾಕಲಾಗಿದೆ.

65. ಪ್ರಸಕ್ತ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ನೆರವಿನ ಯೋಜನೆಯೊಂದನ್ನು ಅನುಷ್ಠಾನಗೊಳಿಸಲಾಗುವುದು. ಎರಡನೇ ಹಂತದಲ್ಲಿ ಇದನ್ನು ಇತರ ಒಂಭತ್ತು ಜಿಲ್ಲೆಗಳಿಗೆ ವಿಸ್ತರಿಸಲಾಗುವುದು. ಕುಟುಂಬ ನಿಯಂತ್ರಣ, ಶಿಶು ಆರೋಗ್ಯ ಮೊದಲಾದ ಕಾರ್ಯಕ್ರಮಗಳನ್ನು ಇದು ಒಳಗೊಂಡಿರುತ್ತದೆ.

66. ಜರ್ಮನ್ ರಾಷ್ಟ್ರ ನೆರವು ನೀಡುತ್ತಿರುವ ಕೆ.ಎಫ್.ಡಬ್ಲ್ಯೂ. ಯೋಜನೆಯನ್ನು ಈ ವರ್ಷ ಆರಂಭಿಸಲಾಗುವುದು. ಈ ಯೋಜನೆಯು ಎರಡು ಹಂತಗಳಲ್ಲಿ ಪೂರ್ಣಗೊಳ್ಳಲಿದ್ದು, ಗುಲ್ಬರ್ಗಾ ಕಂದಾಯ ವಿಭಾಗದ 51 ಆಸ್ಪತ್ರೆಗಳಿಗೆ ಅನ್ವಯವಾಗಲಿದೆ. ಪೆಟ್ರೋಲಿಯಮ್ ಉತ್ಪಾದಕ ಮತ್ತು ರಫ್ತು ರಾಷ್ಟ್ರಗಳ (ಒಪೆಕ್) ಹಣಕಾಸಿನ ನೆರವಿನಿಂದ ರಾಯಚೂರಿನಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಈಗಾಗಲೇ ನಿರ್ಮಾಣಗೊಳ್ಳುತ್ತಿದೆ.

67. ಜಯದೇವ ಹೃದ್ರೋಗ ಆಸ್ಪತ್ರೆಗಾಗಿ ಅಂದಾಜು 45 ಕೋಟಿ ರೂಪಾಯಿಗಳ ವೆಚ್ಚದ ಹೊಸ ಆಸ್ಪತ್ರೆ ಕಟ್ಟಡ ನಿರ್ಮಾಣ ಪೂರ್ಣಗೊಳ್ಳುತ್ತಿದೆ. ಇದು 530 ಹಾಸಿಗೆಯಿಂದ ವರ್ಷಂಪ್ರತಿ ಬೃಹತ್ ಆಸ್ಪತ್ರೆಯಾಗಿದೆ. ಈ ಆಸ್ಪತ್ರೆ ವಿಶ್ವದಲ್ಲಿನ ಬೃಹತ್ ಆಸ್ಪತ್ರೆಗಳಲ್ಲಿ ಒಂದೆಂದು ಹೇಳಲು ಹೆಮ್ಮೆಯೆನಿಸುತ್ತದೆ. ಇದು ಕೆಲವೇ ತಿಂಗಳುಗಳಲ್ಲಿ ಕಾರ್ಯಾರಂಭ ಮಾಡಲಿದೆ.

68. ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಯೋಜನೆ ಮತ್ತು ಕೆ.ಎಫ್.ಡಬ್ಲ್ಯೂ. ಯೋಜನೆಯಡಿ ಉತ್ತಮ ಆರೋಗ್ಯ ಸೌಲಭ್ಯಗಳನ್ನು ಒದಗಿಸಲು 252 ಸೆಕೆಂಡರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗುತ್ತಿದೆ.

69. ಕರ್ನಾಟಕ ಲೋಕಸೇವಾ ಆಯೋಗವು 600 ವೈದ್ಯರನ್ನು ಆಯ್ಕೆ ಮಾಡಿದ್ದು, ಅವರನ್ನು ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನೇಮಿಸಲಾಗಿದೆ. 1700 ಅರೆ ವೈದ್ಯಕೀಯ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ಅಲ್ಲದೆ ಇಲಾಖೆ ನೇಮಕಾತಿ ಸಮಿತಿಗಳ ಮೂಲಕ ಸಿಬ್ಬಂದಿ ಹಾಗೂ ದಾದಿಯರ 1965 ಹುದ್ದೆಗಳನ್ನು ತುಂಬಲು ಸಹ ಕ್ರಮ ಕೈಗೊಳ್ಳಲಾಗುತ್ತಿದೆ.

ವಾಣಿಜ್ಯ ಮತ್ತು ಕೈಗಾರಿಕೆ

70. ಕೇಂದ್ರ ಸರ್ಕಾರದ ಉದಾರೀಕರಣ ನೀತಿಯನ್ನು ನಾವು ಸದುಪಯೋಗಪಡಿಸಿಕೊಂಡಿದ್ದೇವೆ. ಕರ್ನಾಟಕ ರಾಜ್ಯದ ಸ್ನೇಹಪೂರ್ವ ಕೈಗಾರಿಕಾ ನೀತಿಯು ಅನೇಕ ಕೈಗಾರಿಕೆಗಳನ್ನು ಆಕರ್ಷಿಸಿದೆ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ 5400 ಕೋಟಿ ರೂ.ಗಳ ಬಂಡವಾಳ ಹೂಡಿಕೆಯಾಗಿದೆ.

71. ರಾಜ್ಯ ಸರ್ಕಾರವು 'ಸಮಗ್ರ ಮಾಹಿತಿ ತಂತ್ರಜ್ಞಾನ ನೀತಿ-1997' ನ್ನು ಘೋಷಿಸಿದೆ. ಮಾಹಿತಿ ತಂತ್ರಜ್ಞಾನ ಉದ್ದಿಮೆಗಳ ಅಭಿವೃದ್ಧಿಗಾಗಿ ಇಡೀ ದೇಶದಲ್ಲಿ ತರಲಾದ ಮೊದಲ ಕಾರ್ಯಕ್ರಮ ಇದಾಗಿದೆ. ಸಾಫ್ಟ್‌ವೇರ್ ಉದ್ಯಮಕ್ಕೆ ನೆರವಾಗಲು ಉದ್ದಿಮೆ ಬಂಡವಾಳ ನಿಧಿ

(ವೆಂಚರ್ ಕ್ಯಾಪಿಟಲ್ ಫಂಟ್) ಯನ್ನು ನಾವು ಈಗಾಗಲೇ ಸ್ಥಾಪಿಸಿದ್ದೇವೆ. ಕಳೆದ ಒಂದು ವರ್ಷದಲ್ಲಿ 1200 ಕೋಟಿ ರೂ. ಬಂಡವಾಳ ಹೂಡಿಕೆಯ ನಾಲ್ಕು ಬೃಹತ್ ಆಟೋಮೊಬೈಲ್ ಉದ್ದಿಮೆಗಳನ್ನು ಆಕರ್ಷಿಸುವಲ್ಲಿ ರಾಜ್ಯ ಸರ್ಕಾರ ಯಶಸ್ವಿಯಾಗಿದೆ. ಟಯೋಟ - ಕಿಲೋಸ್ಕರ್ ಮೋಟರ್ ಕಾರ್ಪೊರೇಷನ್, ಟೆಲ್ಕೋ, ಸ್ವೀಡನ್‌ನ ವೊಲ್ವೋ ಮತ್ತು ಟಿವಿಎಸ್ ಸುಜುಕಿ ಇವೇ ಆ ನಾಲ್ಕು ಬೃಹತ್ ಉದ್ದಿಮೆಗಳು.

72. ಉದ್ದಿಮೆದಾರರಿಗೆ ತ್ವರಿತ ಹಾಗೂ ಉಪಯುಕ್ತ ಸೇವೆ ನೀಡಲು ತಾಲ್ಲೂಕು ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಉದ್ದಿಮೆಗಳು ಕಾರ್ಯಾರಂಭ ಮಾಡಿದನಂತರ ಎದುರಿಸುವ ಸಮಸ್ಯೆಗಳ ನಿವಾರಣೆಗಾಗಿ 27 ಸಣ್ಣ ಕೈಗಾರಿಕಾ ನೆರವು ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

73. ಕೈಗಾರಿಕಾಭಿವೃದ್ಧಿಗೆ ಪೂರಕವಾದ ಎರಡು ಬೃಹತ್ ಅಭಿವೃದ್ಧಿ ಕೇಂದ್ರಗಳನ್ನು ಕೋಲಾರ ಜಿಲ್ಲೆಯ ಮಾಲೂರು ಮತ್ತು ಬಾಗಲಕೋಟೆಯಲ್ಲಿ ಸ್ಥಾಪಿಸಲಾಗುವುದು.

74. ಹೊಸ ಕೈಗಾರಿಕೆಗಳಿಗೆ ಬಂಡವಾಳವನ್ನು ಆಕರ್ಷಿಸಲು ಹಾಗೂ ಸ್ಥಳೀಯ ಜನರಿಗೆ ಉದ್ಯೋಗಾವಕಾಶ ಕಲ್ಪಿಸುವಲ್ಲಿ ಮಾನವ ಸಂಪನ್ಮೂಲವನ್ನು ಅಭಿವೃದ್ಧಿಗೊಳಿಸುವುದು ಅವಶ್ಯವಾಗಿದೆ. ಇದನ್ನು ಗಮದಲ್ಲಿರಿಸಿಕೊಂಡು, ಕೇಂದ್ರ ಪ್ರಾಯೋಜಿತ ಯೋಜನೆಯಡಿ ಹುಬ್ಬಳ್ಳಿ ಮತ್ತು ಹರಿಹರದಲ್ಲಿ ಎರಡು ಮಿನಿ ಟೂಲ್ ರೂಂ ಮತ್ತು ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

75. ಕರ್ನಾಟಕ ಸಾಂಪ್ರದಾಯಕ ಕರಕುಶಲಕಲೆಯನ್ನು ಪುನಶ್ಚೇತನಗೊಳಿಸಲು ಶ್ರೀಗಂಧ (ಸಾಗರ) ಬೀಟೆ (ಮೈಸೂರು) ಮತ್ತು ಕಂಚು (ಪೀಣ್ಯ, ಬೆಂಗಳೂರು) ಕಲೆಗಳಿಗೆ ನಿರ್ಧಿಷ್ಟವಾದ "ತರಬೇತಿ, ವಿನ್ಯಾಸ ಮತ್ತು ಅಭಿವೃದ್ಧಿ ಸಂಸ್ಥೆ" ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

76. ವಿಶ್ವೇಶ್ವರಯ್ಯ ಕೈಗಾರಿಕಾ ವ್ಯಾಪಾರ ಕೇಂದ್ರವು ಅತ್ಯುತ್ತಮ ದಾಖಲಾತಿ ಮತ್ತು ಮಾಹಿತಿಯನ್ನೊಳಗೊಂಡ "ರಫ್ತು ಮಾಹಿತಿ ವಿನಿಮಯ" ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದೆ. ಇದು ಭಾರತೀಯ ರಫ್ತುದಾರ ಸಂಘಟನಾ ಒಕ್ಕೂಟದ ಸಹಯೋಗದೊಡನೆ ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡ ಮತ್ತಿತರ ಕೇಂದ್ರಗಳಲ್ಲಿ ಸೇವೆ ನೀಡಲಿದೆ.

77. ಜವಳಿ ಉದ್ಯಮದ ಎಲ್ಲಾ ವಿಭಾಗಗಳಲ್ಲಿ ಹೊಸ ಘಟಕ ಸ್ಥಾಪನೆಗೆ ಖಾಸಗಿ ವಲಯಕ್ಕೆ ವಿಶೇಷ ಪ್ರೋತ್ಸಾಹ ನೀಡಲು ಸಹಕಾರ ಉದ್ದೇಶಿಸಿದೆ. ಹತ್ತಿಯನ್ನು ವಿಶೇಷವಾಗಿ ಬೆಳೆಯುವ ಉತ್ತರ ಕರ್ನಾಟಕ ಪ್ರದೇಶದಲ್ಲಿ ಹತ್ತಿ ನೂಲಿನ ಗಿರಣಿ ಘಟಕಗಳ ಖಾಸಗಿ ಉದ್ದಿಮೆದಾರರಿಗೆ ವಿಶೇಷ ಒತ್ತು ನೀಡಲಾಗುವುದು.

78. 1998-99ನೇ ಸಾಲಿನಲ್ಲಿ 3000 ಹೆಕ್ಟೇರು ಹೆಚ್ಚುವರಿ ಪ್ರದೇಶವನ್ನು ಹಿಪ್ಪುನೇರಳೆ ಬೇಸಾಯಕ್ಕೆ ಒಳಪಡಿಸಲಾಗುವುದು. ಇದು ಇನ್ನೂ ಸುಮಾರು 39,000 ಜನರಿಗೆ ಹೆಚ್ಚುವರಿ ಉದ್ಯೋಗಗಳನ್ನು ಸೃಜಿಸುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ

79. ಸಮಾಜ ಕಲ್ಯಾಣ ಇಲಾಖೆಯ ಯೋಜನಾ ಕಾರ್ಯಕ್ರಮಗಳಿಗೆ ಹಣ ಒದಗಿಸುವುದರ ಜೊತೆಗೆ ಇತರೆ ವಲಯಗಳಲ್ಲಿನ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಹಣವನ್ನು ಕ್ರೋಢೀಕರಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡವರಿಗೆ ಶಿಕ್ಷಣ, ವಸತಿ ಮತ್ತು ಸಣ್ಣ ನೀರಾವರಿ ಅಭಿವೃದ್ಧಿಗಾಗಿ ನೀಡಲಾಗುತ್ತಿದೆ. ಈನೀತಿಯು 1998-99ರಲ್ಲಿಯೂ ಮುಂದುವರಿಯುತ್ತದೆ. ಕಳೆದ ಮೂರು ವರ್ಷಗಳಲ್ಲಿ ನಾವು ವಿವಿಧ ಇಲಾಖೆಯಗಳಿಂದ ಹಣವನ್ನು ಒಗ್ಗೂಡಿಸಿ ಸಮಾಜ ಕಲ್ಯಾಣ ಇಲಾಖೆಗೆ 256.40 ಕೋಟಿ ರೂ.ಗಳನ್ನು ನೀಡಿದ್ದೇವೆ. ಹೀಗೆ ಒಗ್ಗೂಡಿಸಿದ ಹಣವನ್ನು ಬಿಡುಗಡೆ ಮಾಡುವಲ್ಲಿ ಇದ್ದ ಆಡಳಿತಾತ್ಮಕ ತೊಂದರೆಯನ್ನು ನಿವಾರಿಸಿ ಕಾರ್ಯಕ್ರಮದ ಶೀಘ್ರ ಜಾರಿಗೆ ಅನುವು ಮಾಡಿಕೊಡಲಾಗಿದೆ. 1998-99ರಲ್ಲಿ ಇತರೆ ವಲಯಗಳಿಂದ ನಾವು 50.85 ಕೋಟಿ ರೂ.ಗಳನ್ನು ಒಗ್ಗೂಡಿಸಿ ಸಮಾಜ ಕಲ್ಯಾಣ ಇಲಾಖೆಗೆ ನೀಡಿದ್ದೇವೆ. ಇನ್ನೂ ಹೆಚ್ಚಿನ ಹಣವನ್ನು ವರ್ಷಾಂತ್ಯದ ತನಕ ಒದಗಿಸಲಾಗುವುದು.

80. ಸರ್ಕಾರವು ನೂತನವಾಗಿ 25 ಮೆಟ್ರಿಕ್ ಪೂರ್ವ ಮತ್ತು 25 ಮೇಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಲು ಉದ್ದೇಶಿಸಿದೆ. ಇದಕ್ಕಾಗಿ ನಾನು 275 ಲಕ್ಷ ರೂ.ಗಳನ್ನು ಒದಗಿಸಿದ್ದೇನೆ. ಹಾಲಿ ನಿರ್ಮಾಣ ಹಂತದಲ್ಲಿರುವ 65 ವಿದ್ಯಾರ್ಥಿ ನಿಲಯಗಳ ಕಾಮಗಾರಿಯನ್ನು ಪೂರ್ಣಗೊಳಿಸಲು ಉದ್ದೇಶಿಸಿದ್ದು ಇದಕ್ಕಾಗಿ 400 ಲಕ್ಷ ರೂ.ಗಳನ್ನು ಒದಗಿಸಿದ್ದೇನೆ.

81. 450ಕ್ಕೂ ಹೆಚ್ಚು ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡವಿಲ್ಲದೆ ಬಾಡಿಗೆ ಕಟ್ಟಡಲ್ಲಿ ನಡೆಯುತ್ತಿವೆ. ಇವುಗಳಿಗೆ ಸ್ವಂತ ಕಟ್ಟಡ ಒದಗಿಸಿಕೊಡಲು ಉದ್ದೇಶಿಸಿದ್ದು 1998-99ನೇ ಸಾಲಿನಲ್ಲಿ 50 ವಿದ್ಯಾರ್ಥಿನಿಲಯ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಿದ್ದು ಇದಕ್ಕಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

82. ನಾವು 1997-98ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ವಿಶೇಷ ತರಗತಿಯನ್ನು ಆರಂಭಿಸಿದ್ದೇವೆ. ಈಗ ಏಳನೇ ತರಗತಿಗೆ ಕೂಡ ಸಾರ್ವತ್ರಿಕ ಪರೀಕ್ಷೆ ಇರುವುದರಿಂದ ಈ ವಿಶೇಷ ತರಗಿತ ಸೌಲಭ್ಯವನ್ನು 1998-99ನೇ ಸಾಲಿನಲ್ಲಿ ಏಳನೇ ತರಗತಿ ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗುವುದು.

83. ಅಂಬೇಡ್ಕರ್ ವಸತಿ ಯೋಜನೆಯಡಿ ಸುಮಾರು 60,000 ಮನೆಗಳ ನಿರ್ಮಾಣ ಕಾರ್ಯ ಬಾಕಿ ಉಳಿದಿದೆ. ಈ ಎಲ್ಲಾ ಮನೆಗಳನ್ನು 1998-99ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದ್ದು ಇದಕ್ಕಾಗಿ 49.80 ಕೋಟಿ ರೂ.ಗಳನ್ನು ಒದಗಿಸಿದ್ದೇನೆ. 1998-99ನೇ ಸಾಲಿನಲ್ಲಿ ಹೊಸದಾಗಿ 20,000 ಮನೆಗಳನ್ನು ಗುರಿಯನ್ನು ನಾವು ಹೊಂದಿದ್ದೇವೆ.

84. ಇದರ ಜೊತೆಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ನಿರ್ಮಾಣ, ಗಂಗಾ ಕಲ್ಯಾಣ, ಮಿನಿ ಅಂಬೇಡ್ಕರ್ ಭವನ ನಿರ್ಮಾಣ ಮತ್ತು ಬೆಂಗಳೂರು ನಗರದಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಭವನವನ್ನು ಪೂರ್ಣಗೊಳಿಸಲು ಅಗತ್ಯವಾದ ಹಣವನ್ನು ಒದಗಿಸಲಾಗುವುದು. ಬೆಂಗಳೂರು ನಗರದಲ್ಲಿ ನಿರ್ಮಾಣಗೊಳ್ಳುತ್ತಿರುವ ಅಂಬೇಡ್ಕರ್ ಭವನವನ್ನು 1998-99ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. ಇದಕ್ಕಾಗಿ 150 ಲಕ್ಷ ರೂ.ಗಳನ್ನು ಒದಗಿಸಲಾಗುತ್ತಿದೆ.

ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮ

85. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪಂಗಡ ಅಭಿವೃದ್ಧಿ ನಿಗಮವು 1997ರ ಡಿಸೆಂಬರ್ ಅಂತ್ಯದವರೆಗೆ 31.75 ಕೋಟಿ ರೂ.ಗಳ ವೆಚ್ಚದಲ್ಲಿ 21,385 ಮಂದಿ ಫಲಾನುಭವಿಗಳಿಗೆ ನೆರವು ನೀಡಿದೆ. 1998-99ನೇ ಸಾಲಿನಲ್ಲಿ ನಿಗಮವು 36,000 ಮಂದಿಗೆ ಆರ್ಥಿಕ ನೆರವು ನೀಡಲು ಉದ್ದೇಶಿಸಿದೆ. ಇವರಲ್ಲಿ 10,000 ಮಂದಿ ಫಲಾನುಭವಿಗಳಿಗೆ ಗಂಗಾ ಕಲ್ಯಾಣ ಯೋಜನೆಯಡಿ 25 ಕೋಟಿ ರೂ.ಗಳ ವೆಚ್ಚದಲ್ಲಿ 15,000 ಎಕರೆಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.

86. ಸ್ವಂತ ಉದ್ಯೋಗ,. ಜಮೀನು, ಖರೀದಿ, ನೀರಾವರಿ ಕೊಳವೆ ಬಾವಿ, ದೇವದಾಸಿಯರ ಪುನರ್‌ವಸತಿ ಮತ್ತಿತರ ಯೋಜನೆಯಡಿ 26,000 ಮಂದಿಗೆ 21.5 ಲಕ್ಷ ರೂ.ಗಳ ನೆರವನ್ನು ನೀಡಲಾಗುವುದು.

ಹಿಂದುಳಿದ ವರ್ಗದ ಅಭಿವೃದ್ಧಿ

87. ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ಅಭಿವೃದ್ಧಿಗೆ ಒತ್ತಾಸೆ ನೀಡುವುದನ್ನು ನಾವು ಮುಂದುವರಿಸುತ್ತೇವೆ. 1997-97ನೇ ಸಾಲಿನಲ್ಲಿ ಮಂಜೂರು ಮಾಡಿದ ಎಲ್ಲಾ 72 ವಿದ್ಯಾರ್ಥಿ ನಿಲಯಗಳು 97-98ನೇ ಸಾಲಿನಲ್ಲಿ ಕಾರ್ಯರಂಭ ಮಾಡಿವೆ. 12 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಮಂಜೂರಾಗಿದ್ದು 11 ಶಾಲೆಗಳು ಈಗಾಗಲೇ ಆರಂಭವಾಗಿವೆ. 'ಬೆಳ್ಳ ಬೆಳಕು' ಯೋಜನೆಯಡಿ 28 ಗ್ರಾಮಗಳಲ್ಲಿನ 1,229 ಕುಟುಂಬಗಳಿಗೆ ನೆರವು ನೀಡಲಾಗಿದೆ. ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ವಿದ್ಯಾರ್ಥಿನಿಲಯಗಳಿಗೆ ಆಹಾರ ಪದಾರ್ಥಗಳನ್ನು ಹಸಿರು ಕಾರ್ಡುದಾರರಿಗೆ ನೀಡುವ ದರದಲ್ಲಿ ಒದಗಿಸಲಾಗುತ್ತಿದೆ.

88. 1997-98ನೇ ಸಾಲಿನಲ್ಲಿ 2400 ವಿದ್ಯಾರ್ಥಿ ಸಾಮರ್ಥ್ಯದ 48 ಹೊಸ ವಿದ್ಯಾರ್ಥಿ ನಿಲಯಗಳನ್ನು ಮಂಡೂರು ಮಾಡಲಾಗಿತ್ತು. ಹಿಂದಿನ ವರ್ಷಗಳಲ್ಲಿ ಕೈಗೆತ್ತಿಕೊಂಡಿದ್ದ 28 ವಿದ್ಯಾರ್ಥಿ ನಿಲಯಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಅಲ್ಲದೆ 30 ಹೊಸ ವಿದ್ಯಾರ್ಥಿ ನೀಲಯ ಕಟ್ಟಡಗಳ ನಿರ್ಮಾಣ ಕಾರ್ಯ ಈ ವರ್ಷ ಕೈಗೆತ್ತಿಕೊಳ್ಳಲಾಗಿದೆ. ಒಟ್ಟಾರೆ 112 ಕಟ್ಟಡಗಳು ನಿರ್ಮಾಣದ ವಿವಿಧ ಹಂತಗಳಲ್ಲಿವೆ.

89. ನಿರ್ಮಾಣ ಹಂತದಲ್ಲಿರುವ 50 ವಿದ್ಯಾರ್ಥಿನಿಲಯಗಳನ್ನು 1998-99ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ನಿರ್ವಹಣೆ; ವಿದ್ಯಾರ್ಥಿ ವೇತನಗಳು, ಶುಲ್ಕ ರಿಯಾಯಿತಿ ಮತ್ತು ಬೆಳ್ಳ ಬೆಳಕು ಮುಂತಾದ ಯೋಜನೆಗಳನ್ನು ಮುಂದುವರಿಸಲಾಗುವುದು. ಬೆಳ್ಳ ಬೆಳಕು ಯೋಜನೆಯನ್ನು ಪ್ರವರ್ಗ II ಕ್ಕೂ ವಿಸ್ತರಿಸಲಾಗುವುದು.

90. 1998-99ನೇ ಸಾಲಿನಲ್ಲಿ ನೂತನವಾಗಿ 40 ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಲಾಗುವುದು. ಅಲ್ಲದೆ ರಾಜ್ಯದ ಆರು ವಿಶ್ವವಿದ್ಯಾಲಯ ಕೇಂದ್ರ ಸ್ಥಾನಗಳಲ್ಲಿ ಹೊಸದಾಗಿ ಆರು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಲಾಗುವುದು.

91. 'ಮಾಂಗಲ್ಯ ಭಾಗ್ಯ' ಎನ್ನುವ ನೂತನ ಯೋಜನೆಯನ್ನು ಈ ವರ್ಷ ಆರಂಭಿಸಲಾಗುವುದು. ಈ ಯೋಜನೆಯನ್ವಯ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದ ಕುಟುಂಬದ ಮೊದಲನೇ ಹೆಣ್ಣುಮಗುವಿನ ಮದುವೆಗೆ 5,000 ರೂ.ಗಳ ನೆರವು ಒದಗಿಸಲಾಗುತ್ತದೆ.

ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

92. 1998-99ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ 16,000 ಮಂದಿಗೆ ನೆರವು ನೀಡಲಾಗುವುದು. ಹಿಂದುಳಿದ ವರ್ಗಗಳವರಿಗೆ ಆರ್ಥಿಕ ಸಹಾಯ ಒದಗಿಸುವ ಸಲುವಾಗಿ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ 10 ಕೋಟಿ ರೂ.ಗಳ ಸರಳ ಸಾಲವನ್ನು ಪಡೆಯಲು ಉದ್ದೇಶಿಸಲಾಗಿದೆ. ಗಂಗಾ ಕಲ್ಯಾಣ ಯೋಜನೆಯಡಿ 135 ಘಟಕಗಳಿಗೆ ನೆರವು ನೀಡಲು ಉದ್ದೇಶಿಸಿದ್ದು ಇದರಿಂದ ಸುಮಾರು 2000 ಎಕರೆ ಜಮೀನು ನೀರಾವರಿ ಸೌಕರ್ಯ ಪಡೆಯಲಿದೆ. 1998-99ನೇ ಸಾಲಿನಿಂದ 'ಅರಿವು' ಎನ್ನುವ ನೂತನ ಯೋಜನೆಯನ್ನು ಆರಂಭಿಸಲಾಗುವುದು. ಇದರನ್ವಯ ವೃತ್ತಿ ಶಿಕ್ಷಣ ತರಗತಿಗಳಲ್ಲಿ ಓದಲು ಅನುಕೂಲವಾಗುವಂತೆ ಹಿಂದುಳಿದ ವರ್ಗಗಳ 500 ವಿದ್ಯಾರ್ಥಿಗಳಿಗೆ ಸರಳ ಸಾಲವನ್ನು ಒದಗಿಸಲಾಗುವುದು. ನಿಗಮದ ಚಟುವಟಿಕೆಗಳಿಗಾಗಿ 13.68 ಕೋಟಿ ರೂ.ಗಳನ್ನು ನೀಡಲಾಗುವುದು.

ಹಿಂದುಳಿದ ವರ್ಗಗಳ ಶಾಶ್ವತ ಆಯೋಗ

93. ಸುಪ್ರೀಂ ಕೋರ್ಟ್ ಮಾರ್ಗದರ್ಶನದಂತೆ ನಮ್ಮ ಸರ್ಕಾರವು ಹಿಂದುಳಿದ ವರ್ಗಗಳ ಶಾಶ್ವತ ಆಯೋಗವನ್ನು ಡಿಸೆಂಬರ್ 1997ರಲ್ಲಿ ರಚಿಸಿದೆ. ರಾಷ್ಟ್ರೀಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಆಯೋಗದ ಮಾದರಿಯಲ್ಲಿ ಹಿಂದುಳಿದ ವರ್ಗಗಳಿಗೂ ನ್ಯಾಯ ವ್ಯವಸ್ಥೆಯನ್ನು ರಾಜ್ಯದಲ್ಲಿ ಮೊಟ್ಟಮೊದಲ ಬಾರಿಗೆ ಕಲ್ಪಿಸಲಾಗಿದೆ. ಹಿಂದುಳಿದ ವರ್ಗದ ಜನರು ದೂರು ಮತ್ತು ಮನವಿಗಳ ಬಗ್ಗೆ ವಿಚಾರಣೆ ನಡೆಸಿ, ಕ್ರಮ ಜರುಗಿಸಿ, ನ್ಯಾಯ ಒದಗಿಸುವ ಅಧಿಕಾರವನ್ನು ಈ ಆಯೋಗಕ್ಕೆ ನೀಡಲಾಗಿದೆ. ರಾಜ್ಯದ್ಯಂತ ವ್ಯಾಪಕ ಸಮೀಕ್ಷೆ ನಡೆಸಿ ಇಡೀ ಜನಸಮುದಾಯದ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ವಿವರಗಳ ಮಾಹಿತಿ ಸಂಗ್ರಹಿಸುವುದು ಜವಾಬ್ದಾರಿಯನ್ನು ಈ ಆಯೋಗ ಹೊರಲಿದೆ. ಈ ಸಮೀಕ್ಷೆಯನ್ನು ಆಧರಿಸಿ ಹಿಂದುಳಿದ ವರ್ಗಗಳ ಪಟ್ಟಿಯನ್ನು ವೈಜ್ಞಾನಿಕವಾಗಿ ಪರಿಷ್ಕರಿಸಲಾಗುವುದು.

94. ಈಗಾಗಲೇ ಆಯೋಗದ ಅಧ್ಯಕ್ಷರನ್ನು ನೇಮಿಸಿದ್ದು ಉಳಿದ ಸದಸ್ಯರ ನೇಮಕಾತಿ ಶೀಘ್ರದಲ್ಲಿಯೇ ಆಗಲಿದೆ. ಆಯೋಗದ ಯಶಸ್ವಿ ಕಾರ್ಯನಿರ್ವಹಣೆಗಾಗಿ ಅಗತ್ಯವಾದ ಹಣವನ್ನು ಒದಗಿಸಲಾಗುವುದು.

ಅಲ್ಪಸಂಖ್ಯಾತರ ಕಲ್ಯಾಣ

95. ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ನಮ್ಮ ಸರ್ಕಾರವು ಆಸ್ಥೆ ತಳೆದಿದೆ. ಈ ನಿಟ್ಟಿನಲ್ಲಿ ರಾಜ್ಯದ ಅಲ್ಪಸಂಖ್ಯಾತ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯೊಂದನ್ನು ಹೊಸದಾಗಿ ರಚಿಸಲು ನಿರ್ಧರಿಸಿದೆ.

96. ವಕ್ಫ್ ಸಂಸ್ಥೆಗಳನ್ನು ಬಲಪಡಿಸಿ ಬೆಂಬಲಿಸಲು ನಾನು ವಕ್ಫ್ ಸಂಸ್ಥೆಗಳ ದುರಸ್ತಿ ಮತ್ತು ಸುಧಾರಣೆಗೆ ನೀಡುವ ಅನುದಾನದ ಮೊತ್ತವನ್ನು ಈ ಸಾಲಿನಲ್ಲಿ 3 ಕೋಟಿ ರೂ.ಗಳಿಗೆ ಹೆಚ್ಚಿಸಿದ್ದೇನೆ. ಇದಲ್ಲದೆ ವಕ್ಫ್ ಮಂಡಳಿಗೆ ನೀಡುವ ಅನುದಾನವನ್ನು 80 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗಿದೆ. ನೂತನ ವಕ್ಫ್ ಕಾಯಿದೆಯನ್ವಯ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ವಕ್ಫ್ ನ್ಯಾಯ ಮಂಡಳಿಗಳನ್ನು ಸ್ಥಾಪಿಸಲಾಗುವುದು. ಇದು ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ಸಹಕಾರಿಯಾಗುವುದು. ನೂತನ ವಕ್ಫ್ ಕಾಯಿದೆಯನ್ವಯ ವಕ್ಫ್ ಮಂಡಳಿಗಳನ್ನು ಪುನರ್‌ರಚಿಸಲಾಗುವುದು.

ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ

97. ಈ ನಿಗಮವು 1998-99 ಸಾಲಿನಲ್ಲಿ ವಿವಿಧ ಯೋಜನೆಗಳಡಿ ಅಲ್ಪ ಸಂಖ್ಯಾತ ಸಮುದಾಯಕ್ಕೆ ಸೇರಿದ 10,000 ಮಂದಿಗೆ ನೆರವು ನೀಡಲು ಉದ್ದೇಶಿಸಿದೆ. 'ಅರಿವು' ಯೋಜನೆಯನ್ವಯ 500 ಮಂದಿ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವೃತ್ತಿಶಿಕ್ಷಣ ತರಗತಿಗಳಿಗೆ ಸೇರಲು ಸರಳ ಸಾಲದ ನೆರವನ್ನು ನೀಡಲಾಗುವುದು. ಈ ನಿಗಮದ ಯೋಜನೆಗಳಿಗೆ ಸರ್ಕಾರವು 8.28 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ

98. ಸರ್ಕಾರದ ಬದಲಾದ ನೀತಿಯನ್ವಯ ಮಹಿಳಾ ಕಲ್ಯಾಣದಿಂದ ಮಹಿಳೆಯರನ್ನು ಸಶಕ್ತಗೊಳಿಸುವತ್ತ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಸಾಗುತ್ತಿದೆ. 1997-98ನೇ ಸಾಲಿನಲ್ಲಿ ಇಲಾಖೆಯು ಅನೇಕ ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸಿದ. ಈ ವರ್ಷ ನವಜೀವನ, ಜಾಗೃತಿ, ಉದ್ಯೋಗಿನಿ ಯೋಜನೆಗಳನ್ನು ಆರಂಭಿಸಲಾಯಿತು. ಇವುಗಳ ಜೊತೆಗೆ ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆ, ಸ್ವಶಕ್ತಿ ಹಾಗೂ ವಿಕಾಸಿನಿ ಇವು ಇಲಾಖೆಯ ಪ್ರಮುಖ ಯೋಜನೆಗಳಾಗಿವೆ. ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆಯನ್ವಯ ವಿವಿಧ ವಲಯಗಳಲ್ಲಿ ಯೋಜನೆ ಮೂರನೆಯ ಒಂದು ಭಾಗದಷ್ಟು ಹಣವನ್ನು ಮಹಿಳಾ ಫಲಾನುಭವಿಗಳಿಗಾಗಿಯೇ ಬಳಸಬೇಕಾಗಿದೆ. ಇದರಂತೆ ವಿವಿಧ ಇಲಾಖೆಗಳ ಮೂಲಕ 263 ಕೋಟಿ ರೂ.ಗಳನ್ನು ಮಹಿಳೆಯರಿಗಾಗಿ ಖರ್ಚು ಮಾಡಲಾಗುವುದು. ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮ ಸಹ ಮಹಿಳೆಯರ ಆರ್ಥಿಕ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಇದಕ್ಕಾಗಿ 1998-99ನೇ ಸಾಲಿನಲ್ಲಿ 4.4 ಕೋಟಿ ರೂ.ಗಳನ್ನು ನಿಗದಿಗೊಳಿಸಲಾಗಿದೆ.

99. ಬೆಳಗಾವಿ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ದೇವದಾಸಿಯರ ಪುನರ್ವಸತಿ ಯೋಜನೆ ಪ್ರಗತಿಯಲ್ಲಿದೆ. ಇದುವರೆಗೆ 415.11 ಲಕ್ಷ ರೂ.ಗಳ ವೆಚ್ಚದಲ್ಲಿ 4614 ದೇವದಾಸಿಯರಿಗೆ ಪುನರ್ವಸತಿ ಕಲ್ಪಿಸಲಾಗಿದೆ.

100. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ರಾಜ್ಯದ ಎಲ್ಲಾ 175 ತಾಲ್ಲೂಕು ಹಾಗೂ ಒಂಬತ್ತು ನಗರ ಪ್ರದೇಶಗಲ್ಲಿ ಜಾರಿಗೊಳಿಸಲಾಗಿದೆ. ಆರು ವರ್ಷದ ಕೆಳಗಿನ ಮಕ್ಕಳು, ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಪೂರಕ ಪೌಷ್ಠಿಕ ಆಹಾರ, ಆರೋಗ್ಯ ಸೇವೆ ಹಾಗೂ ಅನೌಪಚಾರಿಕ ಶಿಕ್ಷಣವನ್ನು ಇದು ನೀಡುತ್ತಿದೆ. 1997-98ರಲ್ಲಿ ಸುಮಾರು 31 ಲಕ್ಷ ಫಲಾನುಭವಿಗಳು ಈ ಯೋಜನೆಯ ಸೌಲಭ್ಯ ಪಡೆದಿದ್ದಾರೆ. 1998-99ರಲ್ಲಿ ಸಹ 33 ಲಕ್ಷ ಮಹಿಳೆಯರಿಗೆ ಸೌಲಭ್ಯ ನೀಡಲು ಉದ್ದೇಶಿಸಲಾಗಿದೆ. 1997-98ರಲ್ಲಿ ಪ್ರಕಟಿಸಲಾದ ಬಾಲ ಕಾರ್ಮಿಕರ ಪುನರ್ವಸತಿ ಯೋಜನೆಯನ್ನು ಮುಂದುವರಿಸಲಾಗುವುದು.

101. ಅಶಕ್ತ ವ್ಯಕ್ತಿಗಳ ಕಾಯಿದೆ 1995ನ್ನು (ಸಮಾನ ಅವಕಾಶಗಳು, ಹಕ್ಕುಗಳ ರಕ್ಷಣೆ ಹಾಗೂ ಪೂರ್ಣ ಪಾಲ್ಗೊಳ್ಳುವಿಕೆ) ಜಾರಿಗೊಳಿಸಿದ್ದು ಈ ಕಾಯಿದೆಯ ಫಲ ಎಲ್ಲ ಅರ್ಹ ವ್ಯಕ್ತಿಗಳಿಗೆ ದೊರೆಯುವಂತೆ ಅಗತ್ಯವಾದ ಅನುದಾನವನ್ನು ನೀಡಲಾಗಿದೆ.

102. ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಗ್ರಾಮೀಣ ಅಶಕ್ತ / ಅಂಗವಿಕಲ ಯುವಜನರಿಗೆ ತಲುಪುವಂತೆ ರೂಪಿಸಿರುವ ಸಮುದಾಯ ಆಧಾರಿತ ಪುನರ್‌ವಸತಿ ಕಾರ್ಯಕ್ರಮವನ್ನು 1998-99ನೇ ಸಾಲಿನಲ್ಲಿ ಎರಡು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಕೈಗೆತ್ತಿಕೊಳ್ಳಲಾಗುವುದು.

ವಸತಿ

103. 1997-98ನೇ ಸಾಲಿನಲ್ಲಿ 1,50,000 ನಿವೇಶನಗಳನ್ನು ವಿತರಿಸುವ ಹಾಗೂ 1,37,000 ಮನೆಗಳನ್ನು ನಿರ್ಮಿಸುವ ಗುರಿ ಹಮ್ಮಿಕೊಳ್ಳಲಾಗಿತ್ತು. 1998-99ನೇ ಸಾಲಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಒಂದು ಲಕ್ಷ ನಿವೇಶನಗಳನ್ನು ನಗರ ಪ್ರದೇಶದಲ್ಲಿ 50,000 ನಿವೇಶನಗಳನ್ನು ವಿತರಿಸಲು ಉದ್ದೇಶಿಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ 1,02,650 ಮನೆಗಳನ್ನು ನಗರ ಪ್ರದೇಶಗಳಲ್ಲಿ 35,000 ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ನಗರಾಭಿವೃದ್ಧಿ

104. ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳ ಹಣಕಾಸು ಸ್ಥಿತಿ ಅಷ್ಟೇನು ಉತ್ತಮ ಸ್ಥಿತಿಯಲ್ಲಿ ಇಲ್ಲದಿರುವುದು ತಮಗೆಲ್ಲಾ ತಿಳಿದಿದೆ. ಆದ್ದರಿಂದ ಸರ್ಕಾರವು ರಾಜ್ಯ ಹಣಕಾಸು ಆಯೋಗದ ಶಿಫಾರಸುಗಳನ್ನು ಅನುಷ್ಠಾನಗೊಳಿಸಿ 1997-98ನೇ ಸಾಲಿನಲ್ಲಿ 290 ಕೋಟಿ ರೂ.ಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಿದೆ. 1998-99ನೇ ಸಾಲಿಗೆ 347.25 ಕೋಟಿ ರೂ.ಗಳನ್ನು ವರ್ಗಾಯಿಸಲಾಗುವುದು. ಈ ವರ್ಗಾವಣೆಯ ಪ್ರಮಾಣ ಕ್ರಮೇಣ ಹೆಚ್ಚಾಗಲಿದ್ದು ಇದು ಸ್ಥಳೀಯ ಸಂಸ್ಥೆಗಳ ಸಂಪನ್ಮೂಲದ ಕೊರತೆಯನ್ನು ಸುಧಾರಿಸುತ್ತದೆ.

105. ನಗರ ಪ್ರದೇಶಗಳ ಬಡತನ ನಿರ್ಮೂಲನೆಗಾಗಿ ಹೊಸ ಯೋಜನೆಯೊಂದನ್ನು ಆರಂಭಿಸಲಾಗಿದೆ. 'ಸ್ವರ್ಣ ಜಯಂತಿ ಶಹರಿ ರೋಜ್ಗಾರ್ ಯೋಜನಾ' ಹೆಸರಿನ ಈ ಯೋಜನೆಯನ್ನು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ವಿಸ್ತರಿಸಲಾಗಿದೆ. ಇದು ಬಡತನ ರೇಖೆಯಿಂದ ಕೆಳಗಿರುವ ನಗರದ ಜನರಿಗೆ ಸ್ವಉದ್ಯೋಗ ಮತ್ತು ದಿನಗೂಲಿಯನ್ನು ಒದಗಿಸುತ್ತದೆ. ಇದಕ್ಕಾಗಿ 40.48 ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

106. ಬೆಂಗಳೂರು ಮಹಾನಗರ ಪಾಲಿಕೆ ಮುನಿಸಿಪಲ್ ಬಾಂಡ್‌ಗಳನ್ನು ಬಿಡುಗಡೆ ಮಾಡಿ 125 ಕೋಟಿ ರೂ.ಗಳನ್ನು ಸಂಗ್ರಹಿಸಿದೆ. ಈ ಹಣವನ್ನು ರಸ್ತೆ, ಪಾದಚಾರಿ ರಸ್ತೆ, ಚರಂಡಿ, ಬೀದಿ ದೀಪ ಮೊದಲಾದ ವ್ಯವಸ್ಥೆಗಳನ್ನು ಸುಧಾರಿಸಲು ಬಳಸಿಕೊಳ್ಳಲಾಗುವುದು. ಇದೇ ಮೊದಲ ಬಾರಿಗೆ ಮುನಿಸಿಪಲ್ ಬಾಂಡ್‌ಗಳ ಮೂಲಕ ಸಂಪನ್ಮೂಲ ಸಂಗ್ರಹಿಸಲಾಗಿದೆ.

107. ಸರ್ಕಾರವು 62.09 ಕಿ.ಮೀ. ಉದ್ದದ ಬೆಂಗಳೂರು ಹೊರ ವರ್ತುಲ ರಸ್ತೆ ನಿರ್ಮಾಣದ ಮಹತ್ವಾಕಾಂಕ್ಷೆಯ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಇದರಲ್ಲಿ 13.86 ಕಿ.ಮೀ ರಸ್ತೆಯನ್ನು ಈಗಾಗಲೇ ನಿರ್ಮಿಸಲಾಗಿದೆ. ಉಳಿದ ಕಾಮಗಾರಿ ಕೈಗೊಳ್ಳಲು ನಾವು ಹಣಕಾಸು ಸಂಸ್ಥೆಗಳಿಂದ 180 ಕೋಟಿ ರೂ.ಗಳನ್ನು ಸಂಗ್ರಹಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಅನುಮತಿ ನೀಡಿದ್ದೇವೆ. ಕೋರಮಂಗಲ ಮತ್ತು ಇಂದಿರಾನಗರವನ್ನು ಕೂಡಿಸುವ ಸಂಪರ್ಕ ವರ್ತುಲ ರಸ್ತೆ 1998ರ ಡಿಸೆಂಬರ್ ವೇಳೆಗೆ ಪೂರ್ಣವಾಗಲಿದೆ.

108. ಮೈಸೂರು, ರಾಮನಗರ, ತುಮಕೂರು ಮತ್ತು ಚನ್ನಪಟ್ಟಣಗಳಲ್ಲಿ ನೀರು ಸರಬರಾಜು, ರಸ್ತೆ ಮತ್ತು ನೈರ್ಮಲ್ಯ ವ್ಯವಸ್ಥೆ ಸುಧಾರಣೆಗೆ ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ನೆರವಿನ ಕರ್ನಾಟಕ ಮೂಲ ಸೌಲಭ್ಯಗಳ ಅಭಿವೃದ್ಧಿ ಯೋಜನೆ ಜಾರಿಯಾಗುತ್ತಿದೆ. 1998-99ರಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ 72 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

109. ಬೆಂಗಳೂರು ನಗರದ ನೀರು ಪೂರೈಕೆಯನ್ನು ಸುಧಾರಿಸಲು ಕಾವೇರಿ ನಾಲ್ಕನೇ ಹಂತದ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. 1998-99ನೇ ಸಾಲಿನಲ್ಲಿ ಈ ಯೋಜನೆಗಾಗಿ 115 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

110. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು (ಕೆ.ಯು.ಡಬ್ಲ್ಯೂ.ಎಸ್.ಡಿ.ಬಿ.) ಈ ವರ್ಷ 26 ಹೊಸ ಕುಡಿಯುವ ನೀರಿನ ಯೋಜನೆಗಳನ್ನು ಚಾಲನೆಗೊಳಿಸಿದೆ. ಸರ್ಕಾರವು 120.43 ಕೋಟಿ ರೂ.ಗಳ ಅಂದಾಜು ವೆಚ್ಚದ 15 ನೂತನ ಯೋಜನೆಗಳಿಗೆ ಮಂಜೂರಾತಿ ನೀಡಿದೆ. ಈ ಕಾಮಗಾರಿಗಳು ನಿರ್ಮಾಣದ ವಿವಿಧ ಹಂತಗಳಲ್ಲಿವೆ. 1998-99ನೇ ಸಾಲಿನಲ್ಲಿ (ಕೆ.ಯು.ಡಬ್ಲ್ಯೂ.ಎಸ್.ಡಿ.ಬಿ.) ಯ ಕುಡಿಯುವ ನೀರಿನ ಯೋಜನೆಗಳಿಗೆ 71 ಕೋಟಿ ರೂ.ಗಳ ಅನುದಾನವನ್ನು ನೀಡಲಾಗುವುದು. 32 ನಗರ ಪ್ರದೇಶಗಳ ಕುಡಿಯುವ ನೀರಿನ ಹಾಗೂ ಒಳಚರಂಡಿ ಮತ್ತು ನೈರ್ಮಲ್ಯ ವ್ಯವಸ್ಥೆಯ ಸುಧಾರಣೆಗಾಗಿ 317 ಕೋಟಿ ರೂ.ಗಳ ಅಂದಾಜು ವೆಚ್ಚದ ಸಮಗ್ರ ಯೋಜನಾ ವರದಿಯನ್ನು ಸಿದ್ಧಪಡಿಸಿದ್ದು ಇದಕ್ಕೆ ನೆರವು ಒದಗಿಸುವಂತೆ ವಿಶ್ವಬ್ಯಾಂಕನ್ನು ಕೋರಲಾಗುವುದು.

ರಸ್ತೆ ಹಾಗೂ ಸೇತುವೆಗಳು

111. ರಾಜ್ಯದ ಮೂಲ ಸೌಲಭ್ಯ ಅಭಿವೃದ್ಧಿಯಲ್ಲಿ ರಸ್ತೆ ಹಾಗೂ ಸೇತುವೆಗಳು ಬಹುಮುಖ್ಯ ಪಾತ್ರ ವಹಿಸುತ್ತದೆ. ರಸ್ತೆ ಮತ್ತು ಸೇತುವೆಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ 425 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಈ ವರ್ಷ ನಾನು 210.86 ಕೋಟಿ ರೂ.ಗಳನ್ನು ಒದಗಿಸಿದ್ದೇನೆ. ಕಳೆದ ವರ್ಷದ ಆಯವ್ಯಯ ನಿಗದಿಗೆ ಹೋಲಿಸಿದರೆ ಇದು ಶೇಕಡಾ 46.7ರ ಬೆಳವಣಿಗೆಯಾಗಿದೆ.

112. ಕಳೆದ ವರ್ಷದ ಆಯವ್ಯಯದಲ್ಲಿ ನಾನು ರಸ್ತೆ ಮತ್ತು ಸೇತುವೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಹತ್ತನೆಯ ಹಣಕಾಸು ಆಯೋಗವು ಸೂಚಿಸಿರುವ ಮಾನದಂಡಕ್ಕೆ ಅನುಗುಣವಾಗಿ ನಡೆದುಕೊಳ್ಳಲು ಬದ್ಧತೆಯನ್ನು ಪ್ರಸ್ತಾಪಿಸಿದ್ದೆ. 1999-2000ರೊಳಗೆ ಇದನ್ನು ಸಾಧಿಸಲು ಹೆಚ್ಚುವರಿಯಾಗಿ 26 ಕೋಟಿ ರೂ.ಗಳ ಅನುದಾನವನ್ನು ಈ ವರ್ಷ ಒದಗಿಸಿದ್ದೇನೆ. 1998-99ರಲ್ಲಿ ರಸ್ತೆ, ಸೇತುವೆ ನಿರ್ವಹಣೆಗಾಗಿ 187.35 ಕೋಟಿ ರೂ.ಗಳನ್ನು ನೀಡಲಾಗಿದೆ.

113. ಕರ್ನಾಟಕ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಹಣಕಾಸು ನಿಗಮದ ಮೂಲಕ ಮುಂದಿನ ಮೂರು ವರ್ಷಗಳಲ್ಲಿನ ರಸ್ತೆ ಮತ್ತು ಸೇತುವೆಗಳ ಮೇಲೆ 800 ಕೋಟಿ ರೂ.ಗಳನ್ನು ವೆಚ್ಚ ಮಾಡುವ ನಿರೀಕ್ಷೆ ಇದೆ. ಈ ಎಲ್ಲ ಪ್ರಯತ್ನಗಳಿಂದಾಗಿ ರಾಜ್ಯದ ರಸ್ತೆ ಜಾಲವನ್ನು ಸಾಕಷ್ಟು ಸುಧಾರಿಸುವ ವಿಶ್ವಾಸ, ನಂಬಿಕೆ ನಮಗಿದೆ.

114. ಬೃಹತ್ ಯೋಜನೆಗಳಲ್ಲಿ ಖಾಸಗಿ ಸಹಭಾಗಿತ್ವಕ್ಕೆ ಅವಕಾಶ ನೀಡಿ ನಿಗದಿತ ಅವಧಿಗೆ ಸುಂಕ ವಸೂಲಿ ಮಾಡಲು ಸಾಧ್ಯವಾಗುವಂತೆ ಹೆದ್ದಾರಿ ಕಾಯಿದೆಗೆ ತಿದ್ದುಪಡಿ ಮಾಡುತ್ತಿದ್ದು ಇದನ್ನು ಈ ವರ್ಷವೇ ಸದನದಲ್ಲಿ ಮಂಡಿಸಲಾಗುವುದು.

ಗೃಹ ಮತ್ತು ಸಾರಿಗೆ

115. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸ್ಥಿತಿ ತೃಪ್ತಿಕರವಾಗಿತ್ತು. ಕೋಮು ಸೌಹಾರ್ದತೆ ಮತ್ತು ಶಾಂತಿಯನ್ನು ಕಾಪಾಡುವಲ್ಲಿ ಸಹಕರಿಸಿದ ಸಮಾಜದ ಎಲ್ಲ ವರ್ಗಗಳ ಜನರನ್ನು ನಾನು ಅಭಿನಂದಿಸುತ್ತೇನೆ.

116. ಬೆಂಗಳೂರು ನಗರದ ಎಲ್ಲ ಪೊಲೀಸ್ ಠಾಣೆಗಳಲ್ಲಿ ಕಂಪ್ಯೂಟರೀಕೃತ ಸ್ವಯಂಚಾಲಿತ ದೂರು ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದರಿಂದ ಪೊಲೀಸ್ ಠಾಣೆಗಳಿಗೆ ದೂರು ಸಲ್ಲಿಸುವವರ ಕುಂದು ಕೊರತೆಯನ್ನು ಶೀಘ್ರವಾಗಿ ನಿವಾರಿಸಲು ಸಹಾಯಕವಾಗುತ್ತದೆ.

117. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ವಿಭಜಿಸಿ ಮತ್ತೆ ಎರಡು ನೂತನ ನಿಗಮಗಳನ್ನು ರಚಿಸಿರುವುದು ಮಾನ್ಯ ಸದಸ್ಯರಿಗೆ ತಿಳಿದಿದೆ. 1997-98ನೇ ಸಾಲಿನಲ್ಲಿ ಈ ನಿಗಮಗಳಿಗೆ ಸೇರಿಸದ ವಾಹನಗಳು ಆರು ಕೋಟಿ ಕಿಲೋಮೀಟರ್‌ಗಳಷ್ಟು ಅಧಿಕ ದೂರವನ್ನು ಕ್ರಮಿಸಿದೆ. ಹಳೆಯ ಬಸ್‌ಗಳನ್ನು ಬದಲಿಸಲು ಮತ್ತು ನೂತನ ಸೌಕರ್ಯ ಒದಗಿಸಲು ನಿಗಮಕ್ಕೆ ಅಗತ್ಯವಾಗಿರುವ 1900 ನೂತನ ಬಸ್‌ಗಳನ್ನು ಸೇರ್ಪಡೆಗೊಳಿಸಲಾಗುವುದು. ಇದೊಂದು ದಾಖಲೆಯಾಗಲಿದೆ. ಅಲ್ಲದೆ ಈ ವರ್ಷ 250 ಮಾರ್ಗಗಳನ್ನು ಹೊಸದಾಗಿ ಸೇರಿಸಲಾಗಿದೆ.

ನಿಗಮವು ಬಸ್‌ಗಳ ಓಡಾಟ ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆ ತಂದಿದ್ದು ಸಾರ್ವಜನಿಕರಿಗೆ ಉತ್ತಮ ಸೇವೆ ಮತ್ತು ವೆಚ್ಚ ನಿಯಂತ್ರಣದ ಹಿಡಿತ ಸಾಧಿಸಿದೆ. ಸೇವೆಯ ಗುಣಮಟ್ಟ ಹೆಚ್ಚಿಸುವಲ್ಲಿ ಮತ್ತು ಸಮಯನಿಷ್ಠೆಯನ್ನು ಕಾಪಾಡುವಲ್ಲಿ ನಿಗಮವು ಶಕ್ತಿಮೀರಿ ಶ್ರಮಿಸುತ್ತಿದೆ. 1998-99ರಲ್ಲಿ ಮೂರು ನಿಗಮಗಳು ಒಟ್ಟು 176 ಕೋಟಿ ರೂ.ಗಳ ಬಂಡವಾಳ ಹೂಡಲು ಉದ್ದೇಶಿಸಿವೆ. ಸರ್ಕಾರವು ಈ ನೂತನ ನಿಗಮಗಳಿಗೆ ಬಂಡವಾಳ ಒದಗಿಸುವ ಮೂಲಕ ನೆರವು ನೀಡಲಿದೆ.

ಅರಣ್ಯ

118. ಜಪಾನ್‌ನ ಸಾಗರೋತ್ತರ ಆರ್ಥಿಕ ಮಂಡಲಿಯ ನೆರವಿನಿಂದ ರಾಜ್ಯದ 23 ಜಿಲ್ಲೆಗಳಲ್ಲಿ ಅರಣ್ಯೀಕರಣ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಮೂರು ಲಕ್ಷ ಹೆಕ್ಟೇರ್ ಖಾಸಗಿ ಜಮೀನು ಮತ್ತು 1.7 ಲಕ್ಷ ಹೆಕ್ಟೇರ್ ಸರ್ಕಾರಿ ಅರಣ್ಯ ಜಮೀನಿನಲ್ಲಿ ಅರಣ್ಯೀಕರಣವನ್ನು ಕೈಗೊಳ್ಳಲಾಗುವುದು. ಈ ಯೋಜನೆಯು 2002ನೇ ಇಸವಿಯಲ್ಲಿ ಪೂರ್ಣಗೊಳ್ಳಲಿದೆ.

ಪ್ರವಾಸೋದ್ಯಮ

119. ಹೊಸ ಪ್ರವಾಸೋದ್ಯಮ ನೀತಿಯು 1.6.97 ರಿಂದ ಅನುಷ್ಠಾನಕ್ಕೆ ಬಂದಿದ್ದು ಮುಂದಿನ ಐದು ವರ್ಷಗಳವರೆಗೆ ಜಾರಿಯಲ್ಲಿರುತ್ತದೆ. ಆಯ್ದ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ ಪ್ರವಾಸೋದ್ಯಮ ಇಲಾಖೆಯು ಮಾಸ್ಟರ್ ಪ್ಲಾನ್ ತಯಾರಿಸಿದೆ. ಈ ಯೋಜನೆಯಡಿ ಹಣ ಹೂಡಿಕೆಯ ಬಹುಪಾಲು ಮೊತ್ತ ಖಾಸಗಿ ಕ್ಷೇತ್ರದಿಂದ ಬರಲಿದೆ. 1998ರ ಮೇ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಬಂಡವಾಳ ಹೂಡಿಕೆದಾರರ ಜಾಗತಿಕ ಸಮ್ಮೇಳನದಲ್ಲಿ ಈ ಸಮಗ್ರ ಯೋಜನೆಯಲ್ಲಿ ಪಾಲ್ಗೊಳ್ಳುವಂತೆ ಖಾಸಗಿಯವರನ್ನು ಆಹ್ವಾನಿಸಲಾಗುವುದು.

ವಾರ್ತಾ ಮತ್ತು ಪ್ರಚಾರ

120. 1997-98ರಲ್ಲಿ ಎಂಟು ಜಿಲ್ಲೆಗಳನ್ನು ಕುರಿತ ವಿಡಿಯೋ ಚಿತ್ರ ನಿರ್ಮಾಣಕ್ಕಾಗಿ 10 ಲಕ್ಷ ರೂ. ಬಿಡುಗಡೆ ಮಾಡಲಾಗಿದೆ. ನಾಲ್ಕು ಸಾಕ್ಷ್ಯಚಿತ್ರ ನಿರ್ಮಾಣಕ್ಕಾಗಿ 15 ಲಕ್ಷ ರೂ. ವೆಚ್ಚ ಮಾಡಲಾಗಿದೆ. ಕನ್ನಡ ಸುದ್ದಿಜಾಲ ವ್ಯವಸ್ಥೆ ಹೊಂದಿರುವ ಹೊಸ ಸುದ್ದಿ ಸಂಸ್ಥೆಗಳನ್ನು ಪ್ರೋತ್ಸಾಹಿಸಲು 12 ಅಧೀನ ಕಚೇರಿಗಳಿಗೆ ಸುದ್ದಿಜಾಲ ಸಂಪರ್ಕ ಒದಗಿಸಲಾಗಿದೆ.

ಯುವಜನ ಸೇವೆ ಹಾಗೂ ಕ್ರೀಡೆ

121. ಭಾರತದ ಅತಿದೊಡ್ಡ ಕ್ರೀಡಾಮೇಳವಾದ ರಾಷ್ಟ್ರೀಯ ಕ್ರೀಡೆಗಳನ್ನು ಬೆಂಗಳೂರು ಹಾಗೂ ಮೈಸೂರುಗಳಲ್ಲಿ 1997ರ ಜೂನ್‌ನಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ದಾಖಲೆ ಸಂಖ್ಯೆ ಕ್ರೀಡಾಪಟುಗಳು ಇದರಲ್ಲಿ ಪಾಲ್ಗೊಂಡಿದ್ದರು. ಇದರಿಂದ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕ್ರೀಡೆಗಳನ್ನು ನಡೆಸಲು ಅನುಕೂಲವಾಗುವಂತಹ ಕ್ರೀಡಾ ಮೂಲಸೌಲಭ್ಯಗಳು ರಾಜ್ಯಕ್ಕೆ ದಕ್ಕಿವೆ.

ಕನ್ನಡ ಮತ್ತು ಸಂಸ್ಕೃತಿ

122. ಕನ್ನಡ ಸಾಹಿತ್ಯದ ದಿಗ್ಗಜರೆನಿಸಿದ್ದ ಡಾ। ಕೆ. ಶಿವರಾಮಕಾರಂತರು ನಮ್ಮನ್ನು ಅಗಲಿದ್ದಾರೆ. ಅವರ ಗೌರವಾರ್ಥ ಹಾಗೂ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಕಾರಂತರ ಕೃತಿಗಳು ದೊರೆಯುವಂತೆ ಡಾ। ಕಾರಂತರ ಎಲ್ಲ ಕೃತಿಗಳನ್ನು ಸರ್ಕಾರ ಪ್ರಕಟಿಸುತ್ತದೆ.

123. ಏಳು ಜಿಲ್ಲಾ ರಂಗಮಂದಿರಗಳು ಪೂರ್ಣಗೊಂಡಿದ್ದು ಒಂಬತ್ತು ಜಿಲ್ಲಾ ರಂಗಮಂದಿರಗಳು ನಿರ್ಮಾಣದ ವಿವಿಧ ಹಂತಗಳಲ್ಲಿವೆ. ಇದರ ಜೊತೆಗೆ ಹತ್ತು ಬಯಲು ರಂಗಮಂದಿರಗಳ ನಿರ್ಮಾಣಕ್ಕೆ ಆರ್ಥಿಕ ನೆರವು ಒದಗಿಸಲಾಗುವುದು.

124. ಕರ್ನಾಟಕ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಬಿಂಬಿಸುವ ಸಾಂಸ್ಕೃತಿಕ ಉತ್ಸವಗಳನ್ನು ರಾಜ್ಯದ ಎಲ್ಲೆಡೆ ಆಚರಿಸಲಾಗಿದೆ. ಕಳೆದ ವರ್ಷ ಹಂಪಿ ಉತ್ಸವ, ವಚನ ಸಂಗೀತೋತ್ಸವ, ಕಿತ್ತೂರು ಉತ್ಸವ, ಚಾಲುಕ್ಯ ಸಾಮ್ರಾಜ್ಯೋತ್ಸವಗಳನ್ನು ನಡೆಸಲಾಯಿತು.

125. ನಮ್ಮ ಕಲೆ, ಸಂಸ್ಕೃತಿಯನ್ನು ಪ್ರಚಾರಗೊಳಿಸಲು ಹೆಸರುಘಟ್ಟದಲ್ಲಿ ಒಂದು ರಾಷ್ಟ್ರೀಯ ಕಲಾ ಗ್ಯಾಲರಿ ಮತ್ತು ಕಲಾ ಗ್ರಾಮವನ್ನು ಸ್ಥಾಪಿಸಲಾಗುವುದು.

126. ಕನ್ನಡೇತರರಿಗೆ ದೃಶ್ಯ ಹಾಗೂ ಶ್ರವ್ಯ ಕ್ಯಾಸೆಟ್‌ಗಳ ಮೂಲಕ ಕನ್ನಡವನ್ನು ಕಲಿಸುವ ನಮ್ಮ ಪ್ರಯತ್ನ ಮುಂದುವರಿಯುತ್ತದೆ. ದೂರದರ್ಶನ ಮತ್ತು ಆಕಾಶವಾಣಿ ಮೂಲಕ ಕನ್ನಡ ಪಾಠಗಳನ್ನು ಕಲಿಸಲಾಗುತ್ತದೆ.

ಉದ್ಯೋಗ, ತರಬೇತಿ ಮತ್ತು ಕಾರ್ಮಿಕ

127. ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಹಣಕಾಸು ಸಮಸ್ಯೆ ಎದುರಿಸುತ್ತಿವೆ. ಶಿಕ್ಷಣದ ಗುಣಮಟ್ಟ ಹಾಗೂ ಕೌಶಲ್ಯ ವೃದ್ಧಿಗೆ ಸರ್ಕಾರದ ನೆರವು ಈ ಸಂಸ್ಥೆಗಳಿಗೆ ಆವಶ್ಯಕ. ಈ ಉದ್ದೇಶದಿಂದ ಖಾಸಗಿ ಐಟಿಐಗಳಿಗೆ ಅನುದಾನ ಸಂಹಿತೆಯನ್ನು ರೂಪಿಸಲು ಸರ್ಕಾರ ಉದ್ದೇಶಿಸಿದೆ. ಇದರನ್ವಯ ಏಳು ವರ್ಷ ಪೂರ್ಣಗೊಳಿಸಿದ ಕೈಗಾರಿಕೆ ತರಬೇತಿ ಸಂಸ್ಥೆಗಳ ಸಿಬ್ಬಂದಿಗೆ ವೇತನ ಅಗತ್ಯದ ಶೇ. 75 ರಷ್ಟು ಅನುದಾನ ನೀಡಲಿದ್ದೇವೆ.

128. ಸ್ವಯಂ ಉದ್ಯೋಗ ಚಟುವಟಿಕೆ ಕೈಗೊಳ್ಳಲು ವಿದ್ಯಾರ್ಥಿಗಳಲ್ಲಿ ನೈಪುಣ್ಯತೆ ಹೆಚ್ಚಿಸುವುದು ಅಗತ್ಯ. ಇದಕ್ಕಾಗಿ ಹೆಚ್ಚು ಐಟಿಐಗಳ ಅಗತ್ಯವಿದ್ದು. ಸರ್ಕಾರ 1997-98ನೇ ಸಾಲಿನಲ್ಲಿ 17 ಹೊಸ ಐಟಿಐಗಳನ್ನು ಆರಂಭಿಸಿದೆ. 1998-99ನೇ ಸಾಲಿಗೆ 10 ಹೊಸ ಸರ್ಕಾರಿ ಐಟಿಐಗಳನ್ನು ತೆರೆಯಲಾಗುವುದು.

129. ಬಾಲ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸಲು ಸತತ ಪ್ರಯತ್ನ ಮಾಡಲಾಗುತ್ತಿದೆ. ಇತ್ತೀಚಿನ ಸುಪ್ರೀಂ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಈ ಸಮಸ್ಯೆ ತುರ್ತು ಆಯಾಮ ಪಡೆದುಕೊಂಡಿದೆ. ತೀರ್ಪಿನನ್ವಯ ಮೂಲ ನಿಧಿಯೊಂದನ್ನು ಸ್ಥಾಪಿಸಿ ಸರ್ಕಾರವು ಪ್ರಸಕ್ತ ಸಾಲಿನಲ್ಲಿ ಒಂದು ಕೋಟಿ ರೂ. ಬಿಡುಗಡೆ ಮಾಡಿದೆ. ಈ ಮೂಲ ನಿಧಿಗೆ 1998-99ನೇ ಸಾಲಿನಲ್ಲಿ ಇನ್ನೂ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಆಹಾರ ಮತ್ತು ನಾಗರೀಕ ಪೂರೈಕೆ

130. ಕೇಂದ್ರ ಯೋಜನೆಯ ಆಯ್ದ ಪಡಿತರದಾರರ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ರಾಜ್ಯದ ಪಡಿತರ ಯೋಜನೆಯ ಜೊತೆ 1.6.1997ರಿಂದ ಸಂಯೋಜಿಸಿದೆ. ಭಾರತ ಸರ್ಕಾರವು ರಾಜ್ಯದ 28.75 ಲಕ್ಷ ಕುಟುಂಬಗಳನ್ನು ಮಾತ್ರ ಬಡತನ ರೇಖೆಯಿಂದ ಕೆಳಗಿದ್ದಾವೆಂದು ಘೋಷಿಸಿದ್ದರೂ ನಾವು 59.4 ಲಕ್ಷ ಕುಟುಂಬಗಳನ್ನು ಗುರುತಿಸಿದ್ದೇವೆ. ಬಾಕಿ ಉಳಿದಿರುವ 30.65 ಲಕ್ಷ ಕುಟುಂಬಗಳಿಗೆ ಪಡಿತರ ವಿತರಣೆಯ ಅನುಕೂಲವನ್ನು ನಾವು ವಿಸ್ತರಿಸಿದ್ದೇವೆ. 1997-98ರಲ್ಲಿ ಈ ಉದ್ದೇಶಕ್ಕಾಗಿ 196 ಕೋಟಿ ರೂ.ಗಳ ಸಹಾಯಧನವನ್ನು ನೀಡಲಾಗಿದೆ. ಬಾಕಿ ಉಳಿದಿರುವ ಎಲ್ಲ ಅರ್ಹ ಕುಟುಂಬಗಳಿಗೆ ಹಸಿರು ಕಾರ್ಡುಗಳನ್ನು ನೀಡಲಾಗುವುದು.

ಕಂದಾಯ

131. ಆಡಳಿತವನ್ನು ಜನರ ಸಮೀಪಕ್ಕೆ ಕೊಂಡೊಯ್ಯಲು ಏಳು ಹೊಸ ಜಿಲ್ಲೆಗಳನ್ನು ರಚಿಸಿರುವ ವಿಚಾರ ಮಾನ್ಯ ಸದಸ್ಯರಿಗೆ ತಿಳಿದೇ ಇದೆ. ಈ ಹೊಸ ಜಿಲ್ಲೆಗಳಲ್ಲಿ ಮೂಲ ಸೌಲಭ್ಯಗಳನ್ನು ಕಲ್ಪಿಸಲು ಹತ್ತು ಕೋಟಿ ರೂ.ಗಳನ್ನು ಒದಗಿಸಲಾಗುವುದು.

132. ಮೈಸೂರು ಜಿಲ್ಲೆಯ ಎರಡು ತಾಲ್ಲೂಕುಗಳಲ್ಲಿ ಮರು ಭೂಮಾಪನಾ ಕಾರ್ಯ ಕೈಗೊಂಡು ಮೆಟ್ರಿಕ್ ಪದ್ಧತಿಯಲ್ಲಿ ದಾಖಲೆ ತಯಾರಿಸಲಾಗುವುದು. ಈ ಕಾರ್ಯಕ್ಕಾಗಿ ಒಂದು ಕೋಟಿ ರೂ.ಗಳನ್ನು ಒದಗಿಸಲಾಗುವುದು.

133. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಪುನರ್‌ವಸತಿ ಕಾಮಗಾರಿಗಳನ್ನು ತ್ವರಿತಗೊಳಿಸಲು 850 ಕೋಟಿ ರೂ.ಗಳ ಯೋಜನೆಯೊಂದನ್ನು ವಿಶ್ವಬ್ಯಾಂಕ್‌ಗೆ ಸಲ್ಲಿಸಲಾಗಿದೆ.

134. ಕೂಡಲ ಸಂಗಮ ಅಭಿವೃದ್ಧಿ ಮಂಡಳಿ ಕಾಯಿದೆಯನ್ವಯ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಅಭಿವೃದ್ಧಿ ಮಂಡಳಿಯೊಂದನ್ನು ಸ್ಥಾಪಿಸಲಾಗಿದೆ ಹಾಗೂ ದೇವಸ್ಥಾನದ ಅಭಿವೃದ್ಧಿಗಾಗಿ ಅನುದಾನ ಒದಗಿಸಲಾಗಿದೆ.

ಅಬಕಾರಿ ನೀತಿ

135. ನಾನು 1997-98ರ ಆಯವ್ಯಯದಲ್ಲಿ ಪ್ರಸ್ತಾಪಿಸಿದ್ದ ನೂತನ ಅಬಕಾರಿ ನೀತಿಯ ಅನ್ವಯ ಸಾರಾಯಿ ಮಾರಾಟದ ಹಕ್ಕುನ್ನು ಹರಾಜಿಗೆ ಬದಲಾಗಿ ಪರವಾನಗಿ ಮೂಲಕ ನೀಡಲು ಕ್ರಮ ಕೈಗೊಳ್ಳಲಾಗಿತ್ತು. ಈ ಪರ್ಯಾಯ ವ್ಯವಸ್ಥೆಗೆ ಕೆಲವು ಅಬಕಾರಿ ಗುತ್ತಿಗೆದಾರರು ರಾಜ್ಯ ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ. ನ್ಯಾಯಾಲಯವು, ಸರ್ಕಾರಿ ಇಲಾಖೆ ವತಿಯಿಂದ ಅಥವಾ ಹರಾಜಿನ ಮೂಲಕ ಸಾರಾಯಿ ಮಾರಾಟ ಮಾಡುವಂತೆ ಮಧ್ಯಂತರ ಆಜ್ಞೆಯನ್ನು ನೀಡಿರುತ್ತದೆ. ಸರ್ಕಾರವು ನ್ಯಾಯಾಲಯದ ಆಜ್ಞೆಯಂತೆ ಹರಾಜಿನ ಮೂಲಕ ಸಾರಾಯಿ ಮಾರಾಟ ಮಾಡುವ ವ್ಯವಸ್ಥೆಯನ್ನು ಮುಂದುವರಿಸಿದೆ. ಈ ವ್ಯವಸ್ಥೆಗಳ ಬದಲಾವಣೆಯಿಂದಾಗಿ ಅಬಕಾರಿ ಆದಾಯದಲ್ಲಿ ಕೊಂಚ ನಷ್ಟವಾಗಿದೆ. ತೆರಿಗೆ ಸಂಗ್ರಹಣೆಯಲ್ಲಿ ಅಬಕಾರಿ ಆದಾಯ ಪ್ರಮುಖ ಸ್ಥಾನ ಹೊಂದಿರುವುದರಿಂದ ನ್ಯಾಯಾಲಯದ ಅಂತಿಮ ತೀರ್ಪು

ಬಂದ ನಂತರ ಅಬಕಾರಿ ತೆರಿಗೆ ಆದಾಯವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಹೊಸ ಅಬಕಾರಿ ನೀತಿಯ ಬಗ್ಗೆ ವಿಷದವಾಗಿ ಪರಿಶೀಲಿಸುತ್ತದೆ.

136. ನಾನು ರಾಜ್ಯದ ಅಭಿವೃದ್ಧಿ ಕಾರ್ಯ ಚಟುವಟಿಕೆಗಳನ್ನು ಸ್ಥೂಲವಾಗಿ ಹೇಳಿದ್ದೇನೆ. ರಾಜ್ಯವು ಉತ್ತಮ ಬೆಳವಣಿಗೆ ಸಾಧಿಸಲು ಹೆಚ್ಚಿನ ಸಂಪನ್ಮೂಲ ಅತ್ಯಗತ್ಯ. ಆದರೆ ಹೆಚ್ಚುವರಿ ಆದಾಯ ರೂಪಿಸಲು ನಮಗೆ ಬಹಳ ಕಡಿಮೆ ಅವಕಾಶಗಳಿವೆ. ನಮಗಿರುವ ಸೀಮಿತ ಆದಾಯ ಮೂಲದ ಚೌಕಟ್ಟಿನಲ್ಲೇ ನಾವು ಹೆಚ್ಚುವರಿ ಸಂಪನ್ಮೂಲ ಸಂಗ್ರಹಿಸುವುದು ಅನಿವಾರ್ಯವಾಗಿದೆ. ಹೆಚ್ಚುವರಿ ಆದಾಯ ರೂಢಿಸಲು ನಮಗಿರುವ ಅಲ್ಪ ಅವಕಾಶಗಳಲ್ಲಿ ಹಾಲಿ ಆದಾಯ ಚೌಕಟ್ಟಿನಲ್ಲೇ ನಾವು ಹೆಚ್ಚುವರಿ ಸಂಪನ್ಮೂಲ ಸಂಗ್ರಹಿಸುವುದು ಅನಿವಾರ್ಯವಾಗಿದೆ. ಈ ಹಿನ್ನಲೆಯಲ್ಲಿ ನಾನು ಸೂಚಿಸಿರುವ ತೆರಿಗೆ ಪ್ರಸ್ತಾವಗಳನ್ನು ಮಾನ್ಯ ಸದಸ್ಯರು ಪರಿಗಣಿಸಬೇಕೆಂದು ವಿನಂತಿಸುತ್ತೇನೆ.

137. ನಾನು ಈಗ ತೆರಿಗೆ ಪ್ರಸ್ತಾವಗಳನ್ನು ಮುಂದಿಡುತ್ತೇನೆ.

ವಾಣಿಜ್ಯ ತೆರಿಗೆಗಳು

138. ಕಳೆದ ಮೂರು ವರ್ಷಗಳಲ್ಲಿ ತೆರಿಗೆ ಸ್ವರೂಪ ಮತ್ತು ಆಡಳಿತವನ್ನು ಹೆಚ್ಚು ಸರಳ ಹಾಗೂ ಪಾರದರ್ಶಕ ಮಾಡಲು ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಂಡಿದ್ದೇನೆ. ಈ ಯತ್ನಗಳು ಆಡಳಿತಕ್ಕೆ ಹೆಚ್ಚಿನ ವಿಶ್ವಸನೀಯತೆಯನ್ನು ತರುವುದರ ಜೊತೆಗೆ ವಾಣಿಜ್ಯ ಮತ್ತು ಉದ್ದಿಮ ವಲಯಗಳಿಂದ ಮೆಚ್ಚುಗೆ ಪಡೆದಿವೆ.

ಮಾರಾಟ ತೆರಿಗೆ

139. ನಾನು ಈಗಾಗಲೇ ಸದನಕ್ಕೆ ತಿಳಿಸಿರುವಂತೆ, ಮುಂಬರುವ ವರ್ಷಗಳಲ್ಲಿ ಈಗಿರುವ ಏಕಹಂತದ ತೆರಿಗೆ ಪದ್ಧತಿಯಿಂದ ಮೌಲ್ಯವರ್ಧಿತ ತೆರಿಗೆ ಪದ್ಧತಿಯೆಡೆಗೆ ಸಾಗಬೇಕಾಗಿದೆ. ಈ ನಿಟ್ಟಿನಲ್ಲಿ ಈಗಿರುವ ತೆರಿಗೆ ಪದ್ಧತಿಯಲ್ಲಿ ಇನ್ನಷ್ಟು ಸುಧಾರಣೆಗಳನ್ನು ಮಾಡಲು ಕೆಳಕಂಡಂತೆ ಪ್ರಸ್ತಾಪಿಸುತ್ತೇನೆ.

(i) ತೆರಿಗೆದರಗಳ ಸಂಖ್ಯೆಯನ್ನು ಕಡಿಮೆ ಮಾಡುವುದು

ತೆರಿಗೆದರಗಳ ಸಂಖ್ಯೆಯನ್ನು ಕಡಿಮೆ ಮಾಡುವುದು ಕೇವಲ ಮೌಲ್ಯವರ್ಧಿತ ತೆರಿಗೆ ಪದ್ಧತಿಯೆಡೆಗೆ ಸಾಗಲು ಪೂರ್ವಭಾವಿ ಅಗತ್ಯವಾಗಿರದೇ ಯಾವುದೇ ತೆರಿಗೆ ಪದ್ಧತಿಯನ್ನು ವ್ಯಾಜ್ಯ ಹಾಗೂ ವಿವಾದಗಳಿಂದ ಮುಕ್ತಗೊಳಿಸಲು ಅವಶ್ಯವಾಗಿರುತ್ತದೆ. ಈ ದಿಸೆಯಲ್ಲಿ ನಾನು ಈಗಾಗಲೇ ಹಂತ ಹಂತವಾಗಿ ತೆರಿಗೆದರಗಳ ಸಂಖ್ಯೆಯನ್ನು ಕಡಿಮೆ ಮಾಡುತ್ತ 21 ರಿಂದ 4ಕ್ಕೆ ಅಂದರೆ 2, 4, 8 ಮತ್ತು 12ಕ್ಕೆ ಇಳಿಸಿದ್ದೇನೆ. ಈ ಕ್ರಮವು 1995ರ ಡಿಸೆಂಬರ್ 2 ರಂದು ಜರುಗಿದ ರಾಜ್ಯಗಳ ಹಣಕಾಸು ಸಚಿವರ ಸಮ್ಮೇಳನದ ಶಿಫಾರಸುಗಳಿಗೆ ಅನುಗುಣವಾಗಿರುತ್ತದೆ. ಈಗ ಇನ್ನೊಂದು ಹೆಜ್ಜೆ ಮುಂದೆ ಇರಿಸುತ್ತ ತೆರಿಗೆ ದರಗಳ ಸಂಖ್ಯೆಯನ್ನು ಮೂರಕ್ಕೆ ಇಳಿಸುವುದಕ್ಕಾಗಿ,

ಈಗಿರುವ ಶೇಕಡ 12 ಮತ್ತು 8ರ ದರಗಳನ್ನು ಶೇಕಡ 10ರ ದರದಲ್ಲಿ ವಿಲೀನಗೊಳಿಸಲು ಪ್ರಸ್ತಾಪಿಸುತ್ತೇನೆ. ಅಂದರೆ ಸದ್ಯಕ್ಕೆ ಶೇಕಡಾ 12 ಹಾಗೂ ಶೇಕಡ 8 ರಂತೆ ತೆರಿಗೆಗೆ ಒಳಪಡುವ ಸರಕುಗಳ ಮೇಲೆ ಇನ್ನು ಮುಂದೆ ಶೇಕಡ 10ರಂತೆ ತೆರಿಗೆ ವಿಧಿಸಲಾಗುವುದು. ಇದರ ಪರಿಣಾಮವಾಗಿ ಅನುಸೂಚಿಯಲ್ಲಿ ಇಲ್ಲದ ಸರಕುಗಳ ಮೇಲಿನ ತೆರಿಗೆಯನ್ನು ಸಹ ಶೇಕಡ 12 ರಿಂದ ಶೇಕಡ 10ಕ್ಕೆ ಇಳಿಸಲು ಪ್ರಸ್ತಾಪಿಸುತ್ತೇನೆ. ಆದಾಗ್ಯೂ ಬಂದೂಕುಗಳು, ಅವುಗಳ ಮದ್ದುಗುಂಡುಗಳು, ಏರ್ ಕಂಡೀಶನರ್‌ಗಳು, ಏರ್‌ಕೂಲರ್‌ಗಳು, ಹಾಸುಗಂಬಳಿಗಳು, ಅಮೃತಶಿಲೆ, ರೆಫ್ರಿಜರೇಟರುಗಳು ಮತ್ತು ಲಿಫ್ಟ್‌ಗಳಂಥ ಸರಕುಗಳ ತೆರಿಗೆದರವನ್ನು ಈಗಿರುವ ಶೇಕಡ 12 ರಿಂದ ವಿಶೇಷ ದರವಾದ ಶೇಕಡ 15ಕ್ಕೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ. ಈ ಸುಧಾರಣ ಕ್ರಮವು ತೆರಿಗೆ ಆಡಳಿತವನ್ನು ಹೆಚ್ಚು ಸಮರ್ಥ ಹಾಗೂ ಪಾರದರ್ಶಕವನ್ನಾಗಿ ಮಾಡಲು ನೆರವಾಗುತ್ತದೆ. ಕರ್ನಾಟಕ ರಾಜ್ಯವು ಕೇವಲ 3 ತೆರಿಗೆ ದರಗಳನ್ನು ಹೊಂದಿದ ಪ್ರಪ್ರಥಮ ರಾಜ್ಯವಾಗಿದೆಯೆಂದು ಸದನಕ್ಕೆ ತಿಳಿಸಲು ನನಗೆ ಹರ್ಷವಾಗುತ್ತದೆ.

(ii) ತೆರಿಗೆ ದರಗಳಲ್ಲಿ ಇಳಿತ

ವಿದ್ಯುತ್ ಬಲ್ಬ್‌ಗಳು, ಆಟಿಕೆಗಳು, ಕರ್ಪೂರ, ಸೊಳ್ಳೆ ನಿವಾರಕಗಳು, ಟೇಲರಿಂಗ್ ಸಾಮಗ್ರಿಗಳು, ಮುದ್ರೆರಹಿತ ಬಟ್ಟೆ ಒಗೆಯುವ ಸೋಪುಗಳು (ಡಿಟರ್ಜೆಂಟುಗಳನ್ನು ಹೊರತುಪಡಿಸಿ), ಸ್ಟೇಶನರಿ ಸಾಮಗ್ರಿಗಳಂಥ ಸಮಾಜದ ಎಲ್ಲ ವರ್ಗಗಳು ಜನರು ಉಪಯೋಗಿಸುವ ಕೆಲವು ಸರಕುಗಳು ಈಗ ಶೇಕಡ 8 ರಂತೆ ತೆರಿಗೆದಾಯಕವಾಗಿದ್ದು, ಇವುಗಳ ಮೇಲಿನ ತೆರಿಗೆ ದರವನ್ನು ಶೇಕಡ 4 ಕ್ಕೆ ಇಳಿಸಲು ಪ್ರಸ್ತಾಪಿಸುತ್ತೇನೆ. ಹಾಗೂ ಒಂದುನೂರು ರೂಪಾಯಿಗಿಂತ ಕಡಿಮೆ ದರ ಇರುವ ಮುದ್ರೆರಹಿತ ಪಾದರಕ್ಷೆಗಳ ಮೇಲೆ ಈಗಿರುವ ಶೇಕಡಾ 4ರ ತೆರಿಗೆ ದರವನ್ನು ಮುಂದುವರೆಸಲು ಪ್ರಸ್ತಾಪಿಸುತ್ತೇನೆ.

(iii) ಉದ್ದಿಮೆಗಳಿಗೆ ಪರಿಹಾರ

(ಅ) ಈಗ ಉತ್ಪಾದಕರು ತಾವು ಖರೀದಿಸುವ ಘಟಕ ಭಾಗಗಳು, ಕಚ್ಚಾ ಸಾಮಗ್ರಿಗಳು ಹಾಗೂ ಪ್ಯಾಕಿಂಗ ಸರಕುಗಳಂಥ ಔದ್ಯೋಗಿಕ ವಸ್ತುಗಳ ಮೇಲೆ ಶೇಕಡ 4ರ ರಿಯಾಯಿತಿ ದರದಲ್ಲಿ ತೆರಿಗೆ ನೀಡಬೇಕಾಗಿರುತ್ತದೆ. ಈ ಸರಕುಗಳ ಮೇಲಿನ ತೆರಿಗೆಯನ್ನು ಶೇಕಡ 3ಕ್ಕೆ ಇಳಿಸಲು ಪ್ರಸ್ತಾಪಿಸುತ್ತೇನೆ. ಈ ಕ್ರಮವು ಉದ್ದಿಮೆಗಳ ಬೆಳವಣಿಗೆಗೆ ಉತ್ತೇಜನ ನೀಡುತ್ತದೆ ಎಂದು ಭಾವಿಸುತ್ತೇನೆ.

(ಅ) ಕಷ್ಟದಲ್ಲಿರುವ ನೇಯ್ದ ಪ್ಲಾಸ್ಟಿಕ್ ಚೀಲಗಳ ಉದ್ದಿಮೆಗೆ ನೆರವು ನೀಡುವ ಸಲುವಾಗಿ ನೇಯ್ದ ಪ್ಲಾಸ್ಟಿಕ್ ಚೀಲಗಳ ಮೇಲಿನ ತೆರಿಗೆಯನ್ನು ಶೇಕಡ 4 ರಿಂದ ಶೇಕಡ 2ಕ್ಕೆ ಇಳಿಸಲು ಪ್ರಸ್ತಾಪಿಸುತ್ತೇನೆ.

(ಇ) ತೆಂಗಿನ ನಾರಿನ ಉದ್ಯಮಕ್ಕೆ ಪರಿಹಾರವಾಗಿ ತೆಂಗಿನ ಸಿಪ್ಪೆ ಮೇಲಿನ ತೆರಿಗೆಯನ್ನು ಮನ್ನಾ ಮಾಡಲು ಪ್ರಸ್ತಾಪಿಸುತ್ತೇನೆ.

(ಈ) ಕೈಮಗ್ಗದ ವಲಯ ಹಾಗೂ ಗ್ರಾಮೀಣ ಕುಶಲ ಕರ್ಮಿಗಳಿಗೆ ನೆರವಾಗುವುದಕ್ಕಾಗಿ ಹತ್ತಿ ನೂಲಿನ ಸೈಜಿಂಗ್ ಹಾಗೂ ಬಣ್ಣ ಹಾಕುವ ಗುತ್ತಿಗೆ ಕೆಲಸಕ್ಕೆ ತೆರಿಗೆ ವಿನಾಯಿತಿ ನೀಡಲು ಪ್ರಸ್ತಾಪಿಸುತ್ತೇನೆ.

(ಉ) ಕರ್ನಾಟಕವು ಶ್ರೀಗಂಧ, ರೋಜ್‌ವುಡ್ ಹಾಗೂ ದಂತದ ಕರಕುಶಲ ವಸ್ತುಗಳಿಗೆ ಪಾರಂಪರಿಕವಾಗಿ ಪ್ರಸಿದ್ಧವಾಗಿದೆ. ಈ ವೃತ್ತಿಯಲ್ಲಿ ತೊಡಗಿರುವ ಕರಕುಶಲಕರ್ಮಿಗಳಿಗೆ ಉತ್ತೇಜನ ನೀಡಲು ದಂತ, ಶ್ರೀಗಂಧ ಮತ್ತು ರೋಜ್‌ವುಡ್ ವಸ್ತುಗಳ (ಪೀಠೋಪಕರಣಗಳನ್ನು ಹೊರತುಪಡಿಸಿ) ಮೇಲಿನ ತೆರಿಗೆಯನ್ನು ಶೇಕಡ 8 ರಿಂದ ಶೇಕಡ 4ಕ್ಕೆ ಇಳಿಸಲು ಪ್ರಸ್ತಾಪಿಸುತ್ತೇನೆ.

(ಊ) ಕಬ್ಬು ಬೆಳೆಗಾರರಿಗೆ ನೆರವು ನೀಡಲು ಬೆಲ್ಲ ಮತ್ತು ಕಬ್ಬಿನ ರಸ ತಯಾರಿಸುವ ಘಟಕಗಳು ಖರೀದಿಸುವ ಕಬ್ಬಿನ ಮೇಲಿನ ತೆರಿಗೆಯನ್ನು ಶೇಕಡ 6 ರಿಂದ ಶೇಕಡ 4ಕ್ಕೆ ಇಳಿಸಲು ಪ್ರಸ್ತಾಪಿಸುತ್ತೇನೆ.

(iv) ರಾಜಿ ಪದ್ಧತಿ ಅಡಿಯಲ್ಲಿ ಸುಧಾರಣೆ ಮತ್ತು ಪರಿಹಾರ

(ಅ) ತೆರಿಗೆ ವಸೂಲಿ ಪದ್ಧತಿಯನ್ನು ಸರಳೀಕರಣಗೊಳಿಸಲು 5 ಲಕ್ಷ ರೂಪಾಯಿಗಳಿಗಿಂತ ಕಡಿಮೆ ವಹಿವಾಟಿನ ವರ್ತಕರಿಗೆ ರಾಜಿ ಪದ್ಧತಿಯನ್ನು ನನ್ನ ಕಳೆದ ಮುಂಗಡಪತ್ರದಲ್ಲಿ ಪರಿಚಯಿಸಲಾಗಿತ್ತು. ಈ ರಾಜಿ ಪದ್ಧತಿಯ ವಹಿವಾಟಿನ ಮಿತಿಯನ್ನು 10 ಲಕ್ಷ ರೂಪಾಯಿಗಳಿಗೆ ಏರಿಸಿ, 5 ಲಕ್ಷ ರೂಪಾಯಿ ಮೀರುವ ವಹಿವಾಟಿನ ಮೇಲೆ ಶೇಕಡ 3 ರಂತೆ ತೆರಿಗೆ ವಿಧಿಸಲು ಪ್ರಸ್ತಾಪಿಸುತ್ತೇನೆ. ಈ ಕ್ರಮದಿಂದ ಹೆಚ್ಚಿನ ಸಂಖ್ಯೆಯ ಸಣ್ಣ ವರ್ತಕರಿಗೆ ಅನುಕೂಲವಾಗಲಿದೆ.

(ಆ) ಈಗ 50 ಲಕ್ಷ ರೂಪಾಯಿಗಳ ವಹಿವಾಟು ಉಳ್ಳ ಹೋಟೆಲ್ ಮತ್ತು ರೆಸ್ಟಾರೆಂಟ್ ಮಾಲೀಕರು ರಾಜಿ ಪದ್ಧತಿಗೆ ಅರ್ಹರಾಗಿರುತ್ತಾರೆ. ಈ ರಾಜಿ ಪದ್ಧತಿಯ ವಹಿವಾಟು ಮಿತಿಯನ್ನು 75 ಲಕ್ಷ ರೂಪಾಯಿಗಳಿಗೆ ಏರಿಸಲು ಪ್ರಸ್ತಾಪಿಸುತ್ತೇನೆ.

(ಇ) ಸದ್ಯಕ್ಕಿರುವ ರಾಜಿ ಪದ್ಧತಿಯಲ್ಲಿ ಕೊಂಚ ಗೊಂದಲ ಇದೆಯೆಂದು ರೇಷ್ಮೆ ವರ್ತಕರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಆದ್ದರಿಂದ ಸದ್ಯಕ್ಕಿರುವ ಸ್ಲ್ಯಾಬ್

ಪದ್ಧತಿಯ ಬದಲಿಗೆ ವಹಿವಾಟಿನ ಮೇಲೆ ಶೇಕಡ ಅರ್ಧದಷ್ಟು ತೆರಿಗೆಯನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ. ಅಲ್ಲದೆ ಈಗಿನ ಪದ್ಧತಿಯಲ್ಲಿಯ ದೂರುಗಳ ನಿವಾರಣೆಗಾಗಿ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲು ಪ್ರಸ್ತಾಪಿಸುತ್ತೇನೆ.

(v) ವಹಿವಾಟು ತೆರಿಗೆ

ಈಗ ವಾರ್ಷಿಕ ವಹಿವಾಟು 15 ರೂಪಾಯಿಗಳಿಗಿಂತ ಕಡಿಮೆ ಇದ್ದ ಪಕ್ಷದಲ್ಲಿ ವಹಿವಾಟು ತೆರಿಗೆಯಿಂದ ವಿನಾಯಿತಿ ಇದೆ. ವಹಿವಾಟು ತೆರಿಗೆಯನ್ನು ತಪ್ಪಿಸುವುದಕ್ಕಾಗಿ ಫರ್ಮುಗಳನ್ನು ವಿಭಜಿಸುವುದನ್ನು ತಡೆಯಲು ಈ ಮಿತಿಯನ್ನು 5 ಲಕ್ಷ ರೂಪಾಯಿಗಳಿಗೆ ಇಳಿಸಲು ಪ್ರಸ್ತಾಪಿಸುತ್ತೇನೆ. ಆದಾಗ್ಯೂ ಸಣ್ಣ ವರ್ತಕರ ಮೇಲಿನ ಭಾರವನ್ನು ಕಡಿಮೆ ಮಾಡಲು ರಾಜಿ ಪದ್ಧತಿಯಡಿಯ ವಹಿವಾಟು ಮಿತಿಯನ್ನು 10 ಲಕ್ಷ ರೂಪಾಯಿಗಳಿಗೇರಿಸುವ ಪ್ರಸ್ತಾವನೆಯನ್ನು ಈಗಾಗಲೇ ಸದನದ ಮುಂದೆ ಮಂಡಿಸಿದ್ದೇನೆ.

(vi) ಸರಳೀಕರಣ ಕ್ರಮಗಳು

(ಅ) ಸರಳೀಕರಣದ ಕ್ರಮವಾಗಿ ಐದನೆಯ ಅನುಸೂಚಿ ಹಾಗೂ ಅಧಿಸೂಚನೆಗಳ ಪುನರಾವಲೋಕನ ಮಾಡಲಾಗಿದೆ. ಐದನೆಯ ಅನುಸೂಚಿಯನ್ನು ಇಂಗ್ಲೀಷ್ ವರ್ಣಮಾಲೆಯ ಪ್ರಕಾರ ಮರು ಹೊಂದಾಣಿಕೆ ಮಾಡಲು ಪ್ರಸ್ತಾಪಿಸುತ್ತೇನೆ. ಈಗಿರುವ ಕೆಲವು ನಮೂದುಗಳನ್ನು ನಿರುಪಯುಕ್ತವಾಗಿರುವುದರಿಂದ ಅವುಗಳನ್ನು ಕೈ ಬಿಡಲು ಪ್ರಸ್ತಾಪಿಸುತ್ತೇನೆ. ಅಲ್ಲದೆ ಲಾಟರಿ ಟಿಕೆಟ್ಟುಗಳು, ಮೊಂಬತ್ತಿಗಳು, ಗೋಧಿ ಉತ್ಪನ್ನಗಳು, ಗೊಟ್ಟ ಹಾಗೂ ನಕ್ಕಿಗಳಂಥ ಕೆಲವು ಸರಕುಗಳು ಸಂಪೂರ್ಣ ತೆರಿಗೆ ವಿನಾಯಿತಿಗೆ ಅರ್ಹವಾಗಿರುವುದಿಲ್ಲ. ಆದ್ದರಿಂದ ಈ ಸರಕುಗಳ ಮೇಲೆ ಶೇಕಡ 2ರ ಅತಿ ಕಡಿಮೆ ದರದಲ್ಲಿ ತೆರಿಗೆಯನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ. ಕೆಲವು ಸರಕುಗಳಿಗೆ ಸಾಕಷ್ಟು ಸಮಯದಿಂದ ಅಧಿಸೂಚನೆಗಳ ಅಡಿ ತೆರಿಗೆ ವಿನಾಯಿತಿ ನೀಡಲಾಗಿದೆ. ಈ ಸರಕುಗಳನ್ನು ಅಧಿಸೂಚನೆಯಗಳಿಂದ ತೆಗೆದು ಐದನೆಯ ಅನುಸೂಚಿಗೆ ಸೇರಿಸಲು ಪ್ರಸ್ತಾಪಿಸುತ್ತೇನೆ.

(ಆ) ಕೆಲವು ಎಣ್ಣೆಕಾಳುಗಳು ಹಾಗೂ ಹತ್ತು ಅರಳೆಯು ಸದ್ಯಕ್ಕೆ ಖರೀದಿ ಹಂತದಲ್ಲಿ ತೆರಿಗೆದಾಯಕವಾಗಿರುತ್ತವೆ. ಉತ್ತಮ ತೆರಿಗೆ ಅನುಸರಣೆಗಾಗಿ ಈ ಸರಕುಗಳ ತೆರಿಗೆದಾಯಕ ಹಂತವನ್ನು ಪ್ರಥಮ ಮಾರಾಟದ ಹಂತಕ್ಕೆ ಬದಲಾಯಿಸಲು ಪ್ರಸ್ತಾಪಿಸುತ್ತೇನೆ.

140. ಈ ತೆರಿಗೆ ಸುಧಾರಣೆ ಕ್ರಮಗಳ ವಿವರಗಳನ್ನು ಅನುಬಂಧ - II ರಲ್ಲಿ ಒದಗಿಸಲಾಗಿದೆ.

ಪ್ರವೇಶ ತೆರಿಗೆ

141. ಕೃಷಿ ಹಾಗೂ ಸಾರಿಗೆ ವಲಯಗಳಿಗೆ ನೆರವಾಗಲು ಟ್ರಾಕ್ಟರುಗಳು, ಪವರ್ ಟಿಲ್ಲರುಗಳು ಹಾಗೂ ಮೋಟಾರು ವಾಹನಗಳ ಬಿಡಿಭಾಗಗಳ ಮೇಲಿನ ಪ್ರವೇಶ ತೆರಿಗೆಯನ್ನು ಮನ್ನ ಮಾಡಲು ಪ್ರಸ್ತಾಪಿಸುತ್ತೇನೆ.

142. ರೆಕ್ಟಿಫೈಡ್ ಸ್ಪಿರಿಟ್ ಮೇಲೆ ಶೇಕಡ 4 ರಂತೆ ಪ್ರವೇಶ ತೆರಿಗೆ ವಿಧಿಸಲು ಪ್ರಸ್ತಾಪಿಸುತ್ತೇನೆ.

ಮನರಂಜನಾ ತೆರಿಗೆ

143. ಸಿನಿಮಾ ಪ್ರದರ್ಶನಗಳ ಮೇಲೆ ನೀಡಬೇಕಾಗುವ ಪ್ರದರ್ಶನ ತೆರಿಗೆಯನ್ನು 1988ರಲ್ಲಿ ಪರಿಷ್ಕರಿಸಲಾಗಿತ್ತು. ಈಗ ಸಿನಿಮಾಗಳ ಪ್ರವೇಶ ದರವು ಏರಿರುವುದರಿಂದ ಸದ್ಯಕ್ಕಿರುವ ಪ್ರದರ್ಶನ ತೆರಿಗೆ ವಿನ್ಯಾಸವು ಅಪ್ರಸ್ತುತವಾಗಿದೆ. ಆದ್ದರಿಂದ ಪ್ರದರ್ಶನ ತೆರಿಗೆಯ ದರಗಳನ್ನು ಪರಿಷ್ಕರಿಸಲು ಪ್ರಸ್ತಾಪಿಸುತ್ತೇನೆ. ಇದರ ವಿವರಗಳನ್ನು ಅನುಬಂಧ - III ರಲ್ಲಿ ಒದಗಿಸಲಾಗಿದೆ.

ಶಾಸನಾತ್ಮಕ ಮತ್ತು ಆಡಳಿತ ಕ್ರಮಗಳು

144. ಆರ್ಥಿಕ ವ್ಯವಸ್ಥೆಯ ಉದಾರೀಕರಣದ ಸಂದರ್ಭಕ್ಕನುಗುಣವಾಗಿ ತೆರಿಗೆ ಆಡಳಿತವು ಹೆಚ್ಚು ಪ್ರಗತಿಪರವಾಗಿರಬೇಕಾಗುತ್ತದೆ. ಈ ನಿಟ್ಟಿನಲ್ಲಿ ಹಲವು ಶಾಸನಾತ್ಮಕ ಮತ್ತು ಆಡಳಿತ ಬದಲಾವಣೆಗಳನ್ನು ಈ ಕೆಳಕಂಡಂತೆ ಮಾಡಲು ಪ್ರಸ್ತಾಪಿಸುತ್ತೇನೆ.

(i) ಎಲ್ಲಾ ಅಧಿನಿಯಮಗಳಲ್ಲಿ ಚಾಲ್ತಿಯಲ್ಲಿರುವ ಅಧಿಸೂಚನೆಗಳನ್ನು ಪುನರಾವಲೋಕನ ಮಾಡುವುದು ಮತ್ತು ಅವಶ್ಯಕತೆ ಇದ್ದಲ್ಲಿ ಹೊಸ ಅಧಿಸೂಚನೆಯನ್ನು ಹೊರಡಿಸುವುದು;

(ii) ಸರ್ಕಾರದ ಇಲಾಖೆಗಳು, ಶಾಸನಬದ್ಧ ಸಂಸ್ಥೆಗಳು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ತಾವು ಮಾಡುವ ಖರೀದಿಗಳ ಮೇಲಿನ ತೆರಿಗೆಯನ್ನು ಮೂಲದಲ್ಲಿಯೇ ಕಡಿತ ಮಾಡಲು ಅಧಿಕಾರ ನೀಡುವುದು;

(iii) ಹೊಸ ಉದ್ದಿಮೆಗಳಿಗೆ ತೆರಿಗೆ ವಿನಾಯಿತಿ ಅಥವಾ ತೆರಿಗೆ ಮುಂದೂಡುವಿಕೆ ಅರ್ಹತೆಯ ಮಿತಿಯನ್ನು ನಿಗದಿಗೊಳಿಸುವಾಗ ಪರಿಗಣಿಸಬೇಕಾದ ಅಂಶಗಳನ್ನು ಸ್ಪಷ್ಟಗೊಳಿಸುವುದು ಹಾಗೂ ಈಗಾಗಲೇ ಅಸ್ತಿತ್ವದಲ್ಲಿರುವ ಔದ್ಯೋಗಿಕ ಘಟಕಗಳು ಉತ್ಪಾದಿತ ಸರಕುಗಳ ಟ್ರೇಡ್ ಮಾರ್ಕ್ ಅಥವಾ ಬ್ರಾಂಡ್ ಹೆಸರುಗಳನ್ನು ಉಪಯೋಗಿಸುವ ಹೊಸ ಉದ್ದಿಮೆಗಳನ್ನು ಔದ್ಯೋಗಿಕ ನೀತಿಯಡಿಯಲ್ಲಿ ವಿನಾಯಿತಿಗಳನ್ನು ಪಡೆಯುವುದರಿಂದ ಹೊರತುಪಡಿಸುವುದು;

(iv) ಸರಕುಗಳ ಮಾಲೀಕತ್ವದ ಬಗ್ಗೆ ಸಂದೇಹ ಬಂದಾಗ, ಅಂತಹ ಸರಕುಗಳನ್ನು ತಡೆಹಿಡಿಯಲು ಹಿಂಬರಹ ನೀಡಲು ವಾಣಿಜ್ಯ ತೆರಿಗೆ ಇಲಾಖೆಗೆ ಅಧಿಕಾರ ನೀಡುವುದು;

(v) ಅವಶ್ಯಕತೆಗೆ ಅನುಗುಣವಾಗಿ ಹೊಸ ಕರನಿರ್ಧರಣಾ ಕಚೇರಿಗಳನ್ನು ಸೃಷ್ಟಿಸುವುದು;

(vi) ವಾಣಿಜ್ಯ ಬ್ಯಾಂಕುಗಳ ಮೂಲಕ ತೆರಿಗೆ ಸಂಗ್ರಹಿಸುವ ಪದ್ಧತಿಯನ್ನು ಜಾರಿಗೆ ಬರುವುದು;

(vii) ರಾಜಿ ಪದ್ಧತಿಯಡಿ ತೆರಿಗೆ ನೀಡುತ್ತಿರುವ ಕರದಾತರ ಕಾಫಿ ಉತ್ಪನ್ನದ ಪ್ರಮಾಣವನ್ನು ನಿರ್ದಿಷ್ಟಗೊಳಿಸಲು ಕರ್ನಾಟಕ ಕೃಷಿ ವರಮಾನ ತೆರಿಗೆ ಕಾಯ್ದೆ 1957ನ್ನು ತಿದ್ದುಪಡಿ ಮಾಡುವುದು.

ತತ್ಸಬಂಧ ತಿದ್ದುಪಡಿಗಳು

145. ಮೇಲೆ ಹೇಳಿದ ಕ್ರಮಗಳನ್ನು ಅನುಷ್ಠಾನಗೊಳಿಸಲು ಹಲವಾರು ತೆರಿಗೆ ಕಾಯ್ದೆಗಳಿಗೆ ತಿದ್ದುಪಡಿ ತರಬೇಕಾಗುತ್ತದೆ. ಈ ತಿದ್ದುಪಡಿಗಳು ಮತ್ತು ಇತರ ಬದಲಾವಣೆಗಳ ವಿವರಗಳನ್ನು ಸದನದ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸಲಾಗುವುದು.

ಅಬಕಾರಿ

146. 1998-99ನೇ ಅಬಕಾರಿ ವರ್ಷಕ್ಕೆ ಅನ್ವಯಿಸುವಂತೆ ಪರವಾನಗಿ ಶುಲ್ಕದ ರಚನೆಯನ್ನು ಪರಿಷ್ಕರಿಸಲು ಪ್ರಸ್ತಾಪಿಸುತ್ತೇನೆ. ವಿವರಗಳನ್ನು ಅನುಬಂಧ IV ರಲ್ಲಿ ಕೊಡಲಾಗಿದೆ.

147. ಪ್ರಸ್ತುತ ವರ್ಷದಲ್ಲಿ ಬಾಂಡೆಡ್ ವೇರ್ ಹೌಸ್‌ಗಳ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಉದ್ದೇಶಿಸಿದ್ದೇನೆ.

148. ಹಾಲಿ ರಾಜ್ಯದೊಳಗೆ ಮಾರಾಟವಾಗುವ ಬೀಯರ್ ಮೇಲಿನ ಸುಂಕ ಪ್ರತಿ ಲೀಟರಿಗೆ ನಾಲ್ಕು ರೂ.ಗಳಾಗಿದ್ದು, ಇದನ್ನು ಐದು ರೂ.ಗಳಿಗೆ ಹೆಚ್ಚಿಸಲು ಪ್ರಸ್ತಾವಿಸುತ್ತೇನೆ.

149. ಹಾಲಿ ರಾಜ್ಯದ ಹೊರಗಡೆ ಮಾರಾಟ ಮಾಡುವ (ರಫ್ತು) ಬೀಯರ್ ಮೇಲಿನ ಸುಂಕವು ಪ್ರತಿ ಲೀಟರ್‌ಗೆ 40 ಪೈಸೆಗಳು ಮಾತ್ರವಿದ್ದು, ಇದನ್ನು ಒಂದು ರೂಪಾಯಿಗೆ ಏರಿಸಲು ಪ್ರಸ್ತಾವಿಸುತ್ತೇನೆ.

150. ಅಬಕಾರಿ ಕಾಯಿದೆಯ ಕಲಂ 45ರ ರೀತ್ಯ ವಿಧಿಸುವ ದಂಡದ ಗರಿಷ್ಠ ಮಿತಿಯು ಪ್ರತಿ ಅಪರಾಧಕ್ಕೆ ಈಗ ರೂ. 5,000 ಇರುತ್ತದೆ. ಅಬಕಾರಿ ಅಪರಾಧಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಪ್ರತಿ ಅಬಕಾರಿ ಪ್ರಕರಣದಲ್ಲಿ ಕನಿಷ್ಠ ರೂ. 5,000 ಹಾಗೂ ಗರಿಷ್ಠ ರೂ. 25,000 ದಂಡವನ್ನು ವಿಧಿಸಲು ಪ್ರಸ್ತಾಪಿಸುತ್ತೇನೆ.

ನೋಂದಣಿ ಹಾಗೂ ಮುದ್ರಾಂಕ

151. ನೋಂದಣಿ ಹಾಗೂ ಮುದ್ರಾಂಕ ಶುಲ್ಕಗಳನ್ನು ತಪ್ಪಿಸಿಕೊಳ್ಳಲು ಕ್ರಯಪತ್ರದ ಬದಲಿಗೆ ಗೇಣಿ ಪತ್ರಗಳನ್ನು ಬರೆದುಕೊಡುತ್ತಲಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ಗುತ್ತಿಗೆ

ಪತ್ರಗಳನ್ನು 99 ವರ್ಷಗಳ ಅವಧಿಗೆ ಅಥವಾ ಶಾಶ್ವತತೆಯಾಗಿ ಅತ್ಯಲ್ಪ ಮೊತ್ತದ ಬಾಡಿಗೆಗೆ ಜಾರಿಗೊಳಿಸಲಾಗುತ್ತಿದೆ. ವಾಸ್ತವಿಕವಾಗಿ ಇವೆಲ್ಲಾ ಕ್ರಯಪತ್ರಗಳೇ. ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಮಾರಾಟ ವಹಿವಾಟುಗಳ ಕುರಿತು ಮುದ್ರಾಂಕ ಶುಲ್ಕದ ಪಾವತಿಯನ್ನು ತಪ್ಪಿಸಲು ಕ್ರಯದ ಕರಾರು ಪತ್ರದೊಂದಿಗೆ ಮೊಖ್ತಾರನಾಮೆ (ಪವರ್ ಆಫ್ ಅಟಾರ್ನಿ) ಪಡೆದು ಆಸ್ತಿಗೆ ಸಂಬಂಧಿಸಿದಂತೆ ಪರಿಪೂರ್ಣವಾದ ಹಕ್ಕು ಪತ್ರ ಪಡೆಯದೆ ಆಸ್ತಿಯನ್ನು ಅನುಭವಿಸಲಾಗುತ್ತಿದೆ. ಆದಾಯ ಸೋರುವಿಕೆಯನ್ನು ತಡೆಗಟ್ಟಲು, ಹತ್ತು ವರ್ಷಕ್ಕೆ ಮೇಲ್ಪಟ್ಟ ಗೇಣಿ ಪತ್ರಗಳಿಗೆ ಆಸ್ತಿಯ ಮಾರುಕಟ್ಟೆ ಮೌಲ್ಯದ ಮೇಲೆ ಶೇಕಡ 5 ರಷ್ಟು ಮುದ್ರಾಂಕ ಶುಲ್ಕವನ್ನು ಮತ್ತು ಆಸ್ತಿಯನ್ನು ಮಾರಾಟ ಮಾಡಲು ಮೊಖ್ತಾರನಾಮೆ ಪತ್ರದ ಮೂಲಕ ತನ್ನ ಕುಟುಂಬ ವರ್ಗದವರಲ್ಲದ ವ್ಯಕ್ತಿಗಳಿಗೆ ಅಧಿಕಾರ ನೀಡಿದ್ದರೆ ಆಸ್ತಿಯ ಮಾರುಕಟ್ಟೆ ಮೌಲ್ಯದ ಮೇಲೆ ಶೇಕಡ 2 ರಷ್ಟು ಮುದ್ರಾಂಕ ಶುಲ್ಕವನ್ನು ವಿಧಿಸಲು ನಾನು ಉದ್ದೇಶಿಸಿದ್ದೇನೆ. ಇಂತಹ ಮೊಖ್ತಾರನಾಮೆ ಪತ್ರದ ಮೇಲೆ ಪಾವತಿಸಿದ ಶುಲ್ಕವನ್ನು ನಂತರ ಕ್ರಯಪತ್ರ ಬರೆದುಕೊಟ್ಟಿದ್ದರೆ ಅದಕ್ಕೆ ಹೊಂದಾಣಿಕೆ ಮಾಡಲಾಗುವುದು.

152. ಈಗ ನಿರ್ಮಾಣ ಅಥವಾ ಅಭಿವೃದ್ಧಿಗಾಗಿ ಅಥವಾ ಮಾರಾಟ ಅಥವಾ ವರ್ಗಾವಣೆಗೆ ಅದು ಯಾವುದೇ ರೀತಿಯದ್ದಾಗಿರಲಿ ಒಬ್ಬ ಪ್ರವರ್ತಕ ಅಥವಾ ಅಭಿವೃದ್ಧಿದಾರನಿಗೆ ಸ್ಥಿರಸ್ವತ್ತಿನ ಪ್ರಾಧಿಕಾರವನ್ನು ನೀಡುವಂತಹ ಒಪ್ಪಂದದ ಪತ್ರಗಳಿಗೆ (ಜಂಟಿ ಅಭಿವೃದ್ಧಿ ಕರಾರು) ಬೆಲೆಗೆ ತಕ್ಕಂತೆ ಶುಲ್ಕವನ್ನು ಶೇಕಡ 6 ರಷ್ಟು ವಿಧಿಸಲಾಗುತ್ತಿದೆ. ಇಂತಹ ಪತ್ರಗಳ ನೋಂದಣಿಯನ್ನು ಪ್ರೋತ್ಸಾಹಿಸಲ ಇದನ್ನು ನಾನು ಶೇಕಡ 4 ರಂತೆ ವಿಧಿಸಲು ಹಾಗೂ ಇಂತಹ ಲಿಖಿತ ಪತ್ರಗಳ ಮೇಲೆ ನಾಲ್ಕು ಲಕ್ಷ ರೂಪಾಯಿಗಳ ಗರಿಷ್ಠ ಮಿತಿಯನ್ನು ನಿಗದಿಪಡಿಸಲು ಉದ್ದೇಶಿಸಿದ್ದೇನೆ.

153. ಗಿರವಿ, ಒತ್ತೆ ಅಥವಾ ಅಡಮಾನಿಕೆಯ ಸಾಲದ ಲಿಖಿತ ಪತ್ರಕ್ಕೆ ಕರ್ನಾಟಕ ಮುದ್ರಾಂಕ ಕಾಯಿದೆ 1957ರ ಅನುಚ್ಛೇದ 6(2)ರ ಅನುಸೂಚಿಯ ಪ್ರಕಾರ ಮುದ್ರಾಂಕ ಶುಲ್ಕ ಆಕರಣೆಯನ್ನು ಸರಳೀಕರಿಸಲು ಅನುಚ್ಛೇದ 5 (i) ದಂತೆ ರೂ. 50ರ ನಿರ್ದಿಷ್ಟ ಶುಲ್ಕವನ್ನು ವಿಧಿಸಲು ಮತ್ತು ಸ್ವತ್ತಿನ ಸ್ವಾಧೀನತೆಯನ್ನು ಕೊಡದ ಅಡಮಾನ (ಸಿಂಪಲ್ ಮಾರ್ಟ್‌ಗೇಜ್) ಪತ್ರದ ಮೇಲೆ ಗರಿಷ್ಠ ರೂ. 2.5 ಲಕ್ಷದ ಬದಲು ರೂ. 3.00 ಲಕ್ಷಗಳ ಗರಿಷ್ಠಕ್ಕೆ ಒಳಪಟ್ಟು ಶೇಕಡ 5 ರಿಂದ ಶೇಕಡ 3ಕ್ಕೆ ಶುಲ್ಕವನ್ನು ಕಡಿಮೆಗೊಳಿಸಲು ನಾನು ಪ್ರಸ್ತಾವಿಸುತ್ತೇನೆ. ಅದೇ ಪ್ರಕಾರ, ಕೈಗಾರಿಕಾ ಬೆಳವಣಿಗೆಯನ್ನು ಪ್ರೋತ್ಸಾಹಿಸಲು, ಕೈಗಾರಿಕಾ ಯಂತ್ರಗಳ ಗೇಣಿ ಪತ್ರಗಳ ಮೇಲೆ ವಿಧಿಸಲಾಗುತ್ತಿರುವ ಗರಿಷ್ಠ ಮುದ್ರಾಂಕ ಶುಲ್ಕ ರೂ. ಎರಡು ಲಕ್ಷದ ಬದಲು ರೂ. ಹತ್ತು ಸಾವಿರ ಗರಿಷ್ಠ ಶುಲ್ಕವನ್ನು ನಿಧಿಸಲು ನಾನು ಉದ್ದೇಶಿಸಿದ್ದೇನೆ.

154. ರಾಜ್ಯ ಸರ್ಕಾರವು ಕರ್ನಾಟಕ ಮುದ್ರಾಂಕ ಅಧಿನಿಯಮ, 1957ರ ಕಲಂ 9 ಹಾಗೂ ನೋಂದಣಿ ಅಧಿನಿಯಮ, 1908ರ ಕಲಂ 78ರ ಅಡಿ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಫೀಜನ್ನು ಕಡಿಮೆ ಮಾಡಲು / ಮಾಫಿ ಮಾಡಲು ಅಧಿಕಾರ ಹೊಂದಿರುತ್ತದೆ. ಸರ್ಕಾರವು ಇದರಿಂದ ಹೆಚ್ಚಿನ ಮೊತ್ತದ ರಾಜಸ್ವವನ್ನು ಕಳೆದುಕೊಳ್ಳುತ್ತಿದೆ. ಆದ್ದರಿಂದ ಕೃಷಿ ಸಾಲ ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಹೊರತುಪಡಿಸಿ ಶುಲ್ಕದ ರಿಯಾಯಿತಿಯನ್ನು ಶೇಕಡ

50ಕ್ಕೆ ಮೀರದಂತೆ ಮಿತಗೊಳಿಸುವುದಕ್ಕಾಗಿ ನಾನು ಉದ್ದೇಶಿಸಿದ್ದೇನೆ. ಶೇಕಡ 50ಕ್ಕೆ ಮೀರದಂತೆ ಮಿತಗೊಳಿಸುವುದಕ್ಕಾಗಿ ನಾನು ಉದ್ದೇಶಿಸಿದ್ದೇನೆ. ಯಾವುದೇ ಕಾನೂನಿನಲ್ಲಿ ಸ್ಟಾಂಪ್ ಡ್ಯೂಟಿಯ ವಿನಾಯಿತಿ / ರಿಯಾಯಿತಿ ಉಲ್ಲೇಖವಿದ್ದರೂ ಅದನ್ನು ಕರ್ನಾಟಕ ಮುದ್ರಾಂಕ ಕಾಯಿದೆ, 1957ರ ಕಲಂ 9ರ ಅನ್ವಯ ಅಧಿಸೂಚನೆಗೊಳಿಸುವ ಮೂಲಕವೇ ಜಾರಿಗೆ ತರುವ ಉದ್ದೇಶವನ್ನು ನಾನು ಹೊಂದಿದ್ದೇನೆ.

155. ಮೇಲಿನ ಪ್ರಸ್ತಾವನೆಯ ಅನುಗುಣವಾಗಿ ನೋಂದಣಿ ಶುಲ್ಕವನ್ನು ಪರಿಷ್ಕರಿಸಲು ಉದ್ದೇಶಿಸಿದ್ದೇನೆ.

156. ಪ್ರಸ್ತಾವನೆ ಮಾಡಿರುವ ಬದಲಾವಣೆಗಳನ್ನು ಅನುಬಂಧ V ಮತ್ತು VI ರಲ್ಲಿ ವಿತರಿಸಲಾಗಿದೆ.

ಮೋಟಾರು ವಾಹನ ತೆರಿಗೆ

157. ಕಳೆದ ವರ್ಷ ನಾನು ಮೋಟಾರು ವಾಹನಗಳ ತೆರಿಗೆಯಲ್ಲಿ ಹೆಚ್ಚುವರಿ ಸಂಪನ್ಮೂಲ ಸಂಗ್ರಹಣೆಗೆ ಕ್ರಮಗಳನ್ನು ಪ್ರಸ್ತಾಪಿಸಿದ್ದೆ. ಇದುವರೆಗಿನ ತೆರಿಗೆ ಸಂಗ್ರಹಣೆಯನ್ನು ಗಮನಿಸಿದಾಗ ಗುರಿಯನ್ನು ತಲುಪುವ ಸಾಧ್ಯತೆ ಇದೆ. ಈ ವರ್ಷ ನಾನು ಮೋಟಾರು ವಾಹನ ತೆರಿಗೆಯಲ್ಲಿ ಯಾವುದೇ ಬದಲಾವಣೆ ಮಾಡಲು ಉದ್ದೇಶಿಸಿಲ್ಲ.

ಮೂಲಭೂತ ಸೌಲಭ್ಯಗಳ ಕರ

158. ಮಾರಾಟ ತೆರಿಗೆ, ಅಬಕಾರಿ ಪರವಾನಗಿ ಶುಲ್ಕ, ಮೋಟಾರು ವಾಹನ ತೆರಿಗೆ, ನ್ಯಾಯಿಕವಲ್ಲದ ಮುದ್ರಾಂಕ ಶುಲ್ಕ, ವೃತ್ತಿ ತೆರಿಗೆ, ವಿಲಾಸ ತೆರಿಗೆ, ಜೂಜು ತೆರಿಗೆಯ ಮೇಲೆ ಬಿಎಂಆರ್‌ಟಿಸಿ ಕರವನ್ನು ವಿಧಿಸುತ್ತಿರುವುದು ಮಾನ್ಯ ಸದಸ್ಯರಿಗೆ ತಿಳಿದಿದೆ. ಹಾಲಿ ಈ ತೆರಿಗೆಗಳ ಮೇಲೆ ಶೇಕಡಾ 5ರಷ್ಟು ಕರ ವಿಧಿಸುತ್ತಿದ್ದು ಅಬಕಾರಿ ಪರವಾನಗಿ ಶುಲ್ಕದ ಮೇಲೆ ಮಾತ್ರ ಶೇಕಡಾ 15ರಷ್ಟು ಕರ ವಿಧಿಸಲಾಗುತ್ತಿದೆ. ಬಿಎಂಆರ್‌ಡಿಎ ಪ್ರದೇಶಕ್ಕೆ ಮಾತ್ರ ಈ ಕರ ಅನ್ವಯಿಸುತ್ತದೆ.

159. ನಾನು ಈ ಕರವನ್ನು ಇಡೀ ರಾಜ್ಯಕ್ಕೆ ಎರಡು ವರ್ಷಗಳ ಅವಧಿಗೆ ಮಾತ್ರ ವಿಧಿಸಲು ಉದ್ದೇಶಿಸಿದ್ದೇನೆ. ಆದರೆ ವೃತ್ತಿ ತೆರಿಗೆ, ವಿಲಾಸ ತೆರಿಗೆ, ಜೂಜು ತೆರಿಗೆಯಿಂದ ಈ ಕರವನ್ನು ಹಿಂದೆಗೆದುಕೊಳ್ಳಲು ಉದ್ದೇಶಿಸುತ್ತೇನೆ. ಈ ಕರದಿಂದ ಸಂಗ್ರಹವಾಗುವ ಹಣವನ್ನು ಕರ್ನಾಟಕ ನಿಗಮದ ಬಂಡವಾಳವನ್ನಾಗಿ ಉಪಯೋಗಿಸಲಾಗುವುದು. ಈ ಬಗ್ಗೆ ಸಂಬಂಧಪಟ್ಟ ಕಾಯ್ದೆಗಳಿಗೆ ತಿದ್ದುಪಡಿ ತರಲಾಗುವುದು.

1997-98ರ ಪರಿಷ್ಕೃತ ಅಂದಾಜುಗಳು

160. 1997-98ರ ಆಯವ್ಯಯದಲ್ಲಿ 13644.77 ಕೋಟಿ ರೂ.ಗಳ ಒಟ್ಟು ಜಮೆಯನ್ನು ನಿರೀಕ್ಷಿಸಲಾಗಿತ್ತು. ಆದರೆ ಪರಿಷ್ಕೃತ ಅಂದಾಜುಗಳ ರೀತ್ಯಾ ಈಗ ಒಟ್ಟು ಜಮೆ 13286.21 ಕೋಟಿ ರೂ.ಗಳಾಗಿವೆ. ಆಯವ್ಯಯದಲ್ಲಿ 13456.68 ಕೋಟಿಗಳ ಒಟ್ಟು ವೆಚ್ಚವನ್ನು ನಿಗದಿಗೊಳಿಸಲಾಗಿತ್ತು. ಪರಿಷ್ಕೃತ ಅಂದಾಜುಗಳ ರೀತ್ಯಾ ಈಗ ಒಟ್ಟು ವೆಚ್ಚ 13379.73

ಕೋಟಿ ರೂ.ಗಳಾಗಿದೆ. ಸಾರ್ವಜನಿಕ ಲೆಕ್ಕದಲ್ಲಿನ ಹಣವನ್ನು ಪರಿಗಣಿಸಿದರೆ ಈ ವರ್ಷದ ಅಂತಿಮ ಕೊರತೆ 104.3 ಕೋಟಿ ರೂಪಾಯಿಗಳಾಗಬಹುದೆಂದು ಭಾವಿಸಲಾಗಿದೆ. 1997-98ರ ಆಯವ್ಯಯ ಪತ್ರದಲ್ಲಿ 96.85 ಕೋಟಿ ರೂ.ಗಳ ಕೊರತೆಯನ್ನು ತೋರಿಸಲಾಗಿತ್ತು.

1998-99ರ ಆಯವ್ಯಯ ಅಂದಾಜುಗಳು

161. 1998-99ನೇ ಸಾಲಿನಲ್ಲಿ 15157.42 ಕೋಟಿ ರೂ.ಗಳ ಒಟ್ಟು ಜಮೆಯನ್ನು ನಿರೀಕ್ಷಿಸಲಾಗಿದೆ. ಇದರಲ್ಲಿ ರಾಜಸ್ವ ಜಮೆ 12979.56 ಕೋಟಿ ರೂ.ಗಳಾಗಿದೆ ಹಾಗೂ ಬಂಡವಾಳ ಜಮೆಗಳು 2177.86 ಕೋಟಿ ರೂ.ಗಳಾಗಿವೆ. ಒಟ್ಟು ವೆಚ್ಚವನ್ನು 15579.74 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ರಾಜಸ್ವ ವೆಚ್ಚ 13360.58 ಕೋಟಿ ರೂ.ಗಳು ಮತ್ತು 2219.16 ಕೋಟಿ ರೂ.ಗಳು ಬಂಡವಾಳ ವೆಚ್ಚವಾಗಿದೆ.

162. ನನ್ನ ಆಯವ್ಯಯ ಭಾಷಣದಲ್ಲಿ ಈಗಾಗಲೇ ಪ್ರಸ್ತಾವಿಸಿರುವ ಪ್ರಮುಖ ಆದಾಯ ತೆರಿಗೆ ಆದಾಯಗಳ ಜೊತೆಗೆ ಸರ್ಕಾರವು ಸಣ್ಣ ಉಳಿತಾಯದಿಂದ 550 ಕೋಟಿ ರೂ.ಗಳನ್ನು; ಮಾರುಕಟ್ಟೆ ಸಾಲದಿಂದ (ನಿವ್ವಳ) 281.56 ಕೋಟಿ ರೂ.ಗಳನ್ನು; ಒಪ್ಪಂದದ ಸಾಲದ ಮೂಲಕ 216.13 ಕೋಟಿ ರೂ.ಗಳನ್ನು ಮತ್ತು ಕೇಂದ್ರ ಯೋಜನಾ ನೆರವಿನಿಂದ 122042 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರದಿಂದ ಸಂಗ್ರಹಿಸಲಾಗುವುದು.

163. ಈ ಅಂದಾಜು ರೀತ್ಯಾ ಒಟ್ಟಾರೆ 422.30 ಕೋಟಿ ರೂ.ಗಳ ಕೊರತೆಯನ್ನು ಈ ವರ್ಷ ನಿರೀಕ್ಷಿಸಲಾಗುತ್ತಿದೆ ಆರಂಭ ಶಿಲ್ಕು (-) 104.30 ಕೋಟಿ ರೂ.ಗಳನ್ನು ಪರಿಗಣನೆಗೆ ತೆಗೆದುಕೊಂಡರೆ, ಹಾಗೂ ಪ್ರಸಕ್ತ ತೆರಿಗೆ ದರ, ತೆರಗೆಯೇತರ ಜಮೆಗಳಿಂದ ಅಂತಿಮ ಶಿಲ್ಕು (-) 526.62 ಕೋಟಿ ರೂ.ಗಳಾಗಲಿದೆ. ತೆರಿಗೆ ಪದ್ಧತಿ ತಂದಿರುವ ಹಲವಾರು ಬದಲಾವಣೆಗಳಿಂದ (+) 230 ಕೋಟಿ ರೂ.ಗಳು (ವಿವರಗಳನ್ನು ಅನುಬಂಧಗಳಲ್ಲಿ ನೀಡಲಾಗಿದೆ) ಮತ್ತು ಹತ್ತನೆ ಹಣಕಾಸು ಆಯೋಗ ಒಪ್ಪಿಕೊಂಡಿರುವ ಸಂಪನ್ಮೂಲ ವರ್ಗಾವಣೆ ವಿಧಾನದ ಅನುಷ್ಠಾನದಿಂದ 100 ಕೋಟಿ ರೂ.ಗಳನ್ನು ನಿರೀಕ್ಷಿಸಲಾಗುತ್ತಿದೆ. ಇದರಿಂದ 1998-99ರ ಅಂತಿಮ ಬಾಕಿ (-) 196.62 ಕೋಟಿ ರೂಪಾಯಿಗಳಾಗಲಿವೆ.

164. ಕೇಂದ್ರದ ಐದನೇ ವೇತನ ಆಯೋಗದ ವರದಿ ಜಾರಿಯ ಪರಿಣಾಮದಿಂದಾಗಿ ರಾಜ್ಯ ಸರ್ಕಾರದ ಮೇಲೆ ಬೀಳಬಹುದಾಗಿರುವ ಭಾರೀ ಹೊರೆಯನ್ನು ನಾವು ಹೊರಬೇಕಾಗಿರುವುದನ್ನು ಮಾನ್ಯ ಸದಸ್ಯರು ಗಮನಿಸುತ್ತೀರಿ ಎಂದು ಭಾವಿಸಿದ್ದೇನೆ. ಈ ಉದ್ದೇಶಕ್ಕಾಗಿ ನಾನು ಆಯವ್ಯಯದಲ್ಲಿ 450 ಕೋಟಿ ರೂ.ಗಳನ್ನು ಸದ್ಯಕ್ಕೆ ಒದಗಿಸಿದ್ದೇನೆ. ಹೆಚ್ಚುವರಿ ಸಂಪನ್ಮೂಲಗಳ ಸಂಗ್ರಹಣೆ ಮತ್ತು ಅನವಶ್ಯಕ ವೆಚ್ಚಗಳ ಮೇಲೆ ನಿಯಂತ್ರಣವನ್ನು ನಾನು ಪ್ರಸ್ತಾಪಿಸಿದ್ದರೂ ಇವುಗಳಿಂದ ಒಟ್ಟಾರೆ ಕೊರತೆಯನ್ನು ನಿಭಾಯಿಸಲಾಗುವುದಿಲ್ಲ. ಐದನೇ ವೇತನ ಆಯೋಗದ ವೇತನ ಶ್ರೇಣಿಗಳಿಗೆ ಅನುಗುಣವಾಗಿ ರಾಜ್ಯದ ವೇತನ ಶ್ರೇಣಿಗಳನ್ನು ಪರಿಷ್ಕರಿಸಿದರೆ ರಾಜ್ಯ ಮೇಲೆ ಬೀಳಲಿರುವ ಅಧಿಕ ಹೊರೆಯಲ್ಲಿ ಶೇಕಡಾ 50ರಷ್ಟನ್ನು ಕೇಂದ್ರವು ಭರಿಸಬೇಕೆಂದು ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡಿಕೊಂಡಿದ್ದೇವೆ.

165. ಈ ವಿಷಯವನ್ನು ಹನ್ನೊಂದನೆಯ ಹಣಕಾಸು ಆಯೋಗದ ಮುಂದೆ ತರಬೇಕೆಂದು ಕೇಂದ್ರ ಸರ್ಕಾರವು ನಿಲುವು ತಳೆದಿದೆ. ಸಂವಿಧಾನದ ಉಪಬಂಧಗಳ ಮೇರೆಗೆ ಹನ್ನೊಂದನೆ ಹಣಕಾಸು ಆಯೋಗವನ್ನು 1997ರಲ್ಲಿಯೇ ರಚಿಸಬೇಕಾಗಿತ್ತು. ಆದರೆ ಅದನ್ನೂ ಇನ್ನೂ ರಚಿಸಲಾಗಿಲ್ಲ. ಈ ವಿಷಯವನ್ನು ಹನ್ನೊಂದನೇ ಹಣಕಾಸು ಆಯೋಗದ ಮುಂದೆ ಪ್ರಸ್ತಾಪಿಸುವ ತನಕ ನಾವು ಕಾಯಲಾಗುವುದಿಲ್ಲ. ರಾಜ್ಯದ ಹೊರೆಯನ್ನು ಕೇಂದ್ರವು ಹಂಚಿಕೊಳ್ಳದಿದ್ದರೆ ಒಂಬತ್ತನೇ ಯೋಜನೆಯ ಮೇಲೆ ಭಾರೀ ಹೊಡೆತ ಬೀಳುತ್ತದೆ. ಆದ್ದರಿಂದ ನಾನು ಈ ವಿಷಯವನ್ನು ಹನ್ನೊಂದನೇ ಹಣಕಾಸು ಆಯೋಗದ ಮುಂದೆ ತರದೆ, ರಾಜ್ಯ ಸರ್ಕಾರಕ್ಕೆ ಅಗತ್ಯ ನೆರವನ್ನು ನೀಡಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಯೋಜನಾ ಆಯೋಗದ ಜೊತೆ ಚರ್ಚೆಯ ಸಮಯದಲ್ಲಿ ವಾಸ್ತವವಾದ ಯೋಜನಾ ನೆರವು ಮತ್ತು ಮಾರುಕಟ್ಟೆ ಸಾಲದ ಪ್ರಮಾಣ ತಿಳಿಯುತ್ತದೆ. ಸ್ವಯಂ ಆದಾಯ ಘೋಷಣೆ ಯೋಜನೆಯಡಿ (ವಿ.ಡಿ.ಐ.ಎಸ್.) ಸಂಗ್ರಹವಾದ ತೆರಿಗೆಯಲ್ಲಿ ಸ್ವಲ್ಪ ಭಾಗ ರಾಜ್ಯಕ್ಕೆ ಕೂಡ ದೊರಕಲಿದೆ. ಈ ಎಲ್ಲಾ ಕ್ರಮಗಳನ್ನು ನಮ್ಮ ಹಣಕಾಸು ಕೊರತೆಯನ್ನು ಭರಿಸಲು ಸಹಕಾರಿಯಾಗುತ್ತದೆ ಎಂಬ ವಿಶ್ವಾಸ ನನಗಿದೆ.

166. ನಾನು ಈಗ 1998-99ರ ಮುಂಗಡ ಪತ್ರದ ಅಂದಾಜುಗಳನ್ನು ಸದನದ ಪರಿಶೀಲನೆ ಹಾಗೂ ಅನುಮೋದನೆಗಾಗಿ ಮಂಡಿಸುತ್ತೇನೆ. ಸದನದ ವಿಷಯ ಸಮಿತಿಗಳ ರಚನೆಯನ್ನು ಕೈಬಿಡುವ ಸಂಭವವಿರುವುದರಿಂದ ಈ ಮುಂಗಡ ಪತ್ರದ ಮೇಲೆ ಏಪ್ರಿಲ್ ಮತ್ತು ಮೇ ತಿಂಗಳಿಗಳಲ್ಲಿ ಸದನದಲ್ಲಿ ಸಂಪೂರ್ಣ ಚರ್ಚೆ ನಡೆಸಲಾಗುವುದು. ಆಗ ಸರ್ಕಾರವು ಪೂರ್ಣ ಆಯವ್ಯಯಕ್ಕೆ ಸದನದ ಅನುಮೋದನೆಯನ್ನು ಕೋರಲಿದೆ. ಈಗ ನಾನು 1998ರ ಜೂನ್ 30ಕ್ಕೆ ಅಂತ್ಯಗೊಳ್ಳುವ ಮೂರು ತಿಂಗಳಿಗೆ ಲೇಖಾನುದಾನವನ್ನು ಕೋರುತ್ತೇನೆ.

ಜೈ ಹಿಂದ್ - ಜೈ ಕರ್ನಾಟಕ

ಬಜೆಟ್ ವಿಹಂಗಮ

(ಕೋಟಿ ರೂಪಾಯಿಗಳಲ್ಲಿ)

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 1997-98	ಪರಿಷ್ಕೃತ ಅಂದಾಜು 1997-98	ಬಜೆಟ್ ಅಂದಾಜು 1998-99
	ಪ್ರಾರಂಭ ಶಿಲ್ಕು	-98.94	-10.78	-104.30
	ಎ. ರಾಜಸ್ವ ಲೆಕ್ಕ			
I.	ಜಮೆ :			
	ರಾಜ್ಯ ತೆರಿಗೆ	7125.84	6709.50	7664.00
	ಕೇಂದ್ರ ತೆರಿಗೆಯಲ್ಲಿ ಪಾಲು	1983.26	1983.26	2280.75
	ಕೇಂದ್ರ ಸರ್ಕಾರದ ಅನುದಾನಗಳು	1472.41	1425.88	1593.18
	ತೆರಿಗೆಯೇತರ ರಾಜಸ್ವ	1184.94	1298.68	1441.63
	ಒಟ್ಟು-ಎ. I	11766.45	11417.32	12979.56
II.	ವೆಚ್ಚ :			
	ಸಾಮಾಜಿಕ ಸೇವೆಗಳು	4624.34	4472.57	4991.63
	ಆರ್ಥಿಕ ಸೇವೆಗಳು	3194.30	3196.21	3384.73
	ಸಾಮಾನ್ಯ ಸೇವೆಗಳು	3855.32	3862.92	4634.72
	ಸಹಾಯಾನುದಾನ ಮತ್ತು ಅಂಶದಾನ	291.49	301.49	349.50
	ಒಟ್ಟು-ಎ. II	11965.45	11833.19	13360.58
	ಎ. ರಾಜಸ್ವ ಲೆಕ್ಕ ಹೆಚ್ಚುವರಿ / ಕೊರತೆ	-199.00	-415.87	-381.02

ನೋಟ

(ಕೋಟಿ ರೂಪಾಯಿಗಳಲ್ಲಿ)

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 1997-98	ಪರಿಷ್ಕೃತ ಅಂದಾಜು 1997-98	ಬಜೆಟ್ ಅಂದಾಜು 1998-99
	ಬಿ. ಬಂಡವಾಳ ಲೆಕ್ಕ			
I .	ಜಮೆ :			
	ಭಾರತ ಸರ್ಕಾರದಿಂದ ಸಾಲ	1167.39	1126.48	1412.74
	ಬಹಿರಂಗ ಮಾರುಕಟ್ಟೆ ಸಾಲ (ನಿವ್ವಳ)	256.33	255.92	281.56
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ	186.80	177.99	216.13
	ಸಾಲಗಳು ಮತ್ತು ಮುಂಗಡಗಳ ವಸೂಲಿ	86.69	118.85	132.21
	ಸಾರ್ವಜನಿಕ ಲೆಕ್ಕ (ನಿವ್ವಳ) ಇತ್ಯಾದಿ	181.11	189.65	135.22
	ಒಟ್ಟು-ಬಿ. I	**1878.32**	**1868.89**	**2177.86**
I I .	ಬಟವಾಡೆ :			
	ಬಂಡವಾಳ ವೆಚ್ಚ (ನಿವ್ವಳ)	996.85	1109.12	1637.65
	ಕೇಂದ್ರ ಸಾಲಗಳ ಮರುಸಂದಾಯ	260.69	256.27	304.73
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇತ್ಯಾದಿಗಳಿಗೆ ಸಾಲಗಳ ಮರುಸಂದಾಯ	18.43	22.28	31.94
	ಸಾಲಗಳ ಮತ್ತು ಮುಂಗಡಗಳ ಬಟವಾಡೆ	215.26	158.87	244.84
	ಒಟ್ಟು-ಬಿ. II	**1491.23**	**1546.54**	**2219.16**
ಬಿ.	ಬಂಡವಾಳ ಲೆಕ್ಕ ಹೆಚ್ಚಳ / ಕೊರತೆ	387.09	322.35	-41.30
ಸಿ.	ವರ್ಷದ ಒಟ್ಟು ಹೆಚ್ಚಳ / ಕೊರತೆ	188.09	-93.52	-422.32
ಡಿ.	ಮುಕ್ತಾಯ ಶಿಲ್ಕು ಕಳೆದಾಗ	89.15	-104.30	-526.62
ಇ.	ಎಆರ್‌ಎಮ್			
	(i) ಎಆರ್‌ಎಮ್			
	(ಅ) ಮೂಲ ಸೌಲಭ್ಯ ಕರ			110.00
	(ಆ) ಇತರೆ	-186.00	0.00	120.00
	(ii) ಕೇಂದ್ರದಿಂದ ಪರ್ಯಾಯ ವರ್ಗಾವಣೆಯ ವಿಧಾನ (ಟಿಎಫ್‌ಸಿ)			100.00
ಎಫ್.	ಒಟ್ಟು ಹೆಚ್ಚುವರಿ / ಕೊರತೆ	-96.85	-104.30	-196.62

ಅನುಬಂಧ - I

1998-99ನೇ ಸಾಲಿನ ವಿಭಾಗವಾರು ರಾಜ್ಯ ಯೋಜನಾ ಹಂಚಿಕೆ

ವಿಭಾಗ	ಕೋಟಿ ರೂ.ಗಳಲ್ಲಿ	ಶೇಕಡಾ ಪ್ರಮಾಣ
ಎ. ಆರ್ಥಿಕ ಸೇವೆಗಳು		
ಕೃಷಿ ಮತ್ತು ಸಂಬಂಧಪಟ್ಟ ಸೇವೆ	268.31	5.01
ಗ್ರಾಮೀಣ ಅಭಿವೃದ್ಧಿ	253.40	4.73
ವಿಶೇಷ ಪ್ರದೇಶ ಯೋಜನೆ (ಹೈದರಾಬಾದ್-ಕರ್ನಾಟಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ)	109.00	2.04
ನೀರಾವರಿ ಮತ್ತು ಪ್ರವಾಹ ನಿಯಂತ್ರಣ	1629.06	30.43
ಶಕ್ತಿ ಮೂಲಗಳು	869.94	16.25
ಕೈಗಾರಿಕೆ ಮತ್ತು ಖನಿಜಗಳು	146.69	2.74
ಸಾರಿಗೆ	343.17	6.41
ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ	5.13	0.10
ಸಾಮಾನ್ಯ ಆರ್ಥಿಕ ಸೇವೆಗಳು	125.29	2.34
ಬಿ. ಸಮಾಜ ಸೇವೆಗಳು		
ಶಿಕ್ಷಣ, ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿ	330.39	6.17
ಆರೋಗ್ಯ	195.44	3.65
ನೀರು ಸರಬರಾಜು ಮತ್ತು ನೈರ್ಮಲ್ಯ	432.14	8.07
ವಸತಿ ಮತ್ತು ನಗರಾಭಿವೃದ್ಧಿ	330.39	6.17
ವಾರ್ತಾ ಮತ್ತು ಪ್ರಚಾರ	4.00	0.07
ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ	162.10	3.03
ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ	85.60	1.60
ಕಾರ್ಮಿಕ ಮತ್ತು ಉದ್ಯೋಗ	13.35	0.26
ಸಿ. ಸಾಮಾನ್ಯ ಸೇವೆಗಳು	49.60	0.93
ಒಟ್ಟು	**5353.00**	**100.00**

ಅನುಬಂಧ - II

I. ತೆರಿಗೆ ದರಗಳ ಪರಿಷ್ಕರಣೆ

ಕ್ರಮ ಸಂಖ್ಯೆ	ವಸ್ತುಗಳ ವಿವರ	ಇರುವ ತೆರಿಗೆ ದರ (%)	ಉದ್ದೇಶಿತ ತೆರಿಗೆ ದರ (%)
1	2	3	4
	ಭಾಗ -1 (ಎರಡನೇ ಅನುಸೂಚಿಯಲ್ಲಿರುವ ಸರಕುಗಳು)		
1.	ಗೋಂದು, ಗ್ಲೂ ಮತ್ತು ರೆಸಿನ್ ಸೇರಿದಂತೆ ಎಲ್ಲಾ ರೀತಿಯ ಅಂಟುಗಳು.	8	10
2.	ಏರೋಪ್ಲೇನುಗಳು, ಹೆಲಿಕ್ಯಾಪ್ಟರುಗಳು, ಜೆಟ್ ಪ್ಲೇನುಗಳು, ಗ್ಲೈಡರುಗಳು ಮತ್ತು ಎಲ್ಲಾ ಹಾರುವ ಯಂತ್ರಗಳು (ಬಲೂನುಗಳು ಬಿಟ್ಟು) ಮತ್ತು ಅದರ ಭಾಗಗಳು ಮತ್ತು ಉಪಸಾಧನಗಳು.	12	10
3.	ಏರ್ ಕೂಲರ್‌ಗಳು , ಏರ್ ಕಂಡೀಷನರ್‌ಗಳು ಮತ್ತು ಏರ್‌ಕಂಡೀಷನರ್ ಸ್ಥಾವರಗಳು, ಶೈತ್ಯಾಗಾರಗಳು ಮತ್ತು ಉಪಕರಣಗಳು, ಭಾಗಗಳು ಮತ್ತು ಉಪಸಾಧನಗಳು.	12	15
4.	ಅಲ್ಯೂಮಿನಿಯಂ ಎಂದರೆ,-		
	(i) ಅಲ್ಯೂಮಿನಿಯಂ ಸೆಮಿಸ್ (ಎಲ್ಲಾ ಗುಣಮಟ್ಟ, ಆಕಾರ ಮತ್ತು ಗಾತ್ರಗಳ ಗಟ್ಟಿಗಳು, ಹಲಗೆಗಳು ಮತ್ತು ತುಂಡುಗಳು).	8	10
	(ii) ಅಲ್ಯೂಮಿನಿಯಂ ಷೀಟುಗಳು, ಸರ್ಕಲ್ಲುಗಳು, ಹೂಪುಗಳು, ಸ್ಟ್ರಿಪ್ಪುಗಳು ಮತ್ತು ರೋಲುಗಳು.	8	10

1	2	3	4
	(iii) ಅಲ್ಯೂಮಿನಿಯಂ ಬಾರುಗಳು (ಸುರುಳಿ ಮತ್ತು ಸಲಾಕೆ ರೂಪದ ಕಂಬಿಗಳು, ದುಂಡುಗಳು, ಚೌಕಾಕೃತಿಗಳು, ಅಷ್ಟಕೋನಾಕೃತಿಗಳು, ಷಡ್ರೇಕಾಕೃತಿಗಳು).	8	10
	(iv) ಅಲ್ಯೂಮಿನಿಯಂ ಕೊಳವೆಗಳು (ದುಂಡುಗಳು ಮತ್ತು ಚೌಕಾಕೃತಿಗಳು) ಕೊಳವೆಗಳೂ ಸೇರಿದಂತೆ ಎಲ್ಲಾ ವ್ಯಾಸ ಮತ್ತು ಉದ್ದದ ಕೊಳವೆಗಳು.	8	10
	(v) ಸುತ್ತಿದ ಅಥವಾ ಉದ್ದದ ಅಲ್ಯೂಮಿನಿಯಂ ಕಂಬಿ ಸರಳುಗಳು ಮತ್ತು ತಂತಿಗಳು.	8	10
	(vi) ಅಲ್ಯೂಮಿನಿಲಯಂ ಆಕೃತಿಗಳು (ಆ್ಯಂಗಲ್ ಗಳು, ಜಾಯಿಂಟುಗಳು, ಚಾನಲುಗಳು, ಟೀಗಳು, ಷೀಟ್ಸ್ ಪೈಲಿಂಗ್ ಸೆಕ್ಷನ್ನುಗಳು, ಜೆಡ್ ಸೆಕ್ಷನ್ನುಗಳು ಅಥವಾ ಇತರ ಎಕ್ಸ್‌ಟ್ರೂಡೆಡ್ ಸೆಕ್ಷನ್ನುಗಳು).	8	10
5.	ಆರ್ಕ್ ಕಾರ್ಬನ್ನುಗಳು.	8	10
6.	ಬಂದೂಕು, ರೈಫಲ್‌ಗಳು, ರಿವಾಲ್ವರುಗಳು, ಪಿಸ್ತೂಲುಗಳು, ಮತ್ತು ಮದ್ದುಗುಂಡು ಸೇರಿದಂತೆ ಎಲ್ಲಾ ರೀತಿಯ ಶಾಸ್ತ್ರಸ್ತ್ರಗಳು.	12	15
7.	ಬ್ಯಾಟರಿಗಳು ಮತ್ತು ಅದರ ಭಾಗಗಳು ಡ್ರೈಸಲ್ ಮತ್ತು ಡ್ರೈಸೆಲ್ಲಿನ ಬ್ಯಾಟರಿಗಳು ಹೊರತಾಗಿ.	12	10
8.	ಬೇರಿಂಗ್‌ಗಳು ಎಂದರೆ ಬಾಲ್ ಅಥವಾ ರೋಲರ್ ಬೇರಿಂಗ್‌ಗಳು (ಎಲ್ಲಾ ರೀತಿಯವು).	8	10

1	2	3	4
9.	ಹಿತ್ತಾಳೆ ಎಂದರೆ,-		
	(i) ಹಿತ್ತಾಳೆ ಸರ್ಕಲ್ಲುಗಳು, ಷೀಟುಗಳು ಮತ್ತು ಸ್ಟ್ರಿಪ್ಪುಗಳು.	8	10
	(ii) ಹಿತ್ತಾಳೆಯ ಪಾತ್ರೆಗಳು (ಅಡಿಗೆ ಸಲಕರಣೆಗಳು).	8	10
	(iii) ಹಿತ್ತಾಳೆಯ ರಾಡುಗಳು, ರೌಂಡುಗಳು ಸ್ಕ್ವೇರುಗಳು ಮತ್ತು ಫ್ಲಾಟುಗಳೂ ಸೇರಿದಂತೆ ಆದರೆ (i) ಮತ್ತು (ii) ನೇ ಬಾಬುಗಳಲ್ಲಿ ಹಾಗೂ ಬೇರೆ ಎಲ್ಲಿಯೂ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ ಹಿತ್ತಾಳೆಯಲ್ಲಿ ಮಾಡಿದಂಥ ವಸ್ತುಗಳು.	8	10
10.	ಕಂಚು ಎಂದರೆ,-		
	(i) ಕಂಚಿನ ಪಾತ್ರೆಗಳು (ಅಡಿಗೆ ಸಲಕರಣೆಗಳು).	8	10
	(ii) ಕಂಚಿನ ರಾಡುಗಳು, ರೌಂಡುಗಳು, ಸ್ಕ್ವೇರುಗಳು ಮತ್ತು ಫ್ಲಾಟುಗಳೂ ಸೇರಿದಂತೆ ಆದರೆ (i) ನೇ ಬಾಬಿನಲ್ಲಿ ಹಾಗೂ ಬೇರೆ ಎಲ್ಲಿಯೂ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ ಕಂಚಿನಲ್ಲಿ ಮಾಡಿದಂಥ ವಸ್ತುಗಳು.	8	10
11.	ಬೆಣ್ಣೆ ಮತ್ತು ತುಪ್ಪ.	8	10
12.	ಎಲ್ಲಾ ವಿಧವಾದ ಕರ್ಪೂರ.	8	4
13.	ಕಾರ್ಪೆಟ್ಟುಗಳು.	12	15
14.	(i) ಕ್ಯಾಸೆಟ್ ಟೇಪ್‌ರೆಕಾರ್ಡುರುಗಳು (ಆಡಿಯೋ ಮತ್ತು ವಿಡಿಯೋ) ಮತ್ತು ಅದರ ಭಾಗಗಳು ಮತ್ತು ಉಪಸಾಧನಗಳು.	8	10

1	2	3	4
	(ii) (ಅ) ಖಾಲಿ ಆಡಿಯೋ ಮತ್ತು ವಿಡಿಯೋ ಕ್ಯಾಸೆಟ್‌ಗಳು.	8	10
	(ಆ) ಆಡಿಯೋ ಮತ್ತು ವಿಡಿಯೋ ಮುದ್ರಿತ ಕ್ಯಾಸೆಟ್‌ಗಳು.	8	10
	(ಇ) ಆಡಿಯೋ ಮತ್ತು ವಿಡಿಯೋ ಕ್ಯಾಸೆಟ್‌ಗಳ ಬಿಡಿ ಭಾಗಗಳು ಮತ್ತು ಉಪಸಾಧನಗಳು.	8	10
	(ಈ) ಆಡಿಯೋ ಮತ್ತು ವಿಡಿಯೋ ಮ್ಯಾಗ್ನಟಿಕ್ ಟೇಪುಗಳು.	8	10
	(iii) ಆಡಿಯೋ ಮತ್ತು ವಿಡಿಯೋ ಟೇಪ್ ರೆಕಾರ್ಡುಗಳ ಹೆಡ್ ಕ್ಲೀನರ್‌ಗಳು ಮತ್ತು ವಿಶೇಷವಾಗಿ ಎಲೆಕ್ಟ್ರಾನಿಕ್ ವಸ್ತುಗಳಲ್ಲಿ ಉಪಯೋಗಿಸುವ ಕೀಲೆಣ್ಣೆ.	8	10
15.	ಗಿಣ್ಣು.	8	10
16.	ಯಾವುದೇ ಇತರ ನಮೂದಿನ ಅಡಿಯಲ್ಲಿ ಬಾರದ ಚೈನಾವೇರ್, ಪೋರ್ಸಲಿನ್‌ವೇರ್, ಸ್ಟೋನ್‌ವೇರ್ ವಸ್ತುಗಳು.	12	10
17.	ಸಿಗರೇಟು ಫಿಲ್ಟರುಗಳು.	12	10
18.	ಸಿಗಾರ್ ಮತ್ತು ಸಿಗರೇಟು ಕೇಸುಗಳು, ಹೋಲ್ಡರ್‌ಗಳು ಮತ್ತು ಲೈಟರ್‌ಗಳು, ತಂಬಾಕು ಪೈಪುಗಳು.	12	10
19.	ಸಿನಿಮಾಟೋಗ್ರಾಫಿಕ್, ಫೋಟೊಗ್ರಾಫಿಕ್ ಮತ್ತಿತರ ಕ್ಯಾಮರಗಳು, ಪ್ರೊಜೆಕ್ಟರುಗಳ, ಎನ್‌ಲಾರ್ಜರುಗಳು, ಲೆನ್ಸುಗಳು ಮತ್ತು ಅಂಥ ಕ್ಯಾಮರಗಳ, ಸಿನಿಮಾಟೋಗ್ರಾಫ್ ಪ್ರೊಜೆಕ್ಟರುಗಳು ಮತ್ತು ಎನ್‌ಲಾರ್ಜರುಗಳ	8	10

1	2	3	4
	ಭಾಗಗಳು ಮತ್ತು ಉಪಸಾಧನಗಳು ಮತ್ತು ಅವುಗಳ ಜೊತೆಗೆ ಬಳಕೆಗೆ ಅಗತ್ಯವಿರುವ ಪ್ಲೇಟುಗಳು ಮತ್ತು ಬಟ್ಟೆ.		
20.	ಗಡಿಯಾರಗಳು, ಟೈಂ ಪೀಸುಗಳು ಮತ್ತು ಕೈಗಡಿಯಾರಗಳು (ಎಲ್ಲಾ ರೀತಿಯವು) ಮತ್ತು ಅವುಗಳ ಬ್ರೇಸ್‌ಲೆಟ್, ವಾಚ್ ಸ್ಟ್ರಾಪ್‌ಗಳು, ಚೈನ್‌ಗಳು ಸೇರಿ (ನೋಬಲ್ ಮೆಟಲ್‌ಗಳಿಂದ ಮಾಡಿರುವುದನ್ನು ಬಿಟ್ಟು) ಭಾಗಗಳು.	8	10
21.	ಕೋಕೋ ಕಾಯಿ, ಬೀಜ ಮತ್ತು ಪುಡಿ.	8	10
22.	(i) ಫ್ರೆಂಚ್ ಕಾಫಿ, ಕಾಫಿ ಪಾನೀಯ ಮತ್ತು ಇನ್‌ಸ್ಟಂಟ್ ಕಾಫಿ ಬಿಟ್ಟು ಕಾಫಿಪುಡಿ.	12	10
	(ii) ಇನ್‌ಸ್ಟಂಟ್ ಕಾಫಿ.	12	10
	(iii) ಫ್ರೆಂಚ್ ಕಾಫಿ.	12	10
23.	ರಬ್ಬರ್‌ಯುಕ್ತ ಕಾಯರ್ ಉತ್ಪನ್ನಗಳು.	8	10
24.	ಕನ್ಫೆಕ್ಷನರಿ ಮತ್ತು ಕೇಕುಗಳು.	12	10
25.	ಬಿಸ್ಕತ್ತುಗಳು.	8	10
26.	ನೇಯ್ದ ಪ್ಲಾಸ್ಟಿಕ್ ಚೀಲಗಳು.	4	2
27.	ಅಡುಗೆಅನಿಲ ಅನುಸೂಚಿಯಲ್ಲಿ ಬೇರೆ ಕಡೆ ನಿರ್ದಿಷ್ಟಪಡಿಸಿದವುಗಳನ್ನು ಬಿಟ್ಟು.	8	10

1	2	3	4
28.	ತಾಮ್ರ ಎಂದರೆ,-		
	(i) ತಾಮ್ರದ ಸರ್ಕಲ್ಲುಗಳು, ಷೀಟ್‌ಗಳು ಮತ್ತು ಸ್ಟ್ರಿಪ್ಪುಗಳು.	8	10
	(ii) ತಾಮ್ರದ ಪಾತ್ರೆಗಳು (ಅಡಿಗೆ ಸಲಕರಣೆ)	8	10
	(iii) ತಾಮ್ರದ ಗಟ್ಟಿಗಳು ಮತ್ತು ತಾಮ್ರದ ತಂತಿ (ಇನ್ಸುಲೇಟೆಡ್ ತಂತಿಗಳನ್ನು ಬಿಟ್ಟು).	8	10
	(iv) ಮೇಲಿನ (i) ರಿಂದ (iii) ನೇ ಬಾಬುಗಳಲ್ಲಿ ನಿರ್ದಿಷ್ಟಪಡಿಸಿದವುಗಳನ್ನು ಮತ್ತು ಬೇರೆ ಕಡೆ ನಿರ್ದಿಷ್ಟಪಡಿಸಿದವುಗಳನ್ನು ಬಿಟ್ಟು ತಾಮ್ರದ ಸಲಾಕಿಗಳು, ಗುಂಡುಗಳು, ಚೌಕಗಳು ಮತ್ತು ಚಪ್ಪಟೆಗಳೂ ಸೇರಿ ತಾಮ್ರದ ವಸ್ತುಗಳು.	8	10
29.	ಕ್ರಾಕರಿ, ಕಟ್ಲರಿ, ಮೇಜು ಮತ್ತು ಗೃಹಉಪಯೋಗಿ ಗಾಜಿನ ವಸ್ತುಗಳು.	12	10
30.	ಯಾವುದೇ ಇತರ ನಮೂದಿನ ಅಡಿಯಲ್ಲಿ ಬಾರದ. ದುರ್ಗಂಧ ನಿವಾರಕಗಳು, ಸೋಂಕು ನಿವಾರಕಗಳು, ಜೀವಾಣು ನಿಶಾಕಗಳು.	12	10
31.	ಡಿಕ್ಟಾ ಫೋನುಗಳು ಮತ್ತು ಧ್ವನಿ ಮುದ್ರಣದ ಅಂಥ ಇತರ ಉಪಕರಣಗಳು ಮತ್ತು ಅದರ ಭಾಗಗಳು.	8	10
32.	ಡೀಸಲ್ ಎಂಜಿನ್‌ಗಳು ಮತ್ತು ಅದರ ಭಾಗಗಳು ಮತ್ತು ಉಪಸಾಧನಗಳು.	8	10
33.	ಡ್ರೈಸೆಲ್ಲುಗಳು ಮತ್ತು ಡ್ರೈಸೆಲ್ ಬ್ಯಾಟರಿಗಳು.	12	10
34.	ಡ್ರಗೆಟ್ಟುಗಳು ಮತ್ತು ಡರ್ರಿಗಳು.	8	10

1	2	3	4
35.	ಎಲೆಕ್ಟ್ರಿಕಲ್ ವಸ್ತುಗಳು ಎಂದರೆ,-		
	(i) ಗ್ರೈಂಡರುಗಳು, ಮಿಕ್ಸರುಗಳು, ಬ್ಲೆಂಡರ್‌ಗಳು, ಹೇರ್ ಡ್ರೈಯರ್‌ಗಳು, ಷೇವರ್‌ಗಳು, ವಾಶಿಂಗ್ ಮಿಷಿನ್‌ಗಳು, ಹೀಟರ್‌ಗಳು, ಕುಕಿಂಗ್ ರೇಜ್‌ಗಳು, ಬಾಯ್ಲರ್‌ಗಳು, ಓವನ್‌ಗಳು, ಹಾಟ್ ಪ್ಲೇಟುಗಳು, ಕಾಯಿಲ್ ಸ್ಟವ್‌ಗಳು, ಗೀಸರ್‌ಗಳು, ವ್ಯಾಕ್ಯೂಮ್ ಕ್ಲೀನರ್‌ಗಳು, ಫ್ಲೋರ್ ಪಾಲಿಷರ್‌ಗಳು, ಜ್ಯೂಸ್ ಎಕ್ಸಟ್ರಾಕ್ಟರ್‌ಗಳು, ಕ್ರೀಮ್ ವಿಪ್ಪರ್‌ಗಳು, ಎಗ್‌ಬೀಟರ್‌ಗಳು, ಐರ್‍ನರ್‌ಗಳು, ಮಸಾಜ್ ಅಪರೇಟಸ್‌ಗಳು, ಕೆಟಲ್‌ಗಳು, ಸಾಸ್‌ಪ್ಯಾನುಗಳು, ಸ್ಟೀಮರ್‌ಗಳು, ಕಾಫಿ ಮೇಕರರ್‌ಗಳು, ಕುಕ್ಕರ್‌ಗಳು, ಎಗ್ ಬಾಯ್ಲರ್‌ಗಳು, ಡ್ರೈಯಿಂಗ್ ಪ್ಯಾನುಗಳು, ಟೋಸ್ಟರುಗಳು, ಕಾಫಿ ಬೀಜ ಹುರಿಯುವ ಯಂತ್ರಗಳು, ರೂಮ್ ಹೀಟರ್‌ಗಳು ಮತ್ತು ಐಸ್ ಕ್ರೀಮ್ ಚರ್ನರ್‌ಗಳು ಮತ್ತು ಅಂಥ ವಸ್ತುಗಳ ಭಾಗಗಳು ಮತ್ತು ಉಪಸಾಧನಗಳು.	12	10
	(ii) ಎಲೆಕ್ಟ್ರಿಕಲ್ ಅರ್ತನವೇರ್ ಮತ್ತು ಪೋರ್ಸಲಿನ್.	12	10
	(iii) ಎಲೆಕ್ಟ್ರಿಕಲ್ ವಸ್ತುಗಳು, ಸಾಧನಗಳು, ಉಪಕರಣಗಳು ಮತ್ತು ಉಪಸಾಮಗ್ರಿಗಳು (ಮೇಲಿನ (i)ನೇ ಬಾಬಿನ ಅಡಿಯಲ್ಲಿ ಬರುವ ಉಪಸಾಮಗ್ರಿಗಳಿಗೆ ಹೊರತಾದ) ಆದರೆ ಫ್ಯಾನುಗಳು ಮತ್ತು ಟ್ಯೂಬ್‌ಲೈಟುಗಳು ಮತ್ತು ಭಾಗಗಳು ಮತ್ತು ಉಪಸಾಧನಗಳನ್ನು ಒಳಗೊಂಡು.	12	10
	(iv) ಎಲೆಕ್ಟ್ರಿಕಲ್ ಬಲ್ಬುಗಳು.	8	4

1	2	3	4
36.	ಎಲೆಕ್ಟ್ರೋಡುಗಳು, ಎಂದರೆ, ಎಲ್ಲಾ ಬಗೆಯ ವೆಲ್ಡಿಂಗ್ ಎಲೆಕ್ಟ್ರೋಡುಗಳು, ಆನೋಡ್‌ಗಳು, ವೆಲ್ಡಿಂಗ್ ರಾಡ್‌ಗಳು ಸಾಲ್ಡರಿಂಗ್ ರಾಡ್‌ಗಳು ಮತ್ತು ಸಾಲ್ಡರಿಂಗ್ ವೈರುಗಳು ಸೇರಿ ಗ್ರಾಫೈಟ್ ಎಲೆಕ್ಟ್ರೋಡುಗಳು.	8	10
37.	ಈ ಅನುಸೂಚಿಯ ಯಾವುದೇ ಇತರ ನಮೂದಿನ ಅಡಿಯಲ್ಲಿ ಬರುವ ವಸ್ತುಗಳನ್ನು ಬಿಟ್ಟು ಎಲೆಕ್ಟ್ರಾನಿಕ್ ವಸ್ತುಗಳು ಮತ್ತು ಅವುಗಳ ಭಾಗಗಳು ಮತ್ತು ಉಪಸಾಧನಗಳು.	8	10
38.	ಫೈಬರ್ ಗ್ಲಾಸಿನ ಶೀಟುಗಳು ಮತ್ತು ಹೆಲ್‌ಮೆಟ್‌ಗಳನ್ನು ಬಿಟ್ಟು ಫೈಬರ್ ಗ್ಲಾಸಿನ ವಸ್ತುಗಳು.	12	10
39.	ಬೇರೆಡೆ ನಿರ್ದಿಷ್ಟಪಡಿಸಿದವುಗಳನ್ನು ಬಿಟ್ಟು ಅಗ್ನಿಶಾಮಕ ಉಪಕರಣಗಳು ಮತ್ತು ಸಾಧನಗಳು.	8	10
40.	ಸೌದೆ (ಮನೆಬಳಕೆಗೆ ಹೊರತುಪಡಿಸಿ).	4	10
41.	ಪಟಾಕಿ ವಸ್ತುಗಳು.	8	10
42.	ಫೋಮ್ ರಬ್ಬರ್, ಪ್ಲಾಸಿಕ್ಸ್ ಫೋಮ್ ಅಥವಾ ಯಾವುದೇ ಇತರ ಸಿಂಥೆಟಿಕ್ ಫೋಮ್ ವಸ್ತುಗಳು ಅಂದರೆ ಷೀಟುಗಳು, ಕುಷನ್‌ಗಳು, ಪಿಲ್ಲೋಗಳು, ಮ್ಯಾಟ್ರಸ್‌ಗಳು, ಮುಂತಾದವು.	12	10
43.	ತೋಟ ಮತ್ತು ಕಡಲ ತೀರದಲ್ಲಿ ಬಳಸುವ ಕೊಡೆಗಳು ಮತ್ತು ಅವುಗಳ ಭಾಗಗಳು.	8	10
44.	ಆಹಾರ ಮತ್ತು ಮದ್ಯಸಾರೇತರ ಪಾನೀಯಗಳು, ಎಂದರೆ,-		
	(1) ಸೇವನೆಗೆ ಸಿದ್ಧವಾದ ಆಹಾರ, ಸಂಸ್ಕರಿತ ಆಹಾರ, ಅರೆಬೆಂದ ಅಥವಾ ಅರೆಸಂಸ್ಕರಿತ	8	10

1	2	3	4
	ಆಹಾರ ಪದಾರ್ಥಗಳು, ಹಣ್ಣುಗಳು, (ಬಾದಾಮಿ, ವಾಲ್‌ನಟ್‌ಗಳು ಮತ್ತು ಪಿಸ್ತಾ ಸಹಿತ ಒಣ ಹಣ್ಣುಗಳನ್ನು ಬಿಟ್ಟು) ಒಣಗಿದ ತರಕಾರಿಗಳು (ಬೇಯಿಸಿದ ಅಥವಾ ಬೇಯಿಸಿಲ್ಲದ), ಹಣ್ಣುಗಳು ಮತ್ತು ತರಕಾರಿ ಉತ್ಪನ್ನಗಳು (ಈ ಕೆಳಗಿನ (ii) (iii) ಮತ್ತು (iv)ನೇ ಬಾಬುಗಳ ಅಡಿಯಲ್ಲಿ ಬರುವ ಉತ್ಪನ್ನಗಳನ್ನು ಬಿಟ್ಟು) ಡಬ್ಬಿಗಳು, ಕ್ಯಾನುಗಳು, ಶೀಷೆಗಳು ಅಥವಾ ಯಾವುದೇ ಇತರ ರೀತಿಯ ಮೊಹರಾದ ಧಾರಕಗಳಲ್ಲಿ ಮಾರುವಾಗ.		
	(ii) ರುಚಿಗೊಳಿಸಿದ ಸಿಹಿಗೊಳಿಸಿದ ಅಥವಾ ಇಲ್ಲದ ಮತ್ತು ತರಕಾರಿ ಅಥವಾ ಹಣ್ಣಿನ ರಸಾ ಅಥವಾ ಹಣ್ಣಿನ ತಿರುಳು ಒಳಗೊಂಡಿರುವ ಅಥವಾ ಒಳಗೊಂಡಿರದ ಆದರೆ ಸೌಮ್ಯ ಪಾನೀಯಗಳ ಹೊರತುಪಡಿಸಿ ಇಂಗಾಲಾಮ್ಲ ಕಾನ್ಸಂಟ್ರೇಟ್ ಗಳನ್ನು ಮಿಶ್ರಿತ ನೀರನ್ನು ಶಿಷೇಗಳಲ್ಲಿ, ಟಿನ್ ಗಳಲ್ಲಿ ಅಥವಾ ಯಾವುದೇ ರೀತಿಯ ಮೊಹರು ಮಾಡಿದ ಧಾರಕಗಳಲ್ಲಿ ಮಾರಾಟ ಮಾಡಿದಾಗ.	12	10
	(iii) ಇನ್‌ಸ್ಟೆಂಟ್ ಮಿಕ್ಸ್, ಎಂದರೆ ಜಾಮೂನ್ ಮಿಕ್ಸ್, ಇಡ್ಲಿ ಮಿಕ್ಸ್, ಐಸ್‌ಕ್ರೀಮ್ ಮಿಕ್ಸ್, ಜೆಲ್ಲಿ ಮಿಕ್ಸ್, ಮುಂತಾದವು, ಸಾಂಬಾರ್ ಮತ್ತು ರಸಮ್ ಪುಡಿ ಮತ್ತು ಗೊಜ್ಜು, ಮಸಾಲೆ ಪುಡಿ ಮತ್ತು ಗೊಜ್ಜು, ಸಾರಿನ ಪುಡಿ, ಮುಂತಾದವು; ದ್ರವ ಅಥವಾ ಪುಡಿ ಅಥವಾ ಹರಳಿನ ರೂಪದಲ್ಲಿರುವಂಥ ಸೌಮ್ಯ ಪಾನೀಯಗಳು (ಹಣ್ಣು ಮತ್ತು ತರಕಾರಿ ಪಾನೀಯಗಳನ್ನು ಹೊರತುಪಡಿಸಿ).	8	10

1	2	3	4
	(iv) ಸಿಹಿತಿಂಡಿಗಳು ಮತ್ತು ಸಿಹಿ ಮಿಠಾಯಿಗಳೂ ಸೇರಿ ಆದರೆ ಮೇಲಿನ (i) ರಿಂದ (iv) ನೇ ಬಾಬುಗಳಲ್ಲಿ ಬರುವ ಮತ್ತು ಈ ಅನುಸೂಚಿಯಲ್ಲಿ ಯಾವುದೇ ನಮೂದಿನಲ್ಲಿ ಬರುವಂತಹವುಗಳನ್ನು ಹೊರತುಪಡಿಸಿ ಆಹಾರ ಪದಾರ್ಥಗಳು ಮತ್ತು ಪಾನೀಯಗಳನ್ನು ಮಾರಾಟ ಮಾಡಿದಾಗ (ಭಾರತ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಮನ್ನಣೆ ನೀಡಿದ ತ್ರೀಸ್ಟಾರ್, ಫೋರ್ ಸ್ಟಾರ್, ಫೈವ್ ಸ್ಟಾರ್ ಹೋಟಲುಗಳನ್ನು ಹೊರತುಪಡಿಸಿ).	8	10
	(v) ಸೋಯಮಿಲ್ಕ್.	8	10
45.	ಆಹಾರ ಸುರಕ್ಷಾ ವಸ್ತುಗಳು, ಅಡಿಗೆ ಬಣ್ಣಗಳು ಮತ್ತು ಆಹಾರ ಸುವಾಸನೆಗೊಳಿಸುವ ಎಸೆನ್ಸುಗಳು.	8	10
46.	(i) ಬ್ರಾಂಡ್ ಹೆಸರಿನಲ್ಲಿ ಮಾಡುವ ಪಾದರಕ್ಷೆಗಳು.	8	10
	(ii) ಮೇಲೆ ನಮೂದಿತ (i) ರ ಅಡಿಯಲ್ಲಿ ಬಾರದ ಪಾದರಕ್ಷೆಗಳು.	4	10
47.	ಪಾದರಕ್ಷೆ ಪಾಲಿಶ್‌ಗಳು.	8	10
48.	ಫರನೇಸ್ ಎಣ್ಣೆ, ಟ್ರಾನ್ಸ್‌ಫಾರ್ಮರ್ ಎಣ್ಣೆ ಮತ್ತು ಕೂಲೆಂಟುಗಳು.	12	10
49.	ಎಲ್ಲಾ ಬಗೆಯ ಪೀಠೋಪಕರಣಗಳು, ತಿಜೋರಿ ಮತ್ತು ಅದರ ಬಿಡಿ ಭಾಗಗಳನ್ನು ಮತ್ತು ಉಪಸಾಧನಗಳನ್ನು ಒಳಗೊಂಡಂತೆ.	8	10

1	2	3	4
50.	ತುಪ್ಪಳ ಮತ್ತು ತೊಗಲುಗಳು (ನಾಲ್ಕನೇ ಅನುಸೂಚಿಯಲ್ಲಿ ಬರುವುವುಗಳನ್ನು ಹೊರತುಪಡಿಸಿ) ಮತ್ತು ಅವುಗಳಿಂದ ತಯಾರಿಸಿದ ವಸ್ತುಗಳು, ಆದರೆ ಯಾವುದೇ ಇತರ ನಮೂದಿನಲ್ಲಿ ಬರುವವುಗಳನ್ನು ಹೊರತುಪಡಿಸಿ.	12	10
51.	ಫ್ಯಾಕ್ಸ್ ಯಂತ್ರಗಳು ಮತ್ತು ಅವುಗಳ ಉಪಸಾಧನಗಳು ಮತ್ತು ಭಾಗಗಳು.	8	10
52.	ಸತುಲೇಪಿತ ಕಬ್ಬಿಣದ ಬಕೆಟ್‌ಗಳು.	8	10
53.	ಗಾಜಿನ ಶೀಟ್‌ಗಳು, ಗಾಜಿನಿಂದ ಮಾಡಿದ ಎಲ್ಲಾ ವಸ್ತುಗಳು, ಆದರೆ ಗಾಜಿನ ಶೀಷೆಗಳು, ಮೇಜು ಮತ್ತು ಗೃಹೋಪಯೋಗಿ ಗಾಜಿನ ವಸ್ತುಗಳನ್ನು ಹೊರತು ಪಡಿಸಿ.	12	10
54.	ಗ್ಲಿಸರಿನ್.	8	10
55.	ಪ್ರತಿಯೊಂದು ವಿವರಣೆಯ ಗ್ರಾಮಫೋನ್ (ರೇಡಿಯೋ ಗ್ರಾಮಫೋನ್‌ಗಳು ಸೇರಿದಂತೆ) ಅದರ ಉಪಸಾಧನಗಳು ಮತ್ತು ಭಾಗಗಳು ಸೇರಿ.	8	10
56.	ಗ್ರಾಮಫೋನಿನ ರೆಕಾರ್ಡ್‌ಗಳು, ಕಾಂಪ್ಯಾಕ್ಟ್ ಡಿಸ್ಕ್‌ಗಳು ಮತ್ತು ಗ್ರಾಮಫೋನ್ ಸೂಜಿಗಳು.	8	10
57.	ಕಬ್ಬಿಣದ ವಸ್ತುಗಳು, ಎಂದರೆ,-		
	(i) ಬೋಲ್ಟ್‌ಗಳು, ಬೋಲ್ಟೆಂಡ್‌ಗಳು, ರಿವೆಟ್‌ಗಳು, ನಟ್ಟುಗಳು, ಹಿಂಜುಗಳು, ಸ್ಕ್ರೂಗಳು, ಸ್ಕ್ರೂಹುಕ್‌ಗಳು, ವೀಲ್‌ಗಳು, ಬ್ಲಾಕ್‌ಗಳು, ಕ್ಲಾಂಪ್‌ಗಳು, ಗನ್ ಮೆಟಲ್ ಫಿಟ್ಟಿಂಗ್‌ಗಳು, ಕರ್ಟನ್ ರಾಡ್‌ಗಳು,	8	10

1	2	3	4
	ಗ್ರೈಂಡಿಂಗ್ ಸ್ಟೋನ್‌ಗಳು, ಎಲ್ಲಾ ವಿಧವಾದ ಬೀಗ ಮತ್ತು ಪ್ಯಾಡ್ ಲಾಕ್‌ಗಳು, ವಾಷರ್ ಗಳು, ಪ್ಯಾನಲ್‌ಪಿನ್‌ಗಳು, ಗ್ಲಾಸ್‌ವುಲ್, ಸ್ಟೀಲ್‌ವುಲ್, ಅಬ್ರೆಸೀವ್‌ಗಳು, ಮೊಳೆಗಳು, ವೈರ್ ಮೊಳೆಗಳು ಮೂಲಲೋಹ ಮತ್ತು ಮಿಶ್ರಲೋಹಗಳಿಂದ ತಯಾರಾದವುಗಳು.		
	(ii) ಇತರೆ ಕಡೆ ನಿರ್ದಿಷ್ಟಪಡಿಸಿದವುಗಳನ್ನು ಬಿಟ್ಟು (ಮೂಲ ಲೋಹ ಅಥವಾ ಮಿಶ್ರ ಲೋಹ ದಿಂದ ಮಾಡಿದ) ಬಾಗಿಲುಗಳು, ಕಿಟಕಿಗಳು ಮತ್ತು ಪೀಠೋಪಕರಣಗಳ ಜೋಡಣೆಗಳು.	8	10
	(iii) ಮೆಟಾಲಿಕ್ ಬಾರ್ಬ್‌ಡ್‌ವೈರ್, ವೈರ್‌ಮೆಶ್, ಪ್ಲಾಸ್ಟರ್‌ಮೆಶ್‌ಗಳು ಮತ್ತು ಮೆಟಾಲಿಕ್‌ವೈರ್ ನೆಟ್ಟಿಂಗ್ಸ್.	8	10
	(v) ಪೇಂಟ್ ಬ್ರಶ್‌ಗಳು.	8	10
58.	ಐಸ್, ಐಸ್ ಫ್ರೂಟ್, ಐಸ್ ಕ್ಯಾಂಡಿ ಮತ್ತು ಎಲ್ಲಾ ವಿಧದ ಐಸ್ ಕ್ರೀಮುಗಳು.	8	10
59.	ಕೈಗಾರಿಕಾ ಗ್ಯಾಸ್ ಎಂದರೆ ಆಮ್ಲಜನಕ, ಅಸಿಟಲಿನ್, ನೈಟ್ರೋಜಿನ್ ಮುಂತಾದವು.	12	10
60.	ಎಲ್ಲಾ ಬಗೆಯ ಇಂಕ್‌ಗಳು.	8	10
61.	ದಂತ ಹಾಗೂ ಗಂಧದ ಮರದ ವಸ್ತುಗಳು.	8	4
62.	ಸೆಣಬು ಸೇರಿದ ಪಾಲಿಪ್ರೊಪಲೀನ್ ಹೊದಿಕೆ ವಸ್ತುಗಳು.	12	10
63.	ಪಡಿತರ ವ್ಯವಸ್ಥೆಗೆ ಒಳಪಡದ ಸೀಮೆಎಣ್ಣೆ.	8	10

1	2	3	4
64.	ಅಡುಗೆಗೆ ಹಾಗೂ ಬಡಿಸಲು ಉಪಯೋಗಿಸುವ ಶಾಖನಿರೋಧಕ ಲೇಪನದ ಅಡುಗೆ ಪಾತ್ರೆಗಳು.	8	10
65.	ಅಲ್ಯೂಮಿನಿಯಂ ಅಥವಾ ಕಬ್ಬಿಣೇತರ ಲೋಹಗಳಿಂದ ಮಾಡಿದ ಮತ್ತು ಅಂಟು ನಿರೋಧಕ ಲೇಪನದ ಅಡುಗೆ ಪಾತ್ರೆಗಳು.	8	10
66.	ಲ್ಯಾಮೀನೇಟೆಡ್, ಇಂಪ್ರೆಗ್ನೇಟೆಡ್ ಅಥವಾ ಲೇಪಿತ ಹಾಸುಗಳು ಎಂದರೆ ಸಾಮಾನ್ಯವಾಗಿ ನೆಲದ ಮೇಲೆ ಹಾಸಲು ಬಳಸಲಾಗುವ ಲಿನೋಲಿಯಂ, ಪಿವಿಸಿ (ವಿನೈಲ್) ವಸ್ತುಗಳು ಸೇರಿದಂತೆ (ನೆಲದ ಟೈಲ್‌ಗಳ ಹೊರತಾಗಿ).	12	10
67.	ಐದನೇ ಅನುಸೂಚಿಯ ಕ್ರಮಸಂಖ್ಯೆ 28ರಲ್ಲಿ ಬರುವ ಮತ್ತು ಬೇರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ ಚರ್ಮದ ವಸ್ತುಗಳು.	8	10
68.	ವಿದ್ಯುಚ್ಛಕ್ತಿಯಿಂದ ಅಥವಾ ಹೈಡ್ರಾಲಿಕ್ ಶಕ್ತಿಯಿಂದ ನಡೆಸಲಾಗುವ ಲಿಫ್ಟ್‌ಗಳು.	12	15
69.	(i) ಅರ್ತ್‌ಮೂವರ್‌ಗಳ ಭಾಗಗಳು ಮತ್ತು ಉಪ ಸಾಧನಗಳು (ಡೀಜಲ್ ಎಂಜಿನ್ ಮತ್ತು ಅದರ ಭಾಗಗಳು, ಬ್ಯಾಟರಿಗಳು ಮತ್ತು ಟೈರುಗಳು, ಟ್ಯೂಬ್‌ಗಳು ಮತ್ತು ಫ್ಲಾಪ್‌ಗಳ ಹೊರತಾಗಿ).	8	10
	(ii) ಎಲ್ಲಾ ಬಗೆಯ ಯಂತ್ರೋಪಕರಣಗಳು ಮತ್ತು ಅವುಗಳ ಭಾಗಗಳು ಹಾಗೂ ಉಪಸಾಧನಗಳು ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತು ಪಡಿಸಿ.	8	10

1	2	3	4
	(iii) ಹೊಲಿಗೆ ಯಂತ್ರಗಳು ಮತ್ತು ಅವುಗಳ ಭಾಗಗಳು ಹಾಗೂ ಉಪಸಾಧನಗಳು.	8	10
	(iv) ಎಲ್ಲಾ ಬಗೆಯ ತೂಕದ ಯಂತ್ರಗಳು.	8	10
70.	ಮಾರ್ಬಲ್ ಸ್ಲ್ಯಾಬ್‌ಗಳು ಮತ್ತು ಮಾರ್ಬಲ್‌ನಿಂದ ಮಾಡಿದ ವಸ್ತುಗಳು.	12	15
71.	ಮೆಡಿಸಿನಲ್ ಮತ್ತು ಫಾರ್ಮಾಸ್ಯೂಟಿಕಲ್ ತಯಾರಿಕೆಗಳು (ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ).	8	10
72.	ಪಾದರಸ.	8	10
73.	ಲೋಹದ ಕ್ಯಾಪ್‌ಗಳು, ದೀಪದ ಲೋಹದ ಕ್ಯಾಪ್‌ಗಳನ್ನು ಹೊರತುಪಡಿಸಿ.	8	10
74.	ದೀಪದ ಲೋಹದ ಕ್ಯಾಪ್‌ಗಳು.	12	10
75.	ಮೊಹರು ಮಾಡಿದ ಧಾರಕುಗಳು ಅಥವಾ ಸ್ಯಾಚೆಟ್‌ಗಳಲ್ಲಿ ಮಾರಲ್ಪಡುವ ಖನಿಜ ಜಲ, ಡಿಸ್ಟಿಲ್ಡ್ ಜಲ ಮತ್ತು ಇನ್ನಾವುದೇ ಸಂಸ್ಕರಿಸಿದ ನೀರು.	12	10
76.	ಕಾಕಂಬಿ.	12	10
77.	ಸೊಳ್ಳೆನಿವಾರಕಗಳು, ಸಾಧನಗಳು ಮತ್ತು ಭಾಗ ಮತ್ತು ಉಪ ಭಾಗಗಳು.	8	4
78.	ಮೋಟಾರ್ ವಾಹನಗಳು, ಎಂದರೆ,-		
	(i) ಮೋಟಾರ್ ಕಾರುಗಳು, ಮೋಟಾರ್ ಟ್ಯಾಕ್ಸಿ ಕ್ಯಾಬ್‌ಗಳು ಸೇರಿ.	8	10

1	2	3	4
	(ii) ಮೋಟಾರ್ ಸೈಕಲ್‌ಗಳು, ಮೋಟಾರ್ ಸ್ಕೂಟರ್‌ಗಳು ಮೋಟಾರೆಟ್‌ಗಳು, ಮೊಪೆಡ್‌ಗಳು ಮತ್ತು ಸೈಕಲ್ ಜೋಡಣೆಗಳು ಸೇರಿ.	8	10
	(iii) ಪೆಟ್ರೋಲ್‌ನಿಂದ ಓಡಿಸುವಂಥ ಎಲ್ಲಾ ಜೀಪ್‌ಗಳು, ಟ್ರೆಕ್ಕರ್‌ಗಳು ವ್ಯಾನುಗಳು.	8	10
	(iv) ಲಘು ಡೀಸೆಲ್ ವಾಹನಗಳು.	8	10
	(v) ಮೋಟಾರ್ ಲಾರಿಗಳು, ಮೋಟಾರು ಆಮ್ನಿ ಬಸ್‌ಗಳೂ ಸೇರಿ.	8	10
	(vi) ಮೇಲಿನ ಬಾಬುಗಳಲ್ಲಿ ಬಾರದ ಯಾವುದೇ ಇತರ ಮೋಟಾರು ವಾಹನ (ಆಟೋರಿಕ್ಷಾಗಳನ್ನು ಹೊರತುಪಡಿಸಿ).	8	10
	79. ಮೋಟಾರ್ ವಾಹನಗಳ ಭಾಗಗಳು ಮತ್ತು ಉಪ ಸಾಧನಗಳು, ಎಂದರೆ,-		
	(i) ಸಾಮಾನ್ಯವಾಗಿ ಮೋಟಾರು ವಾಹನಗಳ ಭಾಗಗಳು ಮತ್ತು ಉಪಸಾಧನಗಳಾಗಿ ಬಳಸುವ ವಸ್ತುಗಳು, ಆದರೆ ರಬ್ಬರ್ ಮತ್ತು ಇತರ ಟೈರುಗಳು, ಟ್ಯೂಬ್‌ಗಳು ಮತ್ತು ಫ್ಲಾಪ್‌ಗಳು, ಬ್ಯಾಟರಿಗಳು ಮತ್ತು ಡೀಸಲ್ ಎಂಜಿನ್ ಮತ್ತು ಅದರ ಭಾಗಗಳನ್ನು ಹೊರತುಪಡಿಸಿ.	8	10
	(ii) ಮೋಟಾರು ವಾಹನಗಳ ಛಾಸಿಗಳ ಮೇಲೆ ಕಟ್ಟಿದ ಬಾಡಿಗೆಗಳು.	8	10

1	2	3	4
80.	ಚಾಕ್ಷುಷ ವಸ್ತುಗಳು ಎಂದರೆ,-		
	(i) ಬೈನಾಕುಲರ್‌ಗಳು, ಓಪೆರ ಗ್ಲಾಸ್‌ಗಳು, ಟೆಲಿಸ್ಕೋಪ್‌ಗಳು, ಮೈಕ್ರೋಸ್ಕೋಪ್‌ಗಳು, ಮತ್ತು ಅವುಗಳ ಭಾಗಗಳು ಮತ್ತು ಉಪಸಾಧನಗಳು.	8	10
	(ii) ಕನ್ನಡಕಗಳು, ಸನ್‌ಗ್ಲಾಸ್‌ಗಳು, ಲೆನ್ಸುಗಳು ಮತ್ತು ಫ್ರೇಮುಗಳು, ಅವುಗಳ ಜೋಡಣೆಗಳ, ಭಾಗಗಳು ಮತ್ತು ಉಪಸಾಧನಗಳು ಸೇರಿ.	8	10
81.	(i) ಪೇಂಟುಗಳು, ವರ್ಣಗಳು, ವಾರ್ನಿಷ್‌ಗಳು, ಪಿಗ್‌ಮೆಂಟ್‌ಗಳು, ಪಾಲಿಷ್‌ಗಳೂ, ಇಂಡಿಗೊ, ಎನಾಮೆಲ್, ಪಟ್ಟಿ, ಬೇಲ್ ಆಯಿಲ್, ಬಿಳಿ ಎಣ್ಣೆ, ಟರ್ಪೆನ್ ಟೈನ್ (ಎಲ್ಲಾ ಬಗೆಯ) ಥಿನ್ನರ್‌ಗಳು, ಪ್ರೈಮರ್‌ಗಳು ಆದರೆ (ii) ರಲ್ಲಿ ನಿರ್ದಿಷ್ಟಪಡಿಸಿದವುಗಳನ್ನು ಬಿಟ್ಟು.	12	10
	(ii) ಅಕ್ರಿಲಿಕ್ ಪೈಂಟುಗಳು ಮತ್ತು ಬಣ್ಣಗಳು, ಪ್ಲಾಸಿಕ್ಟ್ ಎಮಲ್ಷನ್ ಪೈಂಟುಗಳು ಮತ್ತು ಎಲ್ಲಾ ಬಗೆಯ ಲ್ಯಾಕ್ವರುಗಳು.	12	10
82.	ಪೆಟ್ರೋಲಿಂ ಉತ್ಪನ್ನಗಳು, ಎಂದರೆ,-		
	(i) ಬ್ರೇಕ್ ಫ್ಲೂಯಿಡ್, ಗ್ರೀಸನ್ನು ಸೇರಿದಂತೆ ಲೂಬ್ರಿಕೇಟಿಂಗ್ ಎಣ್ಣೆ ಸಾಲ್ವೆಂಟ್ ಎಣ್ಣೆ, ಪೆಟ್ರೋಲಿಯಂ ಜೆಲ್ಲಿ (ಎಲ್ಲಾ ದರ್ಜೆಯ), ನ್ಯಾಫ್ತ ಸ್ಪ್ರೇ ಆಯಿಲ್, ಮೆಥನಾಲ್, ಆಹೋಮ್ಯಾಕ್ಸ್, (ಆರೋಮ್ಯಾಟಿಕ್) ಮಸ್ಕಿಟೋ ಲಾರ್ವಿಸೈಡಲ್ ಆಯಿಲ್, ಲೋ ಸಲ್ಫರ್ ಹೆವಿ ಸ್ಟಾಕ್, ಗ್ಲಾಸ್ ಕ್ಲೀನರ್, ಬೆನ್ ಜೀನ್, ಟಾಲೀನ್, ಷಲ್ ಹೆಕ್ಸನ್, ಸ್ಪೆಷಲ್ ಬಾಯ್ಲಿಂಗ್ ಪಾಯಿಂಟ್ ಸ್ಪಿರಿಟ್.	12	10

1	2	3	4
	(ii) ಲಿಕ್ವಿಡ್ ಪೆಟ್ರೋಲಿಯಂ ಗ್ಯಾಸ್ ಎಂದರೆ ಬರ್ಷೇನ್, ಕಾಲ್ ಗ್ಯಾಸ್, ಇಂಡೇನ್ ಮುಂತಾದವು.	12	10
83.	ಪೈಪುಗಳು. ಟ್ಯೂಬುಗಳು ಮತ್ತು ಜೋಡಣೆಗಳು ಕಬ್ಬಿಣ, (ನಾಲ್ಕನೇ ಅನುಸೂಚಿಯಲ್ಲಿ ಬಾರದವು) ಸಿಮೆಂಟ್, ಕಲ್ಲು ಮತ್ತು ಆಸ್‌ಬೆಸ್ಟಾಸ್ ಇವುಗಳಿಂದ ಮಾಡಿರುವವು.	8	10
84.	ಪ್ಲಾಸಿಕ್ಟ್ ಶೀಟುಗಳು, ಪ್ಲಾಸ್ಟಿಕ್ ಗ್ರಾನ್ಯೂಲ್‌ಗಳು ಮತ್ತು ಎಲ್ಲಾ ಸ್ವರೂಪದ ಪ್ಲಾಸ್ಟಿಕ್‌ನಿಂದ ಮಾಡಲಾದ ವಸ್ತುಗಳು, ಪಾಲಿಥೀನ್, ಪಾಲಿವಿನಿಲ್ ಕ್ಲೋರೈಡ್, ಪಾಲಿಪ್ರಾಪೇಲೀನ್, ಪಾಲಿಯೆಸ್ಟರೀನ್ ಮತ್ತು ಅದೇ ಬಗೆಯ ಸಾಮಗ್ರಿಯಿಂದ ತಯಾರಿಸಿದ ವಸ್ತುಗಳೂ ಸೇರಿ ಆದರೆ 2ನೇ ಅನುಸೂಚಿಯ ಪಿ ಭಾಗದ 7ನೇ ಕ್ರಮಾಂಕದ (ii) ನೇ ಉಪಕ್ರಮಾಂಕವನ್ನು ಹೊರತುಪಡಿಸಿ.	8	10
85.	ಪ್ರತಿಯೊಂದು ಬಗೆಯ ಪ್ಲೇಯಿಂಗ್ ಕಾರ್ಡುಗಳು.	12	10
86.	ಪ್ರೆಶರ್ ಕುಕ್ಕರ್‌ಗಳು, ಅವುಗಳ ಭಾಗಗಳು ಮತ್ತು ಉಪಸಾಧನಗಳು.	8	10
87.	ಮುದ್ರಿತ ಸಾಮಗ್ರಿ, ಓದುವ ಪುಸ್ತಕಗಳನ್ನು ಹೊರತುಪಡಿಸಿ.	8	10
88.	(i) 10 ಅಶ್ವ ಶಕ್ತಿಗಿಂತ ಹೆಚ್ಚು ಇರುವ ಆಯಿಲ್ ಇಂಜಿನ್‌ಗಳ ಪಂಪುಸೆಟ್ಟುಗಳು.	8	10
	(ii) ಹತ್ತು ಅಶ್ವಶಕ್ತಿಗಿಂತ ಹೆಚ್ಚಿರುವ ವಿದ್ಯುತ್ ಶಕ್ತಿ ಮೋಟಾರುಳ್ಳ ಪಂಪ್‌ಸೆಟ್‌ಗಳು.	12	10

1	2	3	4
89.	ರೈಲ್ ಕೋಚ್‌ಗಳು ಮತ್ತು ಅದರ ಭಾಗಗಳು ಮತ್ತು ಉಪಸಾಧನಗಳು.	8	10
90.	ರೇಜರ್ ಮತ್ತು ರೇಜರ್ ಬ್ಲೇಡುಗಳು.	8	10
91.	ರಿಫ್ರಾಕ್ಟರಿ ಇಟ್ಟಿಗೆಗಳು ಮತ್ತು ಅಂತಹವುದೇ ಇಟ್ಟಿಗೆಗಳು.	12	10
92.	ರೆಫ್ರಿಜಿರೇಟರುಗಳು, ಡೀಪ್ ಫ್ರೀಸರ್‌ಗಳು, ಬಾಟಲ್ ಕೂಲರ್‌ಗಳು, ವಾಟರ್ ಕೂಲರ್‌ಗಳು ಮತ್ತು ಅಂತಹವುಗಳು ಹಾಗೂ ಅವುಗಳ ಭಾಗಗಳೂ ಸೇರಿದಂತೆ.	12	15
93.	ಕೈಯಿಂದ, ಯಂತ್ರದಿಂದ ಅಥವಾ ವಿದ್ಯುತ್‌ನಿಂದ ನಡೆಸಲಾಗುವ ರೋಲಿಂಗ್ ಶಟರ್‌ಗಳು ಮತ್ತು ಕೋಲ್ಯಾಪ್ಸಬಲ್ ಗೇಟುಗಳು ಮತ್ತು ಅವುಗಳ ಭಾಗಗಳು.	8	10
94.	ರೂಫಿಂಗ್, ಲೈಟ್‌ರೂಫಿಂಗ್ ಮತ್ತು ಫಾಲ್ಸ್ ರೂಫಿಂಗ್ ವಸ್ತುಗಳು, ಸಿಮೆಂಟ್ ಮತ್ತು ಆಸ್ ಬೆಸ್ಟಾಸ್ ಶೀಟುಗಳು, ಅಸ್ಟಾಲ್ಟ್ ಶೀಟುಗಳು, ಹಾರ್ಡ್ ಬೋರ್ಡುಗಳು, ಸಾಫ್ಟ್ ಬೋರ್ಡುಗಳು, ಪ್ಲೈವುಡ್, ವಿನಿಯರ್ಡ್ ಬೋರ್ಡುಗಳು ಮತ್ತು ಪ್ಯಾನೆಲ್‌ಗಳು ಮತ್ತು ಲ್ಯಾಮಿನೇಟಡ್ ಶೀಟುಗಳು ಸೇರಿ ಆದರೆ ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ.	12	10
95.	ರಬ್ಬರ್ ಎಂದರೆ,-		
	(i) ವಲ್ಕನೈಸ್ ಮಾಡಿದ ಅಥವಾ ಮಾಡದ ಮತ್ತು ಯಾವುದೇ ಜವಳಿ ಸಾಮಗ್ರಿಯೊಂದಿಗೆ ಸಂಯೋಜಿಸಿದ ಅಥವಾ ಸಂಯೋಜಿಸಿಲ್ಲದ, ಗಟ್ಟಿಗೊಳಿಸಿದ ರಬ್ಬರ್ ಪ್ಲೇಟುಗಳು, ಶೀಟ್ ಗಳು ಮತ್ತು ಸ್ಟ್ರಿಪ್‌ಗಳು.	8	10

1	2	3	4
	(ii) ವಲ್ಕನೈಸ್ ಮಾಡಿದ್ದು ಗಟ್ಟಿಗೊಳಿಸಿಲ್ಲದ ಪೈಪಿಂಗ್ ಮತ್ತು ಟ್ಯೂಬಿಂಗ್.	8	10
	(iii) ಯಾವುದೇ ಜವಳಿ ಸಾಮಗ್ರಿಯೊಂದಿಗೆ ಸಂಯೋಜಿಸಿದ ಅಥವಾ ಸಂಯೋಜಿಸಿಲ್ಲದ ವಲ್ಕನೈಸ್ ಮಾಡಿದ ರಬ್ಬರಿನ ಟ್ರಾನ್ಸ್‌ಮಿಷನ್, ಕನ್ವೇಯರ್ ಅಥವಾ ಎಲಿವೇಟರ್ ಬೆಲ್ಟ್‌ಗಳು ಅಥವಾ ಬೆಲ್ಟಿಂಗ್.	8	10
	(iv) ಸಿಂಥೆಟಿಕ್ ರಬ್ಬರ್, ಬೂಟಾಡೀನ್ ಸೇರಿ ಅಕ್ರಿಲೋನೈಟ್ರಿಲ್ ರಬ್ಬರ್, ಸ್ಟಿರಿಯಲ್ ಬೂಟಾಡೀನ್ ರಬ್ಬರ್ ಮತ್ತು ಬ್ಯುತೈಲ್ ರಬ್ಬರ್, ಸಿಂಥೆಟಿಕ್ ರಬ್ಬರ್ ಲೇಟೆಕ್ಸ್ ಪ್ರಿವಲ್ಕನೈಸಡ್ ಸಿಂಥೆಟಿಕ್ ರಬ್ಬರ್ ಲೇಟೆಕ್ಸ್ ಸೇರಿ.	8	10
96.	ರಬ್ಬರ್ ವಸ್ತುಗಳು, ಎಂದರೆ ಸಂಪೂರ್ಣವಾಗಿ ರಬ್ಬರ್‌ನಿಂದ ತಯಾರಿಸಿದ ವಸ್ತುಗಳು (ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ).	8	10
97.	ರಬ್ಬರ್ ಮತ್ತು ಇತರ ಟೈರುಗಳು, ಟ್ಯೂಬುಗಳು ಮತ್ತು ಫ್ಲಾಪ್‌ಗಳು ನಾಲ್ಕನೇ ಅನುಸೂಚಿಯಲ್ಲಿ ಬಾರದವುಗಳನ್ನು ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ.	8	10
98.	ಗಂಧದ ಎಣ್ಣೆ.	12	10
99.	ಪ್ರತಿಯೊಂದು ಬಗೆಯ ಸ್ಯಾನಿಟರಿ ಜೋಡಣೆಗಳು, ಕಲ್ಲು, ಸಿಮೆಂಟ್ ಮತ್ತು ಕಬ್ಬಿಣ ಹಾಗೂ ಉಕ್ಕಿನ ಪೈಪುಗಳು ಮತ್ತು ಜೋಡಣೆಗಳನ್ನು ಹೊರತುಪಡಿಸಿ.	12	10

1	2	3	4
100.	ಸ್ಯಾನಿಟರಿ ಟವಲ್‌ಗಳು, ಸ್ಯಾನಿಟರಿ ನ್ಯಾಪ್‌ಕಿನ್‌ಗಳು, ಬೆಲ್ಟ್ ರಹಿತ ನ್ಯಾಪ್‌ಕಿನ್‌ಗಳು ಮತ್ತು ಟ್ಯಾಂಪನ್‌ಗಳು.	8	10
101.	ಸುಗಂಧಿತ ಸುಪಾರಿ.	8	10
102.	ಸ್ಲಾಟೆಡ್ ಆ್ಯಂಗಲಗಳು ಮತ್ತು ಸ್ಟೀಲ್ ರ‍್ಯಾಕ್‌ಗಳು ಜೋಡಣೆಗೆ ಸಿದ್ಧ ಭಾಗಗಳು.	8	10
103.	ಸೋಪುಗಳು ಎಂದರೆ,-		
	(i) ಟಾಯ್‌ಲೆಟ್ ಸೋಪುಗಳು (ಸ್ನಾನಕ್ಕಾಗಿ ಬಳಸುವ).	12	10
	(ii) ಶಾಂಪು ದ್ರವ ಮತ್ತು ಜೆಲ್ ರೂಪದಲ್ಲಿ, ಹರ್ಬಲ್ ಮತ್ತು ಮೆಡಿಸನಲ್ ತಯಾರಿಕೆಗಳನ್ನು ಸೇರಿ.	12	10
	(iii) ಬಟ್ಟೆ ಸೋಪು, ಸೋಪು ಫ್ಲೇಕುಗಳು, ಸೋಪು ಪೌಡರ್‌ಗಳು.	8	10
	(iv) ಡಿಟರ್ಜೆಂಟ್ ಪೌಡರ್‌ಗಳು ಮತ್ತು ಬಿಲ್ಲೆಗಳು, ದ್ರವಗಳು ಮತ್ತು ಲಾಂಡ್ರಿ ಬ್ರೈಟನರ್‌ಗಳು ಸೇರಿ.	8	10
104.	ಧ್ವನಿ ಪ್ರಸಾರಣಾ ಸಾಧನ ಸಾಮಗ್ರಿಗಳು, ಲೌಡ್ ಸ್ಪೀಕರ್‌ಗಳು ಮತ್ತು ಅವುಗಳ ಭಾಗಗಳು ಸೇರಿ, ಆದರೆ ಟೆಲಿಫೋನ್ ಮತ್ತು ಅದರ ಭಾಗಗಳನ್ನು ಹೊರತುಪಡಿಸಿ.	8	10
103.	ಮದ್ಯ ಸಾರಗಳು ಮತ್ತು ಆಲ್ಕೋಹಾಲ್ ಎಂದರೆ,-		
	(i) ಡಿನೇಚರ್ಡ್ ಸ್ಪಿರಿಟ್.	12	10

1	2	3	4
	(ii) ಎಥಿಲ್ ಆಲ್ಕೋಹಾಲ್.	12	10
		12	10
106.	ಲೇಖನ ಸಾಮಗ್ರಿಗಳು ಎಂದರೆ,-		
	(i) ಲೆಕ್ಕದ ಪುಸ್ತಕಗಳು, ಪೇಪರ್ ಎನ್ವೆಲಪ್‌ಗಳು, ಡೈರಿಗಳು, ಕ್ಯಾಲೆಂಡರ್‌ಗಳು, ರೇಸ್ ಕಾರ್ಡುಗಳು, ಕ್ಯಾಟ್‌ಲಾಗುಗಳು, ಶುಭಾಶಯ ಕಾರ್ಡುಗಳು, ಆಮಂತ್ರಣ ಕಾರ್ಡುಗಳು, ವಿನೋದ ಪೋಸ್ಟ್‌ಕಾರ್ಡುಗಳು, ಚಿತ್ರಮಯ ಪೋಸ್ಟ್‌ಕಾರ್ಡುಗಳು, ವಿಶೇಷ ಸಂದರ್ಭಗಳ ಕಾರ್ಡುಗಳು, ಪೋಟೋ ಮತ್ತು ಸ್ಟಾಂಪ್ ಆಲ್ಬಂಮ್‌ಗಳು.	8	4
	(ii) ಕಛೇರಿ ಡೆಸ್ಕ್ ಸಾಮಗ್ರಿಗಳು, ಪಂಚಿಂಗ್ ಮೆಷಿನ್ ಮತ್ತು ಸ್ಟಾಪಲ್‌ರ್ ಮೇಷೀನ್‌ಗಳು ಸೇರಿದಂತೆ.	8	4
107.	ಕಲ್ಲುಗಳು ಎಂದರೆ,-		
	(i) ಗ್ರಾನೈಟ್ ಕಲ್ಲುಗಳು ಮತ್ತು ಚೂರುಗಳು-		
	(ಅ) ಪಾಲಿಷ್ ಮಾಡಿದ್ದು	12	10
	(ಆ) ಪಾಲಿಷ್ ಮಾಡಿಲ್ಲದಿರುವುದು.	12	10
	(ಇ) ಚೂರುಗಳು.	12	10
108.	ಸ್ಟೌವ್‌ಗಳು, ಎಂದರೆ, ಗ್ರಾಸ್ ಸ್ಟಾವ್‌ಗಳು ಮತ್ತು ಸೀಮೆಎಣ್ಣೆ ಸ್ಟೌವ್‌ಗಳು ಮತ್ತು ಅವುಗಳ ಭಾಗಗಳು ಮತ್ತು ಉಪಸಾಧನಗಳು.	8	10
109.	ಸೂಟ್ ಕೇಸುಗಳು, ಬ್ರೀಫ್ ಕೇಸುಗಳು, ಅಟ್ಯಾಚ್ ಕೇಸುಗಳು ಮತ್ತು ಡೆಸ್‌ಪ್ಯಾಚ್ ಕೇಸುಗಳು ಚರ್ಮದಿಂದ ಮಾಡಿದವು ಸೇರಿ, ಆದರೆ ಸ್ಟೀಲ್ ಟ್ರಂಕುಗಳನ್ನು ಬಿಟ್ಟು.	12	10

1	2	3	4
